ಬೆಂಗಳೂರು
ಬುಧವಾರ, 17 ಜೂನ್ 2026
ಸಂಪುಟ 33, ಸಂಚಿಕೆ 227, ಪುಟಗಳು 12+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



13 ರಾಜ್ಯಗಳಿಗೆ ಹೆಚ್ಚುವರಿ ಆದಾಯ | 08
ವೈದ್ಯರ ಚೀಟಿ ಇಲ್ಲದೆ ಸಿಗಲ್ಲ ಸಿರಪ್ | 08
ಭಾರತದ ಶಾಶ್ವತ ಸದಸ್ಯತ್ವಕ್ಕೆ ಬೆಂಬಲ | 08

ನೆರವು ನೀಡುವ–ಪಡೆಯುವ ಪದ್ಧತಿ ಅಂತ್ಯಕ್ಕೆ ಮೋದಿ ಸಲಹೆ

ಸಮಾನತೆ ಪಾಲುದಾರಿಕೆ



• ಎವಿಯನ್-ಲೆಸ್-ಬೈನ್ಸ್ (ಫ್ರಾನ್ಸ್): ಜಾಗತಿಕ ಸಮುದಾಯವು ಇನ್ನು ಮುಂದೆ ನೆರವು ನೀಡುವ ಮತ್ತು ಪಡೆಯುವ (ದಾನಿ-ಸ್ವೀಕೃತದಾರ) ಸಾಂಪ್ರದಾಯಿಕ ಮನಸ್ಥಿತಿಯಿಂದ ಹೊರಬರಬೇಕು. ಅದರ ಬದಲಾಗಿ ಒಗ್ಗಟ್ಟು ಮತ್ತು ಸಮಾನತೆಯ ಆಧಾರದ ಮೇಲೆ ಹೊಸ ಪಾಲುದಾರಿಕೆಯನ್ನು ಸ್ಥಾಪಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಜಿ-7 ನಾಯಕರಿಗೆ ಕರೆ ನೀಡಿದ್ದಾರೆ.

ಫ್ರಾನ್ಸ್‌ನ ಎವಿಯನ್-ಲೆಸ್-ಬೈನ್ಸ್‌ನಲ್ಲಿ ನಡೆಯುತ್ತಿರುವ ಜಿ-7 ಶೃಂಗಸಭೆಯ ಔಟ್ರೀಚ್ ಅಧಿವೇಶನದಲ್ಲಿ ಅವರು ಮಾತನಾಡಿದರು.

ಪರಸ್ಪರ ವಿಶ್ವಾಸವೇ ಮುಖ್ಯ: ಹೊಸ ಪಾಲುದಾರಿಕೆಗಳ ರಚನೆ ಮತ್ತು ಅಂತಾರಾಷ್ಟ್ರೀಯ ಒಗ್ಗಟ್ಟಿನ ಮರುನಿರ್ಮಾಣ ಎಂಬ ವಿಷಯದ ಕುರಿತಾದ ಅಧಿವೇಶನದಲ್ಲಿ ಮಾತನಾಡಿದ ಪ್ರಧಾನಿ ಮೋದಿ, ಇಂದಿನ ಪರಸ್ಪರ ಸಂಪರ್ಕಿತ ಜಗತ್ತಿನಲ್ಲಿ ಅಂತಾರಾಷ್ಟ್ರೀಯ ಪಾಲುದಾರಿಕೆಯನ್ನು ವೃದ್ಧಿಸಲು ವಿಶ್ವಾಸ ಅತ್ಯಂತ ಪ್ರಮುಖ ಕಾರ್ಯತಂತ್ರದ ಆಸ್ತಿಯಾಗಿದೆ ಎಂದರು. ಭಾರತದ ಅಂತಾರಾಷ್ಟ್ರೀಯ ದೃಷ್ಟಿಕೋನವು ವಸುಧೈವ ಕುಟುಂಬಕಂ(ಜಗತ್ತೇ ಒಂದು ಕುಟುಂಬ) ಎಂಬ ಕಾಲಾತೀತ ತತ್ತ್ವದಲ್ಲಿ ಬೇರೂರಿದೆ ಎಂದು ಅವರು ಪುನರುಚ್ಚರಿಸಿದರು.

ಅಂತಾರಾಷ್ಟ್ರೀಯ ಸೌರ ಒಕ್ಕೂಟ (ಐಎಸ್‌ಎ), ಜಾಗತಿಕ ಜೈವಿಕ ಇಂಧನ ಒಕ್ಕೂಟ ಮತ್ತು ಏಕ್ ಪೇಡ್ ಮಾ ಕೆ ನಾಮ್‌ನಂತಹ ಭಾರತದ ಉಪಕ್ರಮಗಳು ಮಾನವೀಯತೆಗೆ ಮೊದಲ ಆದ್ಯತೆ ನೀಡುವ ಧೋರಣೆಯನ್ನು ಬಿಂಬಿಸುತ್ತವೆ ಎಂದು ತಿಳಿಸಿದರು. ➡ಪುಟ 3

16 ತಿಂಗಳ ಬಳಿಕ ಮೋದಿ-ಟ್ರಂಪ್ ಭೇಟಿ

ಇದೇ ವೇಳೆ ಜಿ7 ನಾಯಕರ ಸಭೆಯ ಸಂದರ್ಭದಲ್ಲಿ ಪ್ರಧಾನಿ ಮೋದಿ ಮತ್ತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪರಸ್ಪರ ಶುಭಾಶಯ ವಿನಿಮಯ



ಮಾಡಿಕೊಂಡು ಸಂಕ್ಷಿಪ್ತ ಮಾತುಕತೆ ನಡೆಸಿದರು. ಕಳೆದ 16 ತಿಂಗಳಲ್ಲಿ ಇಬ್ಬರು ನಾಯಕರು ಮುಖಾಮುಖಿಯಾಗಿ ಭೇಟಿಯಾಗಿರುವುದು ಇದೇ ಮೊದಲು. ಉಭಯ ನಾಯಕರು ಆತ್ಮೀಯವಾಗಿ ಹಸ್ತಲಾಘವ ನಡೆಸಿದ ದೃಶ್ಯ ಗಮನ ಸೆಳೆಯಿತು. ಬುಧವಾರ ನಡೆಯಲಿರುವ ಅಧಿಕೃತ ದ್ವಿಪಕ್ಷೀಯ ಸಭೆಗೆ ಈ ಭೇಟಿ ಮುನ್ನುಡಿಯಾಗಿ ಪರಿಗಣಿಸಲಾಗಿದೆ.

ಭಾರತ-ಅಮೆರಿಕ ಸಂಬಂಧಗಳಿಗೆ ಹೊಸ ಚೈತನ್ಯ: ಇತ್ತೀಚಿನ ತಿಂಗಳುಗಳಲ್ಲಿ ಅಮೆರಿಕ ವಿಧಿಸಿದ್ದ ಸುಂಕಗಳು, ಭಾರತ-ಪಾಕಿಸ್ತಾನ ಉದ್ವಿಗ್ನತೆ ಕುರಿತು ಟ್ರಂಪ್ ಮಾಡಿದ್ದ ವಿವಾದಾತ್ಮಕ ಹೇಳಿಕೆಗಳು ಹಾಗೂ ವೀಸಾ ನೀತಿ ಬದಲಾವಣೆಗಳಿಂದ ಉಭಯ ರಾಷ್ಟ್ರಗಳ ಸಂಬಂಧಗಳಲ್ಲಿ ಕೆಲವು ಬಿಕ್ಕಟ್ಟುಗಳು ಕಂಡುಬಂದಿದ್ದವು. ➡ಪುಟ 3

ಮೋದಿ ಇದ್ದಲ್ಲಿಗೇ ಬಂದು ಅಪ್ಪಿಕೊಂಡ ಬ್ರಿಟನ್ ಪಿಎಂ

ಜಿ7 ಜಾಗತಿಕ ನಾಯಕರು ಫೋಟೋಗೆ ಪೋಸ್ ನೀಡುವ ಮುನ್ನ ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಪ್ರಧಾನಿ ಮೋದಿ ಇದ್ದಲ್ಲಿಗೇ ಬಂದು ಅಪ್ಪುಗೆ ನೀಡಿದ್ದು ವಿಶೇಷವಾಗಿತ್ತು. ತಕ್ಷಣ ಜಿ7 ಸಮ್ಮೇಳನದ ಸ್ವಯಂಸೇವಕ ಬ್ರಿಟನ್ ಪ್ರಧಾನಿಗೆ ತಮ್ಮ ಜಾಗದಲ್ಲಿ ನಿಲ್ಲುವಂತೆ ಮನವಿ ಮಾಡಿದರು. ➡ಪುಟ 3

ಉಕ್ರೇನ್‌ಗೆ ಪ್ರಾಮುಖ್ಯತೆ ನೀಡಲು ನಿರ್ಧಾರ

ಮಧ್ಯಪ್ರಾಚ್ಯ ಸಂಘರ್ಷದಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಧ್ಯಪ್ರವೇಶ ಬಳಿಕ ಉಕ್ರೇನ್ ಮೇಲಿನ ರಷ್ಯಾ ಆಕ್ರಮಣವು ಪ್ರಾಮುಖ್ಯತೆ ಕಳೆದುಕೊಂಡಿದ್ದು, ಉಕ್ರೇನ್ ಯುದ್ಧಕ್ಕೆ ಟ್ರಂಪ್ ತಮ್ಮ ಅಜೆಂಡಾದಲ್ಲಿ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕೆಂದು ಜಿ7 ಸದಸ್ಯ ರಾಷ್ಟ್ರಗಳು ಒತ್ತಾಯಿಸಿವೆ. ➡ಪುಟ 3

ಐಎಎಫ್ ಅಧಿಕಾರಿ ಪತ್ನಿ ಮೇಲೆ ಅತ್ಯಾಚಾರ

ಬಲವಂತದ ಮತಾಂತರ ಇಬ್ಬರು ಮುಸ್ಲಿಮರ ಸೆರೆ

• ನಾಗಪುರ: ಭಾರತೀಯವಾಯುಪಡೆಯ(ಐಎಎಫ್) ಅಧಿಕಾರಿಯೊಬ್ಬರ 24 ವರ್ಷದ ಪತ್ನಿಗೆ ಮತ್ತು ಬರಿಸುವ ಔಷಧ ನೀಡಿ ಅತ್ಯಾಚಾರ ಎಸಗಿ, ಬೆದರಿಕೆ ಹಾಕಿ ಬಲವಂತದಿಂದ ಮತಾಂತರಗೊಳಿಸಿರುವ ಘಟನೆ ಮಹಾರಾಷ್ಟ್ರದ ನಾಗಪುರದಲ್ಲಿ ಬೆಳಕಿಗೆ ಬಂದಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಅಯಾಜ್ ಶಾಹ್ ಮದಾರಿ ಮತ್ತು ಅಮೀನ್ ಶೇಖ್ ಎಂಬ ಇಬ್ಬರು ಆರೋಪಿಗಳನ್ನು ಬಂಧಿಸಿದ್ದು, ಮೂರನೇ ಆರೋಪಿಗಾಗಿ




ತೀವ್ರ ಹುಡುಕಾಟ ನಡೆಸಿದ್ದಾರೆ.

ವಿಡಿಯೋ ವೈರಲ್: ಈ ದಾರುಣ ಘಟನೆಗೆ ಸಂಬಂಧಿಸಿದ ವಿಡಿಯೋವೊಂದು ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿದ್ದು, ಹುಡುಗಿಗೆ ಪ್ರಮುಖ ಆಧಾರವಾಗಿದೆ. ವೈರಲ್ ವಿಡಿಯೋದಲ್ಲಿ, ಸಂತ್ರಸ್ತ ಮಹಿಳೆ ಅತ್ಯಂತ ಸಂಕಷ್ಟದ ಸ್ಥಿತಿಯಲ್ಲಿದ್ದು, ನನ್ನನ್ನು ಬಿಟ್ಟುಬಿಡಿ(ಛೋಡೋ ಮುಝೆ) ಎಂದು ಕೈಮುಗಿದು ಬೇಡಿಕೊಳ್ಳುತ್ತಿರುವುದು ಕಂಡುಬಂದಿದೆ. ಅದರ, ಮುಖ್ಯ ಆರೋಪಿ ಅಯಾಜ್ ಶಾಹ್ ಮದಾರಿ ಎಂಬಾತ ಆಕೆಯ ಕೈಯನ್ನು ಬಲವಂತವಾಗಿ ಹಿಡಿದು, ಧಾರ್ಮಿಕ ಶ್ಲೋಕಗಳನ್ನು ಪಠಿಸುತ್ತಿರುವುದು ವಿಡಿಯೋದಲ್ಲಿದೆ. ಸದ್ಯ ಪೊಲೀಸರು ಈ ಡಿಜಿಟಲ್ ಪುರಾವೆಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿದ್ದಾರೆ.

ಮಾಟ ಮಂತ್ರದ ಆರೋಪ: ಸಂತ್ರಸ್ತ ಮಹಿಳೆ ನಾಗಪುರದಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿದ್ದು, ಮುಖ್ಯ ಆರೋಪಿ ಅಯಾಜ್ ಆಕೆಯ ಕಾಲಾ ದಿನಗಳ ಸ್ನೇಹಿತನಾಗಿದ್ದ. ➡ಪುಟ 9

ಆರೋಪಿಗಳಿಗೆ 5 ದಿನ ಕಸ್ಟಡಿ

ಆರೋಪಿಗಳ ವಿರುದ್ಧ ಅತ್ಯಾಚಾರ, ಸುಲಿಗೆ, ಕ್ರಿಮಿನಲ್ ಬೆದರಿಕೆ ಹಾಗೂ ಮಹಾರಾಷ್ಟ್ರದ ಮಾಟಮಂತ್ರ ವಿರೋಧಿ ಕಾಯ್ದೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಬಂಧಿತರನ್ನು 5 ದಿನಗಳ ಪೊಲೀಸ್ ಕಸ್ಟಡಿಗೆ ಒಪ್ಪಿಸಲಾಗಿದ್ದು, ವಿಧಿವಿಜ್ಞಾನ ಮತ್ತು ಆರ್ಥಿಕ ವಹಿವಾಟುಗಳ ದಾಖಲೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಗುತ್ತಿದೆ ಎಂದು ವಲಯ ಉಪ ಪೊಲೀಸ್ ಆಯುಕ್ತ ರಿಷಿಕೇಶ್ ರೆಡ್ಡಿ ತಿಳಿಸಿದ್ದಾರೆ.



ಬಲವಂತದ ನಿಖಾ, ಮತಾಂತರ

ಮೇ 31ರಂದು ಆರೋಪಿಗಳಾದ ಅಯಾಜ್ ಮತ್ತು ಅಮೀನ್ ಶೇಖ್ ಸೇರಿ ಮಹಿಳೆಯನ್ನು ಕಲ್ಲೇಶ್ವರಕ್ಕೆ ಕರೆದೊಯ್ದಿದ್ದಾರೆ. ಅಲ್ಲಿ ಮಧ್ಯಪ್ರದೇಶದ ಹಜರತ್ ಮೌಲಾನಾ ಎಂಬಾತನ ಪರಿಚಯ ಮಾಡಿಸಿ, ಆಕೆಯ ಇಚ್ಛೆಗೆ ವಿರುದ್ಧವಾಗಿ ಧಾರ್ಮಿಕ ಆಚರಣೆಗಳನ್ನು ಮಾಡಿಸಲಾಗಿದೆ. ಅಲ್ಲಿ ಮಹಿಳೆಯಿಂದ ಬಲವಂತವಾಗಿ ಕುಬೂಲ್ ಹೈ ಎಂದು ಹೇಳಿಸಿ, ಆಕೆಯನ್ನು ಇಸ್ಲಾಂ ಮತಕ್ಕೆ ಮತಾಂತರ ಮಾಡಿ ಅಯಾಜ್ ಜತೆ ಮದುವೆ ಮಾಡಿಸಲಾಗಿದೆ ಎಂದು ಘೋಷಿಸಲಾಗಿದೆ. ಅಲ್ಲದೆ ಬಲವಂತವಾಗಿ ಮಾಂಸವನ್ನು ತಿನ್ನಿಸಲಾಗಿದೆ ಎಂದು ಮಹಿಳೆ ದೂರಿದ್ದಾರೆ.

ಮತ್ತೊಬ್ಬ ಆರೋಪಿಗಾಗಿ ಪೊಲೀಸರಿಂದ ಶೋಧ

• ಪುಟ 9

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಪುನರ್ವಸು

ದಿನದ ಮಾತು

ಸೋಲುವೆನೆಂಬ ಭಯವನ್ನು ಜಯಿಸುವುದೇ ನಿಜವಾದ ಗೆಲುವು.

▲ ನಾಣ್ನುಡಿ

ಕಿರುಸುದ್ದಿ

ತ.ನಾಡು ರೈತರ 75 ಸಾವಿರ ರೂ. ಬೆಳೆ ಸಾಲ ಮನ್ನಾ

• ಚೆನ್ನೈ: ಸಹಕಾರಿ ಬ್ಯಾಂಕುಗಳ ಮೂಲಕ ರೈತರು ಪಡೆದ 75,000 ರೂ. ವರೆಗಿನ ಬೆಳೆ ಸಾಲವನ್ನು ತಮಿಳುನಾಡು ಸರ್ಕಾರ ಮನ್ನಾ ಮಾಡಿದೆ. ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಅವರು ಮಂಗಳವಾರ ಸಂಪೂರ್ಣ ಸಾಲ ಮನ್ನಾ ಘೋಷಣೆ ಮಾಡಿದ್ದಾರೆ. ಈ ಕ್ರಮದಿಂದ ರಾಜ್ಯದ 14.43 ಲಕ್ಷ ರೈತರಿಗೆ ಅನುಕೂಲವಾಗಲಿದೆ. ರಾಜ್ಯ ಸರ್ಕಾರಕ್ಕೆ 5,932 ಕೋಟಿ ರೂ.ಗಳ ಹೆಚ್ಚುವರಿ ವೆಚ್ಚವಾಗಲಿದೆ. ರೈತರಿಗೆ ದೊಡ್ಡ ಪರಿಹಾರವನ್ನು ಖಾತ್ರಿಪಡಿಸುತ್ತದೆ ಎಂದು ಸರ್ಕಾರ ಹೇಳಿದೆ. ಸಚಿವರು ಮತ್ತು ಹಿರಿಯ ಅಧಿಕಾರಿಗಳೊಂದಿಗೆ ನಡೆಸಿದ ಪರಿಶೀಲನಾ ಸಭೆ ನಂತರ, 75,000 ರೂ.ಗಿಂತ ಹೆಚ್ಚು ಸಾಲ ಪಡೆದ ರೈತರ 35,000 ರೂ.ಗಳಷ್ಟೇ ಮನ್ನಾ ಆಗಲಿದೆ ಎಂದು ವಿಜಯ್ ತಿಳಿಸಿದ್ದಾರೆ.

ಪಾಕಿಸ್ತಾನ ಬೆಂಬಲಿತ ಏಳು ಉಗ್ರರ ಬಂಧನ

• ಪುಟ 8

ಛತ್ತೀಸ್‌ಗಢ ಶಾಲೆಗಳಲ್ಲಿ ಗಾಯತ್ರಿ ಮಂತ್ರ ಕಡ್ಡಾಯ

• ಪುಟ 8


ಪ್ರಿಯಾಂಕ್ ಖರ್ಗೆಗೆ ವಿಜಯೇಂದ್ರ ತಿರುಗೇಟು

• ಪುಟ 2

ಜೂ.22ರವರೆಗೆ ಆ್ಯಪ್‌ಗೆ ಕೇಂದ್ರ ತಡೆ

ನೀಟ್ ಅಕ್ರಮ ತಡೆಗೆ ಟೆಲಿಗ್ರಾಂಗೆ ನಿರ್ಬಂಧ

• ಹೊಸದಿಲ್ಲಿ: ನೀಟ್-ಯುಜಿ 2026 ಪ್ರಶ್ನೆಪತ್ರಿಕೆ ಸೋರಿಕೆ ತಡೆಗಟ್ಟಲು ಕೇಂದ್ರ ಸರ್ಕಾರ ಹೊಸ ಕ್ರಮಗಳನ್ನು ಕೈಗೊಳ್ಳುತ್ತಿದ್ದು, ಇದೀಗ ಮರುಪರೀಕ್ಷೆ ವೇಳೆ ದೇಶದಲ್ಲಿ ಟೆಲಿಗ್ರಾಂ ಆ್ಯಪನ್ನು ತಾತ್ಕಾಲಿಕವಾಗಿ ನಿರ್ಬಂಧಿಸಿದೆ. ಟೆಲಿಗ್ರಾಂನಿಂದಲೇ ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯಾಗಿದೆ ಎಂಬ ವದಂತಿ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ.



ಇದರ ಅನ್ವಯ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ 2 ಪ್ರತ್ಯೇಕ ನಿರ್ದೇಶನಗಳನ್ನು ನೀಡಿದ್ದು, ಜೂ.22ರವರೆಗೆ ದೇಶದಲ್ಲಿ ಟೆಲಿಗ್ರಾಂ ನಿರ್ಬಂಧಿಸಲಾಗಿದೆ. ಅದೇ ರೀತಿ ಜೂ.30ರವರೆಗೆ ಈಗಾಗಲೇ ಪೋಸ್ಟ್ ಮಾಡಲಾದಸಂದೇಶಗಳನ್ನು ಎಡಿಟ್ ಮಾಡಲಾಗದಂತೆಟೆಲಿಗ್ರಾಂನಿಷ್ಕ್ರಿಯಗೊಳಿಸಬೇಕೆಂದು ಸೂಚಿಸಿದೆ. ಅಂದರೆ ಜೂ.30ರವರೆಗೆ ಈಗಾಗಲೇ ಕಳುಹಿಸಲಾದ ಯಾವುದೇ ಸಂದೇಶಗಳನ್ನು ಎಡಿಟ್ ಮಾಡಲು ಅವಕಾಶವಿರುವುದಿಲ್ಲ. ಪ್ರಶ್ನೆಪತ್ರಿಕೆ ಸೋರಿಕೆ ಮಾಡುವ ಜಾಲಗಳು ಟೆಲಿಗ್ರಾಂನಂತಹ ಆ್ಯಪ್ ಬಳಸಿ ಪರೀಕ್ಷಾ ಅಭ್ಯರ್ಥಿಗಳೊಂದಿಗೆ ಸಂಪರ್ಕ ನಡೆಸಿದೆ ಎಂದು ತಿಳಿದುಬಂದಿದೆ. ➡ಪುಟ 8

ಖಾಸಗಿ ರೆಸಾರ್ಟ್‌ನಲ್ಲಿ ಸಿಎಲ್‌ಪಿ ಸಭೆ

ಐದನೇ ಅಭ್ಯರ್ಥಿಯ ಗೆಲುವಿಗೆ ರಣತಂತ್ರ

• ಬೆಂಗಳೂರು: ವಿಧಾನ ಪರಿಷತ್‌ನ 7 ಸ್ಥಾನಗಳಿಗೆ ಗುರುವಾರ (ಜೂ.18) ಮತದಾನ ನಡೆಯಲಿರುವ ಹಿನ್ನೆಲೆಯಲ್ಲಿ, ಮಂಗಳವಾರ ಸಂಜೆ ಬಿಡದಿಯ ಖಾಸಗಿ ರೆಸಾರ್ಟ್‌ನಲ್ಲಿ ಕಾಂಗ್ರೆಸ್ ಪಕ್ಷದ ಶಾಸಕಾಂಗ ಸಭೆ ನಡೆಯಿತು.



ನಾಳೆ ವಿಧಾನ ಪರಿಷತ್ ಚುನಾವಣೆ

ಕಾಂಗ್ರೆಸ್ 5ನೇ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿರುವುದರಿಂದ ಚುನಾವಣೆ ತೀವ್ರ ಪೈಪೋಟಿಯಿಂದ ಕೂಡಿದ್ದು, 5ನೇ ಅಭ್ಯರ್ಥಿಯ ಗೆಲುವಿಗೆ ಅಲ್ಪ ಮತಗಳ ಕೊರತೆ ಇರುವುದರಿಂದ ಗೆಲುವಿನ ತಂತ್ರದ ರೂಪರೇಷೆಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಮತದಾನದ ಸಂದರ್ಭದಲ್ಲಿ ಅನುಸರಿಸಬೇಕಾದ ನಿಯಮಾವಳಿಗಳ ಬಗ್ಗೆ ಶಾಸಕರಿಗೆ ತಿಳಿಸಲಾಯಿತು. ➡ಪುಟ 3

ಎಸ್ಸಿ ಪಟ್ಟಿಯಿಂದ ಮತಾಂತರಿಗಳನ್ನು ಕೈಬಿಡಲು ಶಾಂತಾರಾಮ ಸಿದ್ದಿ ಒತ್ತಾಯ


• **ಬೆಂಗಳೂರು:** ಮತಾಂತರಗೊಂಡ ಬುಡಕಟ್ಟು ಸಮುದಾಯದವರಿಂದ ನಿಜವಾದ ಮೂಲ ಬುಡಕಟ್ಟಿನವರಿಗೆ ಅನ್ಯಾಯವಾಗುತ್ತಿದ್ದು, ಮತಾಂತರ ಹೊಂದಿದವರನ್ನು ಪರಿಶಿಷ್ಟ ಪಂಗಡದ ಪಟ್ಟಿಯಿಂದ ಕೈಬಿಡಬೇಕು ಎಂದು ವಿಧಾನ ಪರಿಷತ್ ಸದಸ್ಯ ಶಾಂತಾರಾಮ ಸಿದ್ದಿ ಒತ್ತಾಯಿಸಿದ್ದಾರೆ.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿ ನಡೆಸಿದ ಅವರು, ದೇಶದಲ್ಲಿ 12 ಕೋಟಿ ಬುಡಕಟ್ಟು ಸಮುದಾಯದ ಜನರಿದ್ದಾರೆ, ಅವರಲ್ಲಿ 1-2 ಕೋಟಿ ಜನ ಮತಾಂತರ ಗೊಂಡಿದ್ದಾರೆ. ಗಿರಿಜನರಿಗೆ ಸಿಗಬೇಕಾದ ಸೌಲಭ್ಯಗಳನ್ನು ಮತಾಂತರಿ ಬುಡಕಟ್ಟಿನವರೇ ಹೆಚ್ಚಾಗಿ ಪಡೆದು ಕೊಳ್ಳುತ್ತಿದ್ದಾರೆ. ಕೆಲವು ಕಡೆಗಳಲ್ಲಿ ಇವರು ಇತ್ತ ಬುಡಕಟ್ಟು ಹಾಗೂ ಅತ್ತ ಮತಾಂತರಗೊಂಡ ಧರ್ಮದ ಎರಡೂ ಕಡೆಯ ಸೌಲಭ್ಯಗಳನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು.

ಕೇಂದ್ರಕ್ಕೆ ಮನವಿ ಸಲ್ಲಿಕೆ: ಈ ಅನ್ಯಾಯದ ಹಿನ್ನೆಲೆಯಲ್ಲಿ ಹೊಸದಿಲ್ಲಿಯಲ್ಲಿ ರಾಷ್ಟ್ರಮಟ್ಟದ ಜನಜಾತಿ ಸುರಕ್ಷಾ ವೇದಿಕೆ ವತಿಯಿಂದ ಬೃಹತ್ ಸಮ್ಮೇಳನ ಆಯೋಜಿಸಲಾಗಿತ್ತು. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಭಾಗವಹಿಸಿದ್ದ ಈ ಸಮ್ಮೇಳನದ ಬಳಿಕ, ರಾಷ್ಟ್ರಪತಿಗಳನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಗಿದೆ. ನಾವು ಯಾವುದೇ ಧರ್ಮ ಅಥವಾ ಮತವನ್ನು ವಿರೋಧಿಸುವುದಿಲ್ಲ, ಆದರೆ, ಬೇರೆ ಧರ್ಮಕ್ಕೆ ಮತಾಂತರ ಹೊಂದಿದವರು ಇಲ್ಲಿನ ಮೂಲ ಬುಡಕಟ್ಟು ಜನರಿಗೆ ಸಿಗುವ ಸರ್ಕಾರಿ ಸೌಲಭ್ಯಗಳನ್ನು ಪಡೆಯಬಾರದು ಎನ್ನುವುದು ನಮ್ಮ ಸ್ಪಷ್ಟ ನಿಲುವು ಎಂದು ಅವರು ಪ್ರತಿಪಾದಿಸಿದರು.

ಆರ್‌ಎಸ್‌ಎಸ್ ಬಗ್ಗೆ ಪ್ರಿಯಾಂಕ್ ಖರ್ಗೆಗೇನು ಗೊತ್ತು? ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಕುರಿತಾಗಿ ಸಚಿವ ಪ್ರಿಯಾಂಕ್ ಖರ್ಗೆ ಬರೆದಿರುವ ಪತ್ರದ ವಿಚಾರವಾಗಿ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದರು.

ರಾಮ ಬಾಣ



ಪೌರ ಕಾರ್ಮಿಕರ ಬೇಡಿಕೆಗೆ ಕ್ರಮ: ಸಚಿವ ಯತೀಂದ್ರ

• **ಬೆಂಗಳೂರು:** ಪೌರ ಕಾರ್ಮಿಕರ ನೇರ ನೇಮಕಾತಿ, ಪೌರ ಕಾರ್ಮಿಕರ ಖಾಯಂ ಗೊಳಿಸುವಿಕೆ, ಕಸ ಗುಡಿಸುವವರು, ಸಾಗಾಟ ಮಾಡುವವರು, ಕಸದ ವಾಹನಗಳ ಚಾಲಕರನ್ನು ಪೌರ ಕಾರ್ಮಿಕರನ್ನಾಗಿ ಪರಿಗಣಿಸುವುದು ಸೇರಿದಂತೆ ಪೌರ ಕಾರ್ಮಿಕರ ಎಲ್ಲಾ ಬೇಡಿಕೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಸರ್ಕಾರ ಪೂರಕವಾದ ಕ್ರಮಗಳನ್ನು ಆದ್ಯತೆಯ ಮೇಲೆ ಕೈಗೊಳ್ಳಲಿದೆ ಎಂದು ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ಮಂಗಳವಾರ ತಮ್ಮ ಗೃಹ ಕಚೇರಿಯಲ್ಲಿ ಕರ್ನಾಟಕ ರಾಜ್ಯ ನಗರ ಪಾಲಿಕೆ, ನಗರಸಭೆ, ಪುರಸಭೆಗಳ ಪೌರ ಕಾರ್ಮಿಕರ ಮಹಾ ಸಂಘದ ಪದಾಧಿಕಾರಿಗಳ ಸಭೆ ನಡೆಸಿದ ಸಚಿವರು, ಪೌರ ಕಾರ್ಮಿಕರ ಬೇಡಿಕೆಗಳ ಸಂಬಂಧ ತ್ವರಿತವಾಗಿ ಕ್ರಮ ಕೈಗೊಳ್ಳುವಂತೆ ನಗರಾಭಿವೃದ್ಧಿ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು. ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಮಾಜಿ ಅಧ್ಯಕ್ಷರಾದ ನಾರಾಯಣ್ ಅವರು, ಸರ್ಕಾರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸುಮಾರು 29,000 ಜನ ನೇರ ವೇತನ ಪೌರಕಾರ್ಮಿಕರನ್ನು ಖಾಯಂ ಮಾಡಿರುವ ಸರ್ಕಾರದ ಕ್ರಮವನ್ನು ಸ್ವಾಗತಿಸುತ್ತೇವೆ. ಅದೇ ರೀತಿ ಇನ್ನೂ ಬಾಕಿ ಉಳಿದಿರುವ ಸುಮಾರು 6,800 ಜನ ಪೌರಕಾರ್ಮಿಕರನ್ನು ಸಹ ಶೀಘ್ರವಾಗಿ ಖಾಯಂಗೊಳಿಸಬೇಕು ಎಂದು ಮನವಿ ಮಾಡಿದರು.

ಎಲ್ಲಾ ಮನವಿಗಳನ್ನು ಆಲಿಸಿದ ನಂತರ ಪ್ರತಿಕ್ರಿಯಿಸಿದ ಸಚಿವರು, ನಿಮ್ಮ ಎಲ್ಲಾ ಬೇಡಿಕೆಗಳನ್ನು ಸರ್ಕಾರ ಸಹಾನುಭೂತಿಯಿಂದ ಪರಿಗಣಿಸಿ ಅಗತ್ಯ ಕ್ರಮ ಕೈಗೊಳ್ಳಲಿದೆ ಎಂದು ಸಚಿವರು ಭರವಸೆ ನೀಡಿದರು. ಸಭೆಯಲ್ಲಿ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ಬಿ.ಬಿ. ಕಾವೇರಿ, ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕ ರಮೇಂದ್ರ, ಪೌರ ಕಾರ್ಮಿಕರ ಸಂಘದ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

ಎಲ್ಲಾ ಮತಗಳಲ್ಲಿ ಒಳ್ಳೆಯವರು ಇದ್ದಾರೆ ಎಂಬುದು ಸತ್ಯ. ಆದರೆ ಒಳ್ಳೆಯವರನ್ನು ಮುಂದೆ ತೋರಿಸಿ ಇರುವವರೆಲ್ಲರೂ ಒಳ್ಳೆಯವರು ಎಂಬ ಭಾವ ಮೂಡಿಸಿ ಹಿಂದಿನಿಂದ ತಮ್ಮ ಕೆಟ್ಟ ಕೆಲಸಗಳನ್ನು ಮಾಡಿಕೊಳ್ಳುವ ಮಂದಿ ಹಲವರಿದ್ದಾರೆ
- ವಿಧುಶೇಖರ ಪ್ರೀಗಣು

- ಬೇರೆ ಬದಿಯಲ್ಲಿ ಟೊಮೇಟೊ ರಾಶಿ ಹಾಕಿ ಮಾರಾಟ ಮಾಡುವವರಲ್ಲಿ ಕೆಲವರು ರಾಶಿಯ ಕೆಳಗಡೆ ಕೊಳೆತ ಹಣ್ಣುಗಳನ್ನು ಹಾಕಿ ಮೇಲ್ಗಡೆ ಸ್ವಲ್ಪ ಉತ್ತಮವಾದುದನ್ನು ಹಾಕಿ ಭರ್ಜರಿ ವ್ಯಾಪಾರ ಮಾಡುತ್ತಾರೆ!

ದಿನ ಭವಿಷ್ಯ

ಮೇಷ ಕೆರಿಯರ್‌ಗೆ ಸಂಬಂಧಿಸಿ ಶುಭ ಬೆಳವಣಿಗೆ. ಇಚ್ಛಿತ ಉದ್ಯೋಗ ಸಿಕ್ಕೀತು. ಮನೆಯಲ್ಲಿ ಸಾಮರಸ್ಯ ಕಾಯಲು ಗಮನ ಕೊಡಿ.

ವೃಷಭ ಕೆರಿಯರ್‌ಗೆ ಅದೃಷ್ಟ ನೀಡಿ ಪ್ರತಿಪಾತ್ರರನ್ನು ಕಡೆಗಣಿಸದಿರಿ. ಆ ಕಡೆಯೂ ಗಮನ ಕೊಡಿ. ಸಣ್ಣ ಆರೋಗ್ಯ ಸಮಸ್ಯೆ ಕಿರಿಕಿರಿ ಸೃಷ್ಟಿಸಬಹುದು.

ಮಿಥುನ ಕೆಲಸದಲ್ಲಿ ಸದಾ ನಿರತ. ಅಧಿಕ ಒತ್ತಡ. ಇದರಿಂದ ಆಯಾಸ ಹೆಚ್ಚು. ಹೊಸ ಸಂಬಂಧ ಹರ್ಷ ತುಂಬಬಹುದು. ಆರ್ಥಿಕ ಸ್ಥಿತಿ ಸಾಧಾರಣ.

ಕಟಕ ಶಾಂತಚಿತ್ತತೆ ಕಾಯ್ದುಕೊಳ್ಳಿ. ಏಕೆಂದರೆ ಪ್ರತಿಕೂಲ ಬೆಳವಣಿಗೆ ಕಾಣಬಹುದು. ಆರ್ಥಿಕ ಪರಿಸ್ಥಿತಿಯತ್ತ ಹೆಚ್ಚು ಗಮನ ಕೊಡಿ. ಧನವ್ಯಯ.

ಸಿಂಹ ಹೊಸತನದ ಹುರುಪು. ವೃತ್ತಿ ಮತ್ತು ಮನೆಯಲ್ಲಿ ಪೂರಕ ಬೆಳವಣಿಗೆ. ಮುಖ್ಯ ವಿಷಯದಲ್ಲಿ ಹಿರಿಯರ ಮಾರ್ಗದರ್ಶನ ಕೋರಿ.

ಕನ್ಯಾ ನಿಮ್ಮ ವರ್ತನೆ ಬದಲಿಸಬೇಕಾದ ಅಗತ್ಯ ಇದೆ. ಸಂಘರ್ಷದ ಧೋರಣೆ ಬಿಡಿ. ವೃತ್ತಿ ಒತ್ತಡ ಹೆಚ್ಚಲಿದೆ. ಅಸಹಕಾರ ಎದುರಿಸುವಿರಿ.

ತುಲಾ ಸಿಟ್ಟೇರಿಸುವ ಪ್ರಸಂಗ ಉಂಟಾದೀತು. ತಾಳ್ಮೆ ಕಾಯ್ದುಕೊಳ್ಳಿ. ಅಧಿಕ ಖರ್ಚು ಚಿಂತೆಗೆ ಕಾರಣ. ಬಂಧು ಕಲಹ. ಧಾರ್ಮಿಕ ವಿಚಾರದಲ್ಲಿ ಆಸಕ್ತಿ.

ವೃಶ್ಚಿಕ ನಿಮ್ಮ ಕಲ್ಪನೆ ಸಾಕಾರವಾಗುವ ಸಾಧ್ಯತೆ ಕಾಣುತ್ತಿದೆ. ಸಮಸ್ಯೆ ಇತ್ಯರ್ಥ. ಸಣ್ಣ ಆರೋಗ್ಯ ಸಮಸ್ಯೆ. ಚಾಲನೆಯಲ್ಲಿ ಎಚ್ಚರ ವಹಿಸಿ.

ಧನು ಫಲದಾಯಕ ದಿನ. ನಿಮ್ಮ ನಿರ್ವಹಣೆ ಮೆಚ್ಚುಗೆಗೆ ಪಾತ್ರ. ವಿಶೇಷ ವ್ಯಕ್ತಿಯ ಭೇಟಿಯಿಂದ ಉತ್ಸಾಹ. ಕೌಟುಂಬಿಕ ಸಮ್ಮಿಲನ ಸಂಭವ.

ಮಕರ ಆರ್ಥಿಕ ಯೋಜನೆ ಕಾರ್ಯಗತ ಮಾಡಲು ಸಕಾಲ. ಶುಭ ಸುದ್ದಿ ಕೇಳುವಿರಿ. ಆರೋಗ್ಯದ ವಿಚಾರದಲ್ಲಿ ಹೆಚ್ಚು ಕಾಳಜಿ ವಹಿಸಿರಿ. ಧನಾಗಮ.

ಕುಂಭ ನಿಮ್ಮ ಕೆಲಸ ದಿಕ್ಕು ತಪ್ಪದಂತೆ ಎಚ್ಚರ ವಹಿಸಿ. ಕೆಲವರು ಅಡ್ಡಗಾಲು ಹಾಕಿಯಾರು. ಆರೋಗ್ಯಪೂರ್ಣ ಆಹಾರ ಮಾತ್ರ ಸೇವಿಸಿರಿ.

ಮೀನ ವ್ಯರ್ಥವೆಂದು ಭಾವಿಸಿದ ಕೆಲಸ ಒಮ್ಮೆಗೆ ಫಲ ನೀಡಬಹುದು. ಆರ್ಥಿಕವಾಗಿ ಪೂರಕ ಬೆಳವಣಿಗೆ. ಆಪ್ತರ ಜತೆಗೆ ಆತ್ಮೀಯ ಕಾಲಕ್ಷೇಪ.

ರಾಹುಕಾಲ: 12.00-1.30
ಗುಳಿಕಕಾಲ: 10.30-12.00

ಅದೃಷ್ಟ ಸಂಖ್ಯೆ : 0,7,2,5

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿವಿ 28ನೇ ಘಟಿಕೋತ್ಸವ

ನಿಸ್ವಾರ್ಥ ಸೇವೆ ನೀಡಿ: ಸಿಎಂ

• **ಬೆಂಗಳೂರು:** ವೈದ್ಯರು ಕಣ್ಣಿಗೆ ಕಾಣುವ ದೇವರು. ಜನ ಎಷ್ಟೇ ಕಷ್ಟ ಇದ್ದರೂ ನಂಬಿಕೆ ಹಾಗೂ ವಿಶ್ವಾಸದಿಂದ ವೈದ್ಯರ ಬಳಿ ಹೋಗುತ್ತಾರೆ. ನೀವು ಅವರ ನಂಬಿಕೆ ಉಳಿಸಿಕೊಂಡು ಸೇವೆ ಮಾಡಬೇಕು ಎಂದು ವೈದ್ಯ ಪದವೀಧರರಿಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕಿವಿಮಾತು ಹೇಳಿದರು.

ಜಿಕೆವಿಕೆ ಡಾ.ಬಾಬು ರಾಜೇಂದ್ರಪ್ರಸಾದ್ ಅಂತಾರಾಷ್ಟ್ರೀಯ ಸಮಾವೇಶ ಭವನದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ 28ನೇ ವಾರ್ಷಿಕ ಘಟಿಕೋತ್ಸವದಲ್ಲಿ ಮಾತನಾಡಿದರು. ಈ ವೃತ್ತಿಯಲ್ಲಿ ನಿಮಗೆ ನಿತ್ಯ ಸವಾಲು ಎದುರಾಗುತ್ತದೆ. ನಿಮ್ಮ ಮುಂದೆ ದೊಡ್ಡ ಸ್ಪರ್ಧೆ ಇದೆ. ನಾನು ಬೇರೆ ದೇಶಗಳಲ್ಲಿ ಪ್ರವಾಸ ಮಾಡಿದ್ದೇನೆ. ಅಲ್ಲಿನ ಪ್ರತಿಷ್ಠಿತ ಆಸ್ಪತ್ರೆಗಳಲ್ಲಿ ಭಾರತೀಯರು ಅದರಲ್ಲೂ ಕರ್ನಾಟಕದ ವೈದ್ಯರು ಸೇವೆ ಸಲ್ಲಿಸುತ್ತಿದ್ದಾರೆ. ಇಲ್ಲಿರುವ ಗುಣಮಟ್ಟ ಭಾರತ ಮಾತ್ರವಲ್ಲ, ವಿಶ್ವದಲ್ಲೇ ಎಲ್ಲೂ ಇಲ್ಲ. ಇಲ್ಲಿ ತಯಾರಾದ ವೈದ್ಯರ ಪ್ರತಿಭೆ, ಗುಣಮಟ್ಟ ಸೇವೆ ಹಾಗೂ ಬದ್ಧತೆಗೆ ಸರಿಸಾಟಿ ಯಾರೂ ಇಲ್ಲ ಎಂದರು.

ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಮಾತನಾಡಿ, ವೈದ್ಯಕೀಯ ವೃತ್ತಿಯು ಕೇವಲ ಉದ್ಯೋಗವಲ್ಲ, ಅದು ಸೇವೆ ಮತ್ತು ಕರುಣೆಯ ಕ್ಷೇತ್ರವಾಗಿದೆ. ಆದರಿಂದ ವೈದ್ಯರು ಸದಾ ನೈತಿಕತೆ, ಪ್ರಾಮಾಣಿಕತೆ ಹಾಗೂ ಮಾನವೀಯ ಮೌಲ್ಯಗಳಿಗೆ ಬದ್ಧರಾಗಿರಬೇಕು ಎಂದು ಹೇಳಿದರು. ಈ ವೇಳೆ ಪ್ರೊ.ಡಾ.ನೈಲಾಡಿ ಶ್ರೀಧರ ಶೆಟ್ಟಿ, ಡಾ.ಹರ್ಷಗಿರಿ ವೀರಭದ್ರಪ್ಪ ಹಾಗೂ ಡಾ.ಎ.ಸಿ.ಷಣ್ಮುಗಂ ಅವರಿಗೆ ಗೌರವ ಡಾಕ್ಟರೇಟ್ ಡಾಕ್ಟರ್ ಆಫ್ ಸೈನ್ಸ್ ಪದವಿ ಪ್ರದಾನ ಮಾಡಲಾಯಿತು. 72,741 ಅಭ್ಯರ್ಥಿಗಳಿಗೆ ವಿವಿಧ ಪದವಿ ಪ್ರದಾನ ಮಾಡಲಾಯಿತು. ಇವುಗಳ ಪೈಕಿ ಒಟ್ಟು 103 ವಿದ್ಯಾರ್ಥಿಗಳಿಗೆ 115 ಚಿನ್ನದ ಪದಕ ನೀಡಲಾಯಿತು. ಈ ವೇಳೆ ವಿಶ್ವವಿದ್ಯಾಲಯದ ಕುಲಪತಿ ಡಾ.ಭಗವಾನ್ ಬಿ.ಸಿ. ಉಪಸ್ಥಿತರಿದ್ದರು.



ಪದವೀಧರರ ಶಿಕ್ಷಣಕ್ಕೆ ಪ್ರೋತ್ಸಾಹ, ಧೈರ್ಯ ಹಾಗೂ ಸ್ಫೂರ್ತಿಯನ್ನು ನೀಡಿದ ಪೋಷಕರು ಹಾಗೂ ಜ್ಞಾನ ನೀಡಿದ ಗುರುಗಳನ್ನು ಎಂದಿಗೂ ಮರೆಯಬಾರದು. ಎಲ್ಲಾ ಜಿಲ್ಲೆಗಳಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಕ್ಯಾನ್ಸರ್ ಆಸ್ಪತ್ರೆಯನ್ನು ನಿರ್ಮಿಸಲಾಗುವುದು. ಆ ಮೂಲಕ ಜನ ಸಾಮಾನ್ಯರು ಕೈಗೆಟುಕುವ ದರದಲ್ಲಿ ಚಿಕಿತ್ಸೆ ಪಡೆಯಬಹುದಾಗಿದೆ.

■ **ಡಾ.ಶರಣಪ್ರಕಾಶ ಆರ್.ಪಾಟೀಲ್,** ವೈದ್ಯಕೀಯ ಶಿಕ್ಷಣ ಸಚಿವ

ರಾಜ್ಯದಲ್ಲಿ ಪ್ರತಿ ವರ್ಷ 13,940 ವೈದ್ಯರ ತಯಾರಿ

ನಮ್ಮ ರಾಜ್ಯದಲ್ಲೇ 72 ವೈದ್ಯಕೀಯ ಕಾಲೇಜುಗಳಿದ್ದು, ದೇಶದ ಬೇರೆ ಯಾವುದೇ ರಾಜ್ಯಗಳಲ್ಲಿ ಇಷ್ಟೊಂದು ವೈದ್ಯಕೀಯ ಕಾಲೇಜುಗಳಿಲ್ಲ. ಪ್ರತಿ ವರ್ಷ 72 ಸಾವಿರ ಪದವೀಧರರನ್ನು ತಯಾರಿಸುತ್ತಿದೆ. ವರ್ಷಕ್ಕೆ 13,940 ವೈದ್ಯರನ್ನು ಕೊಡುಗೆಯಾಗಿ ನೀಡುತ್ತಿದ್ದು, ಇಲ್ಲಿ ತಯಾರಾದ ವೈದ್ಯರು, ನರ್ಸ್‌ಗಳು ವಿಶ್ವದಾದ್ಯಂತ ಆರೋಗ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ಎಂದು ಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.

ಗುಣಮಟ್ಟದ ಶಿಕ್ಷಕರೇ ವಿವಿಯ ಹೆಗ್ಗುರುತು

ಯಾವುದೇ ಒಂದು ವಿವಿಯ ಶಕ್ತಿ ಎಂದರೆ ಅಲ್ಲಿನ ವಿದ್ಯಾರ್ಥಿಗಳ ಸಂಖ್ಯೆಯಲ್ಲ, ಪದವಿಗಳ ಸಂಖ್ಯೆಯೂ ಅಲ್ಲ, ಅಲ್ಲಿರುವ ಗುಣಮಟ್ಟದ ಶಿಕ್ಷಕರು. ಶಿಕ್ಷಕರು ವಿದ್ಯಾರ್ಥಿಗಳ ಮಾರ್ಗದರ್ಶಕರಾಗಬೇಕು, ಸಂಶೋಧನೆಗೆ ಪೂರಕವಾಗಿ ವಿದ್ಯಾರ್ಥಿಗಳಿಗೆ ರೋಲ್ ಮಾಡೆಲ್ ಗಳಾಗಿರಬೇಕು. ಎಲ್ಲರೂ ಜತೆಯಾಗಿ ಕೆಲಸ ಮಾಡೋಣ. ಮುಂದೆ ನಾವು ನೀವೆಲ್ಲರೂ ರಾಮನಗರದ ಕ್ಯಾಂಪಸ್ ನಲ್ಲಿ ಸಿಗೋಣ. ಕರ್ನಾಟಕ ಸರ್ಕಾರ ಈ ವಿವಿಗೆ ಅಗತ್ಯವಿರುವ ಎಲ್ಲಾ ಸಹಕಾರವನ್ನು ನೀಡಲು ಬದ್ಧವಾಗಿದೆ ಎಂದು ತಿಳಿಸಿದರು. 1044 ಅಫಿಲಿಯೇಟೆಡ್ ಕಾಲೇಜುಗಳಿವೆ. ಲಕ್ಷಾಂತರ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ ಎಂದು ಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ಪವನ ವಿದ್ಯುತ್ ಉತ್ಪಾದನೆ: ಕರ್ನಾಟಕಕ್ಕೆ ರಾಷ್ಟ್ರ ಪ್ರಶಸ್ತಿ

• **ಪಣಜಿ/ಬೆಂಗಳೂರು:** ಅನುಷ್ಠಾನದ ಹಂತದಲ್ಲಿರುವ ಅತ್ಯಧಿಕ ಪವನ ವಿದ್ಯುತ್ ಸಾಮರ್ಥ್ಯಕ್ಕಾಗಿ ರಾಷ್ಟ್ರೀಯ ಮಟ್ಟದ ಪ್ರಶಸ್ತಿಯನ್ನು ಕರ್ನಾಟಕ ತನ್ನದಾಗಿಸಿಕೊಂಡಿದೆ.

ಗೋವಾದಲ್ಲಿ ನಡೆದ 2026ನೇ ಸಾಲಿನ ವಿಶ್ವಪವನ ದಿನಾಚರಣೆಯಲ್ಲಿ ಕರ್ನಾಟಕಕ್ಕೆ ಪ್ರತಿಷ್ಠಿತ ಹೈಯೆಸ್ಟ್ ವಿಂಡ್ ಕ್ಯಾಪಾಸಿಟಿ ಪೈಪ್‌ಲೈನ್ ಪ್ರಶಸ್ತಿ ದೊರೆತಿದೆ. ಕೇಂದ್ರ ಸಚಿವ ಜೋಶಿ ಅವರಿಂದ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ.ರುದ್ರಪ್ಪಯ್ಯ ಪ್ರಶಸ್ತಿ ಸ್ವೀಕರಿಸಿದರು.

ಪವನ ವಿದ್ಯುತ್ ವಲಯದಲ್ಲಿ ಕರ್ನಾಟಕದ ಸಾಧನೆಗೆ ಸಂದಿರುವ ಪ್ರಶಸ್ತಿ ಬಗ್ಗೆ ಹರ್ಷ ವ್ಯಕ್ತಪಡಿಸಿರುವ ಇಂಧನ ಸಚಿವ ಕೆ.ಜೆ.ಜಾರ್ಜ್, ಕಳೆದ ಬಾರಿಯೂ ಕರ್ನಾಟಕ ಈ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತ್ತು. ಅನುಷ್ಠಾನ ಹಂತದಲ್ಲಿರುವ ಪವನ ವಿದ್ಯುತ್ ಸಾಮರ್ಥ್ಯದಲ್ಲಿ ಕರ್ನಾಟಕವು ದೇಶದಲ್ಲೇ ಅಗ್ರಮಾನ್ಯ ಸ್ಥಾನದಲ್ಲಿರುವುದನ್ನು ಗುರುತಿಸಿ ಪ್ರಶಸ್ತಿ ನೀಡಿರುವುದು ಹೆಮ್ಮೆಯ ವಿಷಯ. ಈ ಪ್ರಶಸ್ತಿಯು ನವೀಕರಿಸಬಹುದಾದ ಇಂಧನ ಉತ್ಪಾದನೆ, ಸುಸ್ಥಿರ ಅಭಿವೃದ್ಧಿಯ ಬಗ್ಗೆ ನಮ್ಮ ಸರ್ಕಾರಕ್ಕೆ ಇರುವ ಅಚಲ ಬದ್ಧತೆಗೆ ಸಾಕ್ಷಿಯಾಗಿದೆ ಎಂದು ತಿಳಿಸಿದರು.

ಅನುಷ್ಠಾನ ಹಂತದಲ್ಲಿರುವ ಅತ್ಯಧಿಕ ಪವನ ವಿದ್ಯುತ್ ಸಾಮರ್ಥ್ಯಕ್ಕಾಗಿ ಕರ್ನಾಟಕಕ್ಕೆ ದೊರೆತಿರುವ ಈ ಪ್ರಶಸ್ತಿಯು ರಾಜ್ಯದ ಪ್ರಗತಿಪರ ನೀತಿ, ಹೂಡಿಕೆ-ಸ್ನೇಹಿ ವ್ಯವಸ್ಥೆ ಮತ್ತು ನವೀಕರಿಸಬಹುದಾದ ಇಂಧನ ಅಭಿವೃದ್ಧಿಗೆ ಇರುವ ಸಾಂಸ್ಥಿಕ ಬೆಂಬಲಕ್ಕೆ ಸಾಕ್ಷಿಯಾಗಿದೆ.

■ **ಗೌರವ್ ಗುಪ್ತ,** ಇಂಧನ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ



ಕ್ರೆಡಲ್ ಹಾಗೂ ಉದ್ಯಮದ ಪಾಲುದಾರರ ಉತ್ತಮ ಸಹಯೋಗದಿಂದ ಪ್ರಶಸ್ತಿ ಸಂದಿದೆ. ಈ ವಲಯದಲ್ಲಿ ಹೂಡಿಕೆ ಹಾಗೂ ಯೋಜನೆಯ ಅನುಷ್ಠಾನವನ್ನು ಸುಗಮಗೊಳಿಸಲು ಮತ್ತು ರಾಜ್ಯ ಮತ್ತು ರಾಷ್ಟ್ರಕ್ಕೆ ನವೀಕರಿಸಬಹುದಾದ ಇಂಧನದ ಮೂಲಕ ಸುರಕ್ಷಿತ ಇಂಧನ ಭವಿಷ್ಯ ರೂಪಿಸುವ ಪ್ರಯತ್ನಕ್ಕೆ ಪೂರಕವಾಗಿ ಕಾರ್ಯ ನಿರ್ವಹಿಸಲು ಬದ್ಧರಾಗಿದ್ದೇವೆ.

■ **ಕೆ.ಪಿ. ರುದ್ರಪ್ಪಯ್ಯ,** ಕ್ರೆಡಲ್ ವ್ಯವಸ್ಥಾಪಕ ನಿರ್ದೇಶಕ

ಐದನೇ ಅಭ್ಯರ್ಥಿಯ ಗೆಲುವಿಗೆ ರಣತಂತ್ರ

ಪುಟ 1➡ ಶಾಸಕಾಂಗ ಸಭೆಗೂ ಮುನ್ನ ಸಿಎಂ ಡಿ.ಕೆ. ಶಿವಕುಮಾರ್ ಅವರು ಮಾಜಿ ಸಿಎಂ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದರು. ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾದ ನಂತರದ ಮೊದಲ ಶಾಸಕಾಂಗ ಸಭೆ ಇದಾಗಿದ್ದು, ಎಲ್ಲಾ ಶಾಸಕರು, ಸಚಿವರನ್ನು ವಿಶ್ವಾಸಕ್ಕೆ ಪಡೆಯುವ ಮೂಲಕ ಯಾವಾಗಲೂ ನಿಮ್ಮ ಸಹಕಾರ ಬೇಕೆಂದು ಮನವಿ ಮಾಡಿದರು. ಇದೇ ಸಂದರ್ಭದಲ್ಲಿ ಪಕ್ಷದ ಅನೇಕ ವಿಚಾರಗಳ ಬಗ್ಗೆ ಚರ್ಚೆ ನಡೆಸಲಾಯಿತು. ಸಿಎಂ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಪ್ರಮುಖರು ಇದ್ದರು.

ಸಂಪುಟ ಚರ್ಚೆ: ಶಾಸಕಾಂಗ ಸಭೆಯಲ್ಲಿ ಸಂಪುಟ ವಿಸ್ತರಣೆ ಬಗ್ಗೆಯೂ ಚರ್ಚೆಯಾಗಿದ್ದು, ಮೊದಲ ಸುತ್ತಿನ ಅವಕಾಶ ವಂಚಿತ ಸಚಿವಾಕಾಂಕ್ಷಿಗಳು, 2ನೇ ಸುತ್ತಿನಲ್ಲಾದರೂ ತಮಗೆ ಅವಕಾಶ ಸಿಗಬೇಕೆಂದು ಸುರ್ಜೇವಾಲಾ ಬಳಿ ಪ್ರಸ್ತಾಪಿಸಿದರು. ಹಿರಿಯ ಶಾಸಕರು ಶಾಸಕಾಂಗ ಸಭೆಯ ವೇದಿಕೆಯಲ್ಲೇ ತಮ್ಮ ಬೇಡಿಕೆಗಳನ್ನು ತಿಳಿಸಿದರು ಎನ್ನಲಾಗಿದೆ.

ಸಮಾನತೆ ಪಾಲುದಾರಿಕೆ

ಪುಟ 1➡ ಜಿ7 ಶೃಂಗಸಭೆಯಲ್ಲಿ ಭಾರತದ ಸಕ್ರಿಯ ಪಾಲ್ಗೊಳ್ಳುವಿಕೆ, ಜಾಗತಿಕ ವೇದಿಕೆಯಲ್ಲಿ ದೇಶದ ಹೆಚ್ಚುತ್ತಿರುವ ಪ್ರಭಾವ ಮತ್ತು ನಾಯಕತ್ವದ ಮತ್ತೊಂದು ಪ್ರತೀಕವಾಗಿ ಕಾಣಲಾಗುತ್ತಿದೆ. ಈ ಅಧಿವೇಶನದಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರಾನ್, ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಸೇರಿದಂತೆ ಹಲವು ಜಾಗತಿಕ ನಾಯಕರು ಉಪಸ್ಥಿತರಿದ್ದರು.

16 ತಿಂಗಳ ಬಳಿಕ ಮೋದಿ-ಟ್ರಂಪ್ ಭೇಟಿ

ಪುಟ 1➡ **ಆದರೆ, ಕಳೆದ ಕೆಲವು ತಿಂಗಳುಗಳಿಂದ ಸಂಬಂಧ ಸುಧಾರಣೆಗೆ ಎರಡೂ ದೇಶಗಳು ಪ್ರಯತ್ನಿಸುತ್ತಿವೆ. ಮೋದಿ-ಟ್ರಂಪ್ ಮಾತುಕತೆಯಲ್ಲಿ ವ್ಯಾಪಾರ ಒಪ್ಪಂದ, ರಕ್ಷಣಾ ಸಹಕಾರ, ಇಂಡೋ-ಪೆಸಿಫಿಕ್ ಪ್ರದೇಶದ ಭದ್ರತೆ, ಪಶ್ಚಿಮ ಏಷ್ಯಾ ಬಿಕ್ಕಟ್ಟು ಹಾಗೂ ರಷ್ಯಾ-ಉಕ್ರೇನ್ ಸಂಘರ್ಷ ಸೇರಿದಂತೆ ಹಲವು ಪ್ರಮುಖ ವಿಷಯಗಳು ಚರ್ಚೆಯಾಗುವ ನಿರೀಕ್ಷೆಯಿದೆ.**

ಮೋದಿ ಇದ್ದಲ್ಲಿಗೇ ಬಂದು ಅಪ್ಪಿಕೊಂಡ ಬ್ರಿಟನ್ ಪಿಎಂ

ಪುಟ 1➡ **ಮೆಲೋಡಿ ಕ್ಷಣ!:** ಇದಲ್ಲದೆ, ಪ್ರಧಾನಿ ಮೋದಿ ಮತ್ತು ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ನಡುವಿನ ಮೆಲೋಡಿ ಕ್ಷಣ ಗಮನಸೆಳೆಯಿತು. ಇಬ್ಬರು ಹಸ್ತಲಾಘವದೊಂದಿಗೆ ಕುಶಲೋಪರಿ ನಡೆಸಿದರು.

ಉಕ್ರೇನ್‌ಗೆ ಪ್ರಾಮುಖ್ಯತೆ ನೀಡಲು ನಿರ್ಧಾರ

ಪುಟ 1➡ **ಕಳೆದ 4 ವರ್ಷಗಳಿಂದ ರಷ್ಯಾ ಪೂರ್ಣ ಮಟ್ಟದ ಆಕ್ರಮಣ ನಡೆಸುವ ಗುರಿಯೊಂದಿಗೆ ಉಕ್ರೇನ್ ಮೇಲೆ ದಾಳಿ ನಡೆಸುತ್ತ ಬಂದಿದೆ. ಇದೀಗ ಇರಾನ್-ಅಮೆರಿಕ ಶಾಂತಿ ಒಪ್ಪಂದ ಮಾಡಿಕೊಂಡಿದ್ದು, ಯುದ್ಧ ಕೊನೆಗೊಂಡಿದೆ. ಉಕ್ರೇನ್ ಅಧ್ಯಕ್ಷ ವ್ಲಾಡಿಮಿರ್ ಝೆಲೆನ್ಸ್ಕಿ ನಾಯಕರ ಜತೆ ಸೇರಿಕೊಂಡಿದ್ದಾರೆ.**

ವಿದ್ಯಾರ್ಥಿಗಳಿಗೆ ಲೈಂಗಿಕ ಕಿರುಕುಳ: ಹಲ್ಲೆ

• **ಚಿಕ್ಕೋಡಿ:** 10ನೇ ತರಗತಿ ವಿದ್ಯಾರ್ಥಿಗಳಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಹಿನ್ನೆಲೆಯಲ್ಲಿ ಶಿಕ್ಷಕನೊಬ್ಬನಿಗೆ ಪೋಷಕರು ಥಳಿಸಿದ ಘಟನೆ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಮಂಗಳವಾರ ನಡೆದಿದೆ.

ಚಿಕ್ಕೋಡಿಯ ಉರ್ದು ಸರ್ಕಾರಿ ಪ್ರೌಢಶಾಲೆಯಲ್ಲಿ ಕನ್ನಡ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀಶೈಲ್ ಕುಂಬಾರ ವಿರುದ್ಧ ಗಂಭೀರ ಆರೋಪಗಳು ಕೇಳಿ ಬಂದಿವೆ. ಕನ್ನಡ ವಿಷಯದಲ್ಲಿ ಉತ್ತೀರ್ಣಗೊಳಿಸುವುದಾಗಿ ಆಮಿಷವೊಡ್ಡಿ, ಕೆಲ ವಿದ್ಯಾರ್ಥಿಗಳನ್ನು ಶಾಲೆಯ ಕೊಠಡಿ ಹಾಗೂ ಶೌಚಾಲಯಕ್ಕೆ ಕರೆದುಕೊಂಡು ಹೋಗಿ ಲೈಂಗಿಕ ಕಿರುಕುಳ ನೀಡುತ್ತಿದ್ದಾನೆ ಎಂದು ಆರೋಪಿಸಲಾಗಿದೆ.

ಐದಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಇದೇ ರೀತಿಯ ಕಿರುಕುಳ ನೀಡಿರುವ ಮಾಹಿತಿ ಹೊರಬಿದ್ದ ಹಿನ್ನೆಲೆಯಲ್ಲಿ ಆಕ್ರೋಶಗೊಂಡ ಪೋಷಕರು ಶಾಲೆಗೆ ಆಗಮಿಸಿ ಶಿಕ್ಷಕನನ್ನು ತರಾಟೆಗೆ ತೆಗೆದುಕೊಂಡು ಥಳಿಸಿದ್ದಾರೆ. ಈ ವೇಳೆ ಶಾಲಾ ಆವರಣದಲ್ಲಿ ಕೆಲಕಾಲ ಉದ್ವಿಗ್ನ ವಾತಾವರಣ ನಿರ್ಮಾಣವಾಗಿತ್ತು.

ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆ ಘಟನಾ ಸ್ಥಳಕ್ಕೆ ಧಾವಿಸಿದ ಪೊಲೀಸರು ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತೆಗೆದುಕೊಂಡು ಶಿಕ್ಷಕ ಶ್ರೀಶೈಲ್ ಕುಂಬಾರನನ್ನು ವಶಕ್ಕೆ ಪಡೆದಿದ್ದಾರೆ. ಬಳಿಕ ಪೋಷಕರು ಹಾಗೂ ಶಾಲಾ ಸಿಬ್ಬಂದಿಯಿಂದ ಮಾಹಿತಿ ಸಂಗ್ರಹಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಗುತ್ತಿದ್ದು, ಆರೋಪಗಳ ಕುರಿತು ಸಮಗ್ರ ತನಿಖೆ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಶಿವಸೇನೆಯಲ್ಲಿ ಮತ್ತೆ ಬಂಡಾಯ? ವಿಭಜನೆಯ ಚರ್ಚೆ

• **ಮುಂಬೈ:** ಮಹಾರಾಷ್ಟ್ರ ರಾಜಕೀಯದಲ್ಲಿ ಮತ್ತೊಮ್ಮೆ ಶಿವಸೇನೆ ವಿಭಜನೆಯ ಚರ್ಚೆ ಜೋರಾಗಿದೆ. ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನೆ(ಯುಬಿಟಿ) ಪಕ್ಷದ 14ರಿಂದ 16 ಶಾಸಕರು ಹಾಗೂ 6 ಸಂಸದರು ಮುಂದಿನ ವಾರದಲ್ಲೇ ಏಕನಾಥ ಶಿಂಧೆ ಬಣದತ್ತ ಮುಖ ಮಾಡುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ.

ಶಿಂಧೆ ಬಣದ ನಾಯಕರಿಂದ ನಡೆಯುತ್ತಿದೆ ಎನ್ನಲಾದ ಆಪರೇಷನ್ ಟೈಗರ್ ಅಂತಿಮ ಹಂತ ತಲುಪಿದ್ದು, ಉದ್ಧವ್ ಬಣದ ಹಲವು ಜನಪ್ರತಿನಿಧಿಗಳೊಂದಿಗೆ ಮಾತುಕತೆ ನಡೆದಿದೆ ಎಂದು ಹೇಳಲಾಗಿದೆ. ಈ ಬೆಳವಣಿಗೆ ಯಶಸ್ವಿಯಾದರೆ 2022ರ ಬಂಡಾಯದ ಬಳಿಕ ಶಿವಸೇನೆಯಲ್ಲಿ ಮತ್ತೊಂದು ರಾಜಕೀಯ ಭೂಕಂಪ ಸಂಭವಿಸುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ. ಇದರ ಮಧ್ಯೆ, ಪಕ್ಷದಲ್ಲಿ ಅಸಮಾಧಾನ ಹೆಚ್ಚುತ್ತಿದೆ ಎಂಬ ಸುದ್ದಿಗಳಿಗೆ ತೆರೆ ಎಳೆಯಲು ಉದ್ಧವ್ ಠಾಕ್ರೆ ಮುಂದಾಗಿದ್ದು, ಜೂನ್ 22ರಂದು ಪಕ್ಷದ ಎಲ್ಲ ಶಾಸಕರು ಹಾಗೂ ವಿಧಾನಪರಿಷತ್ ಸದಸ್ಯರ ಸಭೆಯನ್ನು ಕರೆದಿದ್ದಾರೆ. ಮುಂಗಾರು ಅಧಿವೇಶನ ಆರಂಭವಾಗುವ ದಿನವೇ ಈ ಸಭೆ ನಡೆಯಲಿದ್ದು, ಪಕ್ಷದ ಏಕತೆಯನ್ನು ಪ್ರದರ್ಶಿಸುವ ಪ್ರಯತ್ನವೆಂದು ವಿಶ್ಲೇಷಿಸಲಾಗಿದೆ.

ನೀಟ್ ಅಕ್ರಮ ತಡೆಗೆ ಟೆಲಿಗ್ರಾಂಗೆ ನಿರ್ಬಂಧ

ಪುಟ 1➡ ಅಲ್ಲದೇ ಮೇ ತಿಂಗಳಲ್ಲಿ ಸೋರಿಕೆಯಾದ ನೀಟ್ ಪ್ರಶ್ನೆಪತ್ರಿಕೆಯನ್ನು ಟೆಲಿಗ್ರಾಂ ಮೂಲಕವೇ ಕಳುಹಿಸಲಾಗಿತ್ತು. ಇಂತಹ ದುಷ್ಕೃತ್ಯ ತಡೆಯುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಹೇಳಿದೆ. ಹಲವು ಟೆಲಿಗ್ರಾಂ ಚಾನೆಲ್‌ಗಳು ಪೇಪರ್ ಲೀಕ್ ನೀಟ್, ರೀ-ನೀಟ್ 2026, ಖಾಸಗಿ ಮಾಫಿಯಾ ಮತ್ತು ರೀ ನೀಟ್ ಮಾಫಿಯಾ ಮುಂತಾದ ಹೆಸರುಗಳನ್ನು ಬಳಸಿಕೊಂಡು ಪರೀಕ್ಷಾ ಪತ್ರಿಕೆಗಳಿಗೆ ಪ್ರವೇಶವನ್ನು ಬಹಿರಂಗವಾಗಿ ಜಾಹೀರಾತು ಮಾಡಿವೆ ಎಂದು ಎನ್‌ಟಿಎ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ಉಲ್ಲೇಖಿಸಲಾಗಿದೆ. ಜೂ.21ರಂದು ದೇಶಾದ್ಯಂತ ಬಿಗಿಯಾದ ಭದ್ರತೆಯೊಂದಿಗೆ ನೀಟ್ ಮರುಪರೀಕ್ಷೆ ನಡೆಯಲಿದ್ದು, ಪರೀಕ್ಷೆಗೆ ಸಂಬಂಧಿಸಿದ ಯಾವುದೇ ಮಾಹಿತಿ ಅಥವಾ ಪ್ರಶ್ನೆಪತ್ರಿಕೆಗಳು ಸಾಮಾಜಿಕ ಮಾಧ್ಯಮಗಳಲ್ಲಿ ಸೋರಿಕೆಯಾಗದಂತೆ ತಡೆಯಲು ಈ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಾಗಿದೆ.

ಪ್ಲೇ ಸ್ಟೋರ್‌ನಲ್ಲಿ ಸಿಕ್ತಿಲ್ಲ ಟೆಲಿಗ್ರಾಂ: ಈ ಬೆನ್ನಲ್ಲೇ ಕೇಂದ್ರ ಸರ್ಕಾರ ಪ್ಲೇ ಸ್ಟೋರ್‌ನಿಂದ ಟೆಲಿಗ್ರಾಂ ಅಪ್ಲಿಕೇಶನ್‌ನ್ನು ತಾತ್ಕಾಲಿಕವಾಗಿ ತೆಗೆದುಹಾಕುವಂತೆ ಸರ್ಕಾರವು ಗೂಗಲ್ ಮತ್ತು ಆ್ಯಪಲ್‌ಗೆ ಆದೇಶಿಸಿದೆ. ಸದ್ಯ ಗೂಗಲ್ ತನ್ನ ಪ್ಲೇ ಸ್ಟೋರ್‌ನಿಂದ ಟೆಲಿಗ್ರಾಂ ತೆಗೆದುಹಾಕಿದೆ. ಶೀಘ್ರವೇ ಆ್ಯಪಲ್ ಕೂಡ ಕೇಂದ್ರದ ಆದೇಶವನ್ನು ಪಾಲಿಸಲಿದೆ ಎಂದು ಮೂಲಗಳು ತಿಳಿಸಿವೆ.

ಆನೆ-ಮಾನವ ಸಂಘರ್ಷ ಬಗೆಹರಿಸಿ

• **ಮಡಿಕೇರಿ:** ಕೊಡಗು ಜಿಲ್ಲೆಯಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಆನೆ-ಮಾನವ ಸಂಘರ್ಷಕ್ಕೆ ಶಾಶ್ವತ ಪರಿಹಾರ ಕಲ್ಪಿಸುವುದು ಹಾಗೂ ಮೈಸೂರಿನ ತಿಪ್ಪಯ್ಯನ ಕೆರೆಯಲ್ಲಿ ನಗರ ವನ (ನಗರ್ ವನ್) ಯೋಜನೆ ಜಾರಿಗೊಳಿಸುವ ಸಂಬಂಧ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವ ಭೂಪೇಂದ್ರ ಯಾದವ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು.

ಈ ಸಂದರ್ಭ ಮಾತನಾಡಿದ ಯದುವೀರ್ ಒಡೆಯರ್ ಅವರು, ಕೊಡಗು ಜಿಲ್ಲೆಯ ವಿವಿಧ ಭಾಗಗಳಲ್ಲಿ ಆನೆಗಳು ಕೃಷಿ ಭೂಮಿ ಮತ್ತು ಜನವಸತಿ ಪ್ರದೇಶಗಳಿಗೆ ನುಗ್ಗುತ್ತಿರುವ ಘಟನೆಗಳು ನಿರಂತರವಾಗಿ ಹೆಚ್ಚುತ್ತಿದ್ದು, ಇದು ಜಿಲ್ಲೆಯ ಜನರ ಪ್ರಮುಖ ಸಮಸ್ಯೆಯಾಗಿ ಪರಿಣಮಿಸಿದೆ ಎಂದು ಸಚಿವರ ಗಮನಕ್ಕೆ ತಂದರು. ವಿಶೇಷವಾಗಿ ಅರಣ್ಯ ದಂಚಿನ ಗ್ರಾಮಗಳಲ್ಲಿ ವಾಸಿಸುವ ರೈತರು, ತೋಟಗಾರರು ಮತ್ತು ಕಾರ್ಮಿಕರು ಈ



ಸಮಸ್ಯೆಯಿಂದ ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದು ಯದುವೀರ್ ಗಮನಸೆಳೆದರು.

ವನ್ಯಜೀವಿ ಸಂರಕ್ಷಣೆ ಅತ್ಯಂತ ಮುಖ್ಯವಾದರೂ, ಅರಣ್ಯದಂಚಿನ ಪ್ರದೇಶಗಳಲ್ಲಿ ವಾಸಿಸುವ ಜನರ ಜೀವ ಮತ್ತು ಜೀವನೋಪಾಯದ ರಕ್ಷಣೆಯೂ ಅಷ್ಟೇ ಮಹತ್ವದ್ದಾಗಿದೆ ಎಂದು ಯದುವೀರ್ ಹೇಳಿದರು. ಮೈಸೂರಿನ ಹೊರವರ್ತುಲ ರಸ್ತೆಯ ಸಮೀಪ, ಸರ್ದಾರ್ ವಲ್ಲಭಭಾಯಿ ಪಟೇಲ್ ನಗರದ ಬಳಿ ಇರುವ ತಿಪ್ಪಯ್ಯನ ಕೆರೆಯನ್ನು ನಗರ ವನ ಯೋಜನೆಯಡಿ ಅಭಿವೃದ್ಧಿಪಡಿಸುವಂತೆ ಪ್ರತ್ಯೇಕ ಮನವಿಯನ್ನೂ ಸಂಸದರು ಸಲ್ಲಿಸಿದರು.

ಬಲವಂತದ ಮತಾಂತರ: ಇಬ್ಬರು ಮುಸ್ಲಿಮರ ಸೆರೆ

ಪುಟ 1➡ ಜಮೀನು ಖರೀದಿಸುವ ನೆಪದಲ್ಲಿ ಫೆ.8, 2025ರಂದು ಆಕೆಯನ್ನು ವರ್ತೂರು ರಸ್ತೆಯ ಹೋಟೆಲ್‌ಗೆ ಕರೆಸಿದ್ದ. ಅಲ್ಲಿ ಆಕೆಗೆ ನಶೆಯುಕ್ತ ಪಾನೀಯ ನೀಡಲಾಗಿತ್ತು. ಮಹಿಳೆ ಪ್ರಜ್ಞೆ ತಪ್ಪಿದಾಗ ಆಕೆಯ ಅಶ್ಲೀಲವಾದ ಚಿತ್ರಗಳು ಮತ್ತು ವಿಡಿಯೋಗಳನ್ನು ಚಿತ್ರೀಕರಿಸಲಾಗಿತ್ತು. ವಿಡಿಯೋಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುವುದಾಗಿ ಮತ್ತು ಗಂಡನಿಗೆ ಕಳುಹಿಸುವುದಾಗಿ ಬೆದರಿಸಿ ಆರೋಪಿಗಳು ಸುಮಾರು 4 ಲಕ್ಷ ರೂ. ಹಣವನ್ನು ಸುಲಿಗೆ ಮಾಡಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ. ಅಷ್ಟೇ ಅಲ್ಲ, ಆರೋಪಿಯು ಬಾಟಲಿಯಲ್ಲಿದ್ದ ಯಾವುದೋ ದ್ರವವನ್ನು ಬಲವಂತವಾಗಿ ಕುಡಿಸಿ, ಉರ್ದು ಶ್ಲೋಕಗಳನ್ನು ಪಠಿಸಿ ಮುಖಕ್ಕೆ ಊದುತ್ತಿದ್ದ. ಇದು ಸಮ್ಮೋಹನ ಮತ್ತು ಮಾಟಮಂತ್ರ ಎಂದು ಹೇಳಿ ಆಕೆಯ ಮೇಲೆ ನಿರಂತರವಾಗಿ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ.

ಮತ್ತೊಬ್ಬ ಆರೋಪಿಗಾಗಿ ಶೋಧ

ಇತ್ತೀಚೆಗೆ ಮಹಿಳೆಯ ಪತಿ ನಾಗಪುರಕ್ಕೆ ಮರಳಿದಾಗ, ಸಂತ್ರಸ್ತೆ ತನಗಾದ ಅನ್ಯಾಯವನ್ನು ವಿವರಿಸಿದ್ದಾರೆ. ತಕ್ಷಣವೇ ದಂಪತಿ ಸೋನೆಗಾಂವ್ ಪೊಲೀಸ್ ಠಾಣೆಗೆ ತೆರಳಿ ದೂರು ದಾಖಲಿಸಿದ್ದಾರೆ. ಪೊಲೀಸರು ಮುಖ್ಯ ಆರೋಪಿ ಆಯಾಜ್ ಖಾನ್ ಮದಾರಿ (26), ಅಮೀನ್ ಶೇಖ್ (30)ನನ್ನು ಬಂಧಿಸಿದ್ದಾರೆ. ತಲೆಮರೆಸಿಕೊಂಡಿರುವ ಹಾಜಿದ್ ಮೌಲಾನಾಗಾಗಿ ಶೋಧ ಮುಂದುವರಿದಿದೆ.

ಕುಮಾರಸ್ವಾಮಿ ಮಾತು ಅಪ್ಪಟ ಸುಳ್ಳು: ಎಂ.ಲಕ್ಷ್ಮಣ್

• **ಬೆಂಗಳೂರು:** ಬಿಡದಿ ಟೌನ್‌ಶಿಪ್‌ಗೆ ಶೇ.80ರಷ್ಟು ರೈತರು ಭೂಮಿ ನೀಡಲು ಒಪ್ಪಿಗೆ ನೀಡಿಲ್ಲ ಎಂಬ ಕುಮಾರಸ್ವಾಮಿ ಅವರ ಮಾತು ಅಪ್ಪಟ ಸುಳ್ಳು, 663 ರೈತರು ಮಾತ್ರ ಯಾವುದೇ ಕಾರಣಕ್ಕೆ ಜಮೀನು ಬಿಟ್ಟುಕೊಡುವುದಿಲ್ಲ ಎಂದು ಹೇಳಿದ್ದಾರೆ. ಇವರ ಒಟ್ಟು ಜಾಗ 1,348 ಎಕರೆ. ಅಂದರೆ ಶೇ.11 ರಷ್ಟು ರೈತರು ಮಾತ್ರ ಭೂಮಿ ಕೊಡಲ್ಲ ಎಂದು ಹೇಳುತ್ತಿದ್ದಾರೆ ಎಂದು ಕಾಂಗ್ರೆಸ್ ವಕ್ತಾರ ಎಂ. ಲಕ್ಷ್ಮಣ್ ತಿಳಿಸಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಯೋಜನೆಯಲ್ಲಿ ಜಮೀನು ಪಡೆದು ನಿವೇಶನ ಮಾಡಿ ಅದನ್ನು ಬೇರೆಯವರಿಗೆ ಹಂಚುವ ಉದ್ದೇಶವಿಲ್ಲ, ಕೈಗಾರಿಕಾ ಕಾರಿಡಾರ್ ಮಾಡುವ 7,481 ಎಕರೆ ಜತೆಗೆ ರೆಸಿಡೆನ್ಷಿಯಲ್ ಕಾರಿಡಾರ್ ನಿರ್ಮಿಸಲಾಗುತ್ತಿದೆ. ಭೂಮಿಯನ್ನು ವಶಪಡಿಸಿಕೊಂಡು ನೀಡುವುದಷ್ಟೇ ನಮ್ಮ ಕೆಲಸ. ಉಳಿದ ಟೌನ್‌ಶಿಪ್ ಅನ್ನು ಅವರೇ ನಿರ್ಮಾಣ ಮಾಡಿಕೊಳ್ಳುತ್ತಾರೆ ಎಂದರು. ನಮ್ಮ ಕಾಂಗ್ರೆಸ್ ಸರ್ಕಾರ 50:50 ಅನುಪಾತದಲ್ಲಿ ಅಭಿವೃದ್ಧಿಪಡಿಸಿದ ಭೂಮಿ ನೀಡಲು ತೀರ್ಮಾನಿಸಲಾಗಿದೆ. ಮೂಲ ಸೌಕರ್ಯ ಬಳಿಕ ನಂತರ ಉಳಿಯುವ ಜಾಗದಲ್ಲಿ ರೈತರಿಗೆ 9,600 ಚ.ಅಡಿಯಷ್ಟು ಭೂಮಿಯನ್ನು ನೀಡಲಾಗುತ್ತಿದೆ ಎಂದು ತಿಳಿಸಿದರು.

12 ಕಡೆ ಲೋಕಾಯುಕ್ತ ದಾಳಿ

• ದಾವಣಗೆರೆ: ಆದಾಯ ಮೀರಿ ಆಸ್ತಿ ಗಳಿಸಿದ ಆರೋಪದ ಮೇರೆಗೆ ಬೇರೆ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೂವರು ಅಧಿಕಾರಿಗಳ ಕಚೇರಿ ಜತೆಗೆ ದಾವಣಗೆರೆ ನಿವಾಸಗಳು ಸೇರಿದಂತೆ ಒಟ್ಟು 12 ಕಡೆ ಮಂಗಳವಾರ ಬೆಳ್ಳಂಬೆಳಗ್ಗೆಯೇ ಲೋಕಾಯುಕ್ತ ಅಧಿಕಾರಿಗಳ ತಂಡ ದಾಳಿ ನಡೆಸಿ, ಅಪಾರ ಸಂಪತ್ತು, ಆಸ್ತಿಪತ್ರಗಳನ್ನು ಪತ್ತೆ ಮಾಡಿದೆ.

ಚಿತ್ರದುರ್ಗದ ಬಯಲು ಸೀಮೆ ಅಭಿವೃದ್ಧಿ ಮಂಡಳಿ ಕಾರ್ಯದರ್ಶಿ ಕೃಷ್ಣಾ ನಾಯ್ಕ, ಹುಬ್ಬಳ್ಳಿಯ ನೈರುತ್ಯ ಕೆಎಸ್‌ಆರ್‌ಟಿಸಿ ಮುಖ್ಯ ಯಾಂತ್ರಿಕ(ಮೆಕ್ಯಾನಿಕಲ್) ವಿಭಾಗದ ಇಂಜಿನಿಯರ್ ಸಿದ್ದೇಶ್ವರ ಹೆಬ್ಬಾಳ್ ಹಾಗೂ ಕೆಆರ್‌ಐಡಿಎಲ್ ಅಧೀಕ್ಷಕ ಅಭಿಯಂತರ ಸಣ್ಣಕೆಂಚಪ್ಪ ನಿವಾಸಗಳ ಮೇಲೆ ಲೋಕಾಯುಕ್ತ ಅಧಿಕಾರಿಗಳ ತಂಡ ದಾಳಿ ನಡೆಸಿವೆ.

ನಗರದ ಸಿದ್ದವೀರಪ್ಪ ಬಡಾವಣೆಯಲ್ಲಿರುವ ಕೃಷ್ಣಾನಾಯ್ಕರ 2 ಮನೆ, ಆಂಜನೇಯ ಬಡಾವಣೆಯಲ್ಲಿರುವ ಸಿದ್ದೇಶ್ವರ ಹೆಬ್ಬಾಳ್ ನಿವಾಸ ಹಾಗೂ ಇತರೆಡೆ, ಶಿವಕುಮಾರಸ್ವಾಮಿ ಬಡಾವಣೆಯಲ್ಲಿರುವ ಸಣ್ಣಕೆಂಚಪ್ಪ ನಿವಾಸ ಮತ್ತು ಕಚೇರಿಗಳ ಮೇಲೆ ದಾಳಿ ನಡೆಸಿ, ದಾಖಲೆ ಆಸ್ತಿಪತ್ರ, ನಗದು, ಚಿನ್ನ, ಬೆಳ್ಳಿ ಪರಿಶೀಲನೆಯಲ್ಲಿ ಲೋಕಾಯುಕ್ತ ಅಧಿಕಾರಿಗಳು ತೊಡಗಿದ್ದಾರೆ. ಸಣ್ಣಕೆಂಚಪ್ಪನವರ ಹರಪನಹಳ್ಳಿಯಲ್ಲಿರುವ ಮನೆ ಸೇರಿದಂತೆ ವಿವಿಧ ಸ್ಥಳಗಳ ಮೇಲೂ ದಾಳಿ ಮಾಡಿ ಪರಿಶೀಲನೆ ನಡೆಸಲಾಗಿದೆ. ಮೂವರೂ ಅಧಿಕಾರಿಗಳ ಕಚೇರಿ, ಮನೆ, ಇತರೆ ಸ್ಥಳಗಳ ಮೇಲೆ ಲೋಕಾಯುಕ್ತ ಅಧಿಕಾರಿಗಳು ಪ್ರತ್ಯೇಕ ತಂಡಗಳಲ್ಲಿ ಏಕಕಾಲಕ್ಕೆ ದಾಳಿ ಮಾಡಿದ್ದು, ಅಕ್ರಮ ಆಸ್ತಿ ಸಂಪಾದನೆಗೆ ಸಂಬಂಧಿಸಿದ ದಾಖಲೆ ಕಲೆ ಹಾಕುವ ಕಾರ್ಯದಲ್ಲಿ ಮಗ್ನರಾಗಿದ್ದಾರೆ. ದಾಳಿ ವೇಳೆ ಅಧಿಕಾರಿಗಳ ಮನೆಗಳಲ್ಲಿ ಅಪಾರ ಪ್ರಮಾಣದ ನಗದು, ಚಿನ್ನಾಭರಣ, ಚರ ಮತ್ತು ಸ್ಥಿರಾಸ್ತಿಗಳಿಗೆ ಸಂಬಂಧಿಸಿದ ದಾಖಲೆಗಳೂ ಪತ್ತೆಯಾಗಿವೆ. ಸಿದ್ದೇಶ್ವರ ಹೆಬ್ಬಾಳ್ ನಿವಾಸದಲ್ಲಿ ಸುಮಾರು 40 ಲಕ್ಷ ರೂ. ನಗದು ಪತ್ತೆಯಾಗಿದೆ. ಮೂವರೂ ಅಧಿಕಾರಿಗಳ ಮನೆ, ಕಚೇರಿ ಇತರೆಡೆ ಮಂಗಳವಾರ ಸಂಜೆಯೂ ಪರಿಶೀಲನೆ ಕಾರ್ಯ ಮುಂದುವರೆದಿತ್ತು. ದಾಳಿಯಲ್ಲಿ ಪತ್ತೆಯಾದ ದಾಖಲೆ, ನಗದು, ಸ್ಥಿರ ಮತ್ತು ಚರಾಸ್ತಿಗಳ ದಾಖಲೆಗಳ ಮೌಲ್ಯ ಮಾಪನ ಪ್ರಕ್ರಿಯೆ ನಡೆಯುತ್ತಿದ್ದು, ದಾವಣಗೆರೆ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಎಂ.ಎಸ್.ಕೌಲಾಪೂರೆ ಪ್ರತಿಕ್ರಿಯಿಸಿದ್ದಾರೆ.

ಸಿಎಂ ಭೇಟಿ



ಬಯೋಕಾನ್ ಮುಖ್ಯಸ್ಥೆ ಕಿರಣ್ ಮಜುಂದಾರ್ ಶಾ ಸೇರಿದಂತೆ ಇನ್ನಿತರೆ ಉದ್ಯಮಿಗಳು ಮತ್ತು ವಿವಿಧ ದೇಶಗಳ ಗೌರವಾನ್ವಿತ ರಾಯಭಾರಿಗಳ ನಿಯೋಗವು ವಿಧಾನಸೌಧದಲ್ಲಿ ಮಂಗಳವಾರ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿ ಅಭಿನಂದನೆ ಸಲ್ಲಿಸಿತು.

59 ಜೀವಂತ ಗುಂಡು ಪತ್ತೆ: ತನಿಖೆ

• ಬೆಳಗಾವಿ: ನಗರದ ಪ್ರಮುಖ ಕೈಗಾರಿಕಾ ಪ್ರದೇಶವಾದ ಉದ್ಯಮಬಾಗದಲ್ಲಿ ಕಸದ ರಾಶಿಯಿಂದ ಬರೋಬ್ಬರಿ 59 ಜೀವಂತ ಗುಂಡುಗಳು ಪತ್ತೆಯಾಗಿರುವ ಘಟನೆ ಸಾರ್ವಜನಿಕರಲ್ಲಿ ಆತಂಕಕ್ಕೆ ಕಾರಣವಾಗಿದೆ. ಕೈಗಾರಿಕಾ ವಲಯದಲ್ಲಿ ನಡೆದ ಈ ಅಚ್ಚರಿ ಬೆಳವಣಿಗೆ ಹಲವು ಪ್ರಶ್ನೆಗಳನ್ನು ಹುಟ್ಟು ಹಾಕಿದ್ದು, ಪೊಲೀಸರು ತನಿಖೆ ತೀವ್ರಗೊಳಿಸಿದ್ದಾರೆ.

ಬೆಳಗ್ಗೆ ಪಾಲಿಕೆ ಪೌರಕಾರ್ಮಿಕರು ಎಂದಿನಂತೆ ಉದ್ಯಮ ಬಾಗದ ರಸ್ತೆಯ ಬದಿಯಲ್ಲಿ ಸಂಗ್ರಹವಾಗಿದ್ದ ಕಸವನ್ನು ವಿಂಗಡಿಸುವ ಕಾರ್ಯದಲ್ಲಿ ತೊಡಗಿದ್ದರು. ಈ ವೇಳೆ ಕಸದ ರಾಶಿಯೊಳಗೆ ಅನುಮಾನಾಸ್ಪದ ವಸ್ತುಗಳು ಕಂಡುಬಂದಿದ್ದು, ಪರಿಶೀಲಿಸಿದಾಗ ಅವು ಜೀವಂತ ಗುಂಡುಗಳಾಗಿರುವುದು ಬೆಳಕಿಗೆ ಬಂದಿದೆ. ತಕ್ಷಣವೇ ಎಚ್ಚೆತ್ತ ಕಾರ್ಮಿಕರು ಯಾವುದೇ ಅಪಾಯ ಸಂಭವಿಸದಂತೆ ಸ್ಥಳವನ್ನು ಸುರಕ್ಷಿತಗೊಳಿಸಿ ಉದ್ಯಮಬಾಗ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದಾರೆ. ಮಾಹಿತಿ ತಿಳಿಯುತ್ತಿದ್ದಂತೆ ಪೊಲೀಸರು ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿ, ಕಸದ ರಾಶಿಯಿಂದ ಒಟ್ಟು 59 ಜೀವಂತ ಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಆರೆಸ್ಸೆಸ್ ದೇಣಿಗೆ ಪಡೆದಿಲ್ಲ: ಭಾಂಡಗೆ

• ಬಾಗಲಕೋಟೆ: ಆರ್‌ಎಸ್‌ಎಸ್‌ಗೆ ಸರ್ಕಾರದಿಂದ ದುಡ್ಡು ಬಂದಿಲ್ಲ, ಅನುದಾನ ಕೂಡ ಕೊಟ್ಟಿಲ್ಲ, ಸಾರ್ವಜನಿಕರಿಂದ ಹಣವನ್ನು ದೇಣಿಗೆ ಪಡೆದಿಲ್ಲ, ಯಾವ ಲೆಕ್ಕ ಕೊಡಬೇಕು ಎಂದು ಖರ್ಗೆ ಹೇಳಿಕೆಗೆ ರಾಜ್ಯಸಭೆ ಸದಸ್ಯ ನಾರಾಯಣಸಾ ಭಾಂಡಗೆ ತಿರುಗೇಟು ನೀಡಿದರು.

ನವನಗರದ ಪತ್ರಿಕಾಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಗೃಹ ಸಚಿವರಿಗೆ ಆರ್‌ಎಸ್‌ಎಸ್ ಬಗ್ಗೆ ಮಾತನಾಡಿದರೆ ದೊಡ್ಡವನಾಗಿ ಬಿಡುತ್ತೇನೆ ಎಂದು ಆರ್‌ಎಸ್‌ಎಸ್. ಬಗ್ಗೆ ಅನವಶ್ಯಕ ಹೇಳಿಕೆಯನ್ನು ನೀಡುತ್ತಿದ್ದಾರೆ. ಸಮರ್ಥ ಭಾರತ, ಶಕ್ತಿಶಾಲಿ, ವಿಕಸಿತ ಭಾರತವನ್ನು ಜಗತ್ತಿನಲ್ಲಿ ಗುರುವಿನ ಸ್ಥಾನಕ್ಕೆ ಮೋದಿಯವರು ತೆಗೆದುಕೊಂಡು ಹೋಗಿದ್ದಾರೆ ಎಂದು ಹೇಳಿದರು. ಸಂಸದ ಪಿ.ಸಿ.ಗದ್ದಿಗೌಡರ, ಮಾಜಿ ಶಾಸಕ ಎಂ.ಕೆ.ಪಟ್ಟಣಶೆಟ್ಟಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಲ್ಲಯ್ಯ ಮೂಗನೂರಮಠ, ಬೆಳಗಾವಿ ಸಹ ಪ್ರಭಾರಿ ಬಸವರಾಜ ಯಂಕಂಚಿ, ಹೂವಪ್ಪ ರಾಠೋಡ ಪತ್ರಿಕಾಗೋಷ್ಠಿಯಲ್ಲಿದ್ದರು.

ಕಿರುಸುದ್ದಿ

ಡಾ.ಡಿ.ವೀರೇಂದ್ರ ಹೆಗ್ಗಡೆ ಅವರಿಗೆ ಸಿದ್ಧಶ್ರೀ ಪ್ರಶಸ್ತಿ

• ಕೊರಟಗೆರೆ: ಸಸ್ಯಸಂಜೀವಿನಿ ಕ್ಷೇತ್ರ ಸಿದ್ದರಬೆಟ್ಟ ಶ್ರೀಮಠದಲ್ಲಿ ಜೂ.21ರ ಭಾನುವಾರ ನಡೆಯುವ 20ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರಿಗೆ ಶ್ರೀಮಠದ ಸಿದ್ಧಶ್ರೀ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಬಾಳೆಹೊನ್ನೂರು ಖಾಸಾ ಶಾಖಾ ಶ್ರೀಮಠದ ಶ್ರೀವೀರಭದ್ರ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.



ಕೊರಟಗೆರೆ ಪಟ್ಟಣದ ಬಸವೇಶ್ವರ ದೇವಾಲಯದಲ್ಲಿ ಸಿದ್ದರಬೆಟ್ಟ ಶ್ರೀಮಠ ಮತ್ತು ಅಖಿಲ ಭಾರತ ವೀರಶೈವ ಮಹಾಸಭಾ ವತಿಯಿಂದ ಮಂಗಳವಾರ ಏರ್ಪಡಿಸಲಾಗಿದ್ದ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದರು. ಸಿದ್ದರಬೆಟ್ಟ ಶ್ರೀಮಠದಿಂದ ನಡೆಯಲಿರುವ 20ನೇ ವಾರ್ಷಿಕೋತ್ಸವ ಮತ್ತು ಧರ್ಮಜಾಗೃತಿ ಕಾರ್ಯಕ್ರಮಕ್ಕೆ ಈಗಾಗಲೇ 15ಜೋಡಿಗಳು ನೋಂದಣಿ ಆಗಿದೆ. ಜೂ.20ರ ತನಕ ನೋಂದಣಿಗೆ ಅವಕಾಶ ಕಲ್ಪಿಸಲಾಗಿದೆ ಎಂದು ಶ್ರೀಗಳು ಮಾಹಿತಿ ನೀಡಿದರು.

ಎಸ್‌ಐಟಿ ತಂಡದ ಕಾರು ಪಲ್ಟಿ

• ಬೆಳ್ತಂಗಡಿ: ಧರ್ಮಸ್ಥಳ ಗ್ರಾಮದ ಬುರುಡೆ ಪ್ರಕರಣದ ಎಸ್‌ಐಟಿ ತಂಡದ ಎಸ್ಪಿ ಮತ್ತು ಇತರ ಅಧಿಕಾರಿಗಳು ಪ್ರಯಾಣಿಸುತ್ತಿದ್ದ ಇನೋವಾ ಕಾರು ಚಾರ್ಮಾಡಿ ಘಾಟ್ ಬಳಿ ನಿಯಂತ್ರಣ ತಪ್ಪಿ ಪಲ್ಟಿಯಾಗಿದೆ. ಬೆಳ್ತಂಗಡಿ ಎಸ್‌ಐಟಿ ಕಚೇರಿಯಿಂದ ಎಸ್ಪಿ ಸಿ.ಎ. ಸೈಮನ್, ಇನ್ಸ್‌ಪೆಕ್ಟರ್ ಕುಸುಮಾಧರ್, ಸಿಬ್ಬಂದಿ ಮಂಜುನಾಥ್ ಸೇರಿ ಚಿಕ್ಕಮಗಳೂರು ಜಿಲ್ಲಾ ಎಸ್ಪಿ ಹಾಗೂ ಎಸ್‌ಐಟಿ ಮುಖ್ಯಾಧಿಕಾರಿಯಾಗಿರುವ ಜಿತೇಂದ್ರಕುಮಾರ್ ದಯಾಮ ಅವರನ್ನು ಭೇಟಿ ಮಾಡಿ ಬುರುಡೆ ಪ್ರಕರಣದ ಚಿನ್ನಯ್ಯ ಹೈಕೋರ್ಟ್ ರಿಟ್ ಪಿಟಿಷನ್ ಹಾಕಿರುವ ಬಗ್ಗೆ ಮಾತುಕತೆ ನಡೆಸಲು ತೆರಳುತ್ತಿದ್ದಾಗ ಜೂ.16 ರಂದು ಮಧ್ಯಾಹ್ನ ಚಾರ್ಮಾಡಿಯಲ್ಲಿ ನಿಯಂತ್ರಣ ತಪ್ಪಿ ಪೊಲೀಸ್ ಇಲಾಖೆ ಇನೋವಾ ಕಾರು ಪಲ್ಟಿಯಾಗಿದೆ. ಇನೋವಾ ಕಾರಿನಲ್ಲಿ ಚಾಲಕ ಸೇರಿ ಒಟ್ಟು ನಾಲ್ಕು ಜನ ಪ್ರಯಾಣಿಸುತ್ತಿದ್ದರು. ಘಟನೆಯಲ್ಲಿ ಯಾರಿಗೂ ಯಾವುದೇ ಗಾಯವಾಗಿಲ್ಲ, ಇನೋವಾ ಕಾರು ಪಲ್ಟಿ ರಭಸಕ್ಕೆ ಹಾನಿಯಾಗಿದ್ದು, ಈ ಬಗ್ಗೆ ಬೆಳ್ತಂಗಡಿ ಸಂಚಾರಿ ಪೊಲೀಸ್ ಠಾಣೆಯಲ್ಲಿ ದೂರು ನೀಡಲು ಕಾರಿನಲ್ಲಿದ್ದ 4 ಜನ ಆಗಮಿಸಿದ್ದಾರೆ.

ಬಸ್–ಕ್ಯಾಂಟರ್ ಅಪಘಾತ: ಮೂವರ ಸಾವು

• ಚಡಚಣ: ಚಡಚಣ ತಾಲೂಕಿನಲ್ಲಿ ಒಂದೇ ದಿನದ ಅಂತರದಲ್ಲಿ ಮತ್ತೊಂದು ಭೀಕರ ರಸ್ತೆ ಅಪಘಾತ ಸಂಭವಿಸಿದ್ದು, ಕೆಎಸ್‌ಆರ್‌ಟಿಸಿ ಬಸ್ ಹಾಗೂ ಸಿಮೆಂಟ್ ಸಾಗಿಸುತ್ತಿದ್ದ ಕ್ಯಾಂಟರ್ ನಡುವೆ ನಡೆದ ಮುಖಾಮುಖಿ ಡಿಕ್ಕಿಯಲ್ಲಿ ಮೂವರು ಮೃತಪಟ್ಟಿದ್ದು, 27ಕ್ಕೂ ಹೆಚ್ಚು ಪ್ರಯಾಣಿಕರು ಗಾಯಗೊಂಡಿದ್ದಾರೆ. ರಾಜ್ಯ ಹೆದ್ದಾರಿ 41ರ ಬರಡೋಲ ಗ್ರಾಮ ಹಾಗೂ ಲೋಣಿ ಕ್ರಾಸ್ ನಡುವೆ ಚಡಚಣ ಪೊಲೀಸ್ ಸರಹದ್ದಿನಲ್ಲಿ ಮಂಗಳವಾರ ಬೆಳಗ್ಗೆ ಈ ದುರ್ಘಟನೆ ನಡೆದಿದೆ. ಅಪಘಾತದ ತೀವ್ರತೆಗೆ ಬಸ್ ಚಾಲಕ ಹಣಮಂತ ಚಲವಾದಿ(38) ನಿಡಗುಂದಿ, ಕ್ಯಾಂಟರ್ ಚಾಲಕ ಅಶೋಕ ಮಹಾದೇವ ಉಟಗಿ (32) ಹಾಗೂ ಅವರ ಪತ್ನಿ ರಾಧಾಬಾಯಿ ಅಶೋಕ ಉಟಗಿ (28), ಹಾವಿನಾಳ ಗ್ರಾಮದ ನಿವಾಸಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಅಪಘಾತದ ಮಾಹಿತಿ ತಿಳಿಯುತ್ತಿದ್ದಂತೆ ಚಡಚಣ ಪೊಲೀಸ್ ಠಾಣೆಯ ಪಿಎಸ್‌ಐ ಸೋಮೇಶ ಗೆಜ್ಜಿ, ವೃತ್ತ ನಿರೀಕ್ಷಕ ಪರಶುರಾಮ ಮನಗೂಳಿ ಹಾಗೂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಸರಸಂಘಚಾಲಕರಿಗೆ ಪತ್ರ | ಪ್ರಿಯಾಂಕ್ ಖರ್ಗೆಗೆ ವಿಜಯೇಂದ್ರ ತಿರುಗೇಟು

ಪಾರದರ್ಶಕ ಚಟುವಟಿಕೆ

• ಬೆಂಗಳೂರು: ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಪಾರದರ್ಶಕ ಬದ್ಧತೆಯನ್ನು ಪಾಲಿಸುವಲ್ಲಿ ತೋರಿದ ಸಮರ್ಪಣೆ ಹಾಗೂ ತ್ಯಾಗದ ಪ್ರತೀಕವಾಗಿ ಇಂದು ವಿಶ್ವದ ಅತ್ಯಂತ ದೊಡ್ಡ ಸಂಸ್ಥೆಯಾಗಿ ಬೆಳೆದು ನಿಂತಿದೆ. ಆರ್‌ಎಸ್‌ಎಸ್ ಚಟುವಟಿಕೆಗಳೆಲ್ಲವೂ ನೇರ–ದಿಟ್ಟ– ಪಾರದರ್ಶಕ. ಪ್ರತೀ ಚಟುವಟಿಕೆಗಳೂ ಬಹಿರಂಗದಲ್ಲಿ ಅನಾವರಣ. ಅದು ಮದರಸಾಗಳಂತೆ ಗುಪ್ತವಾಗಿ ಕಾರ್ಯ ನಿರ್ವಹಿಸುವುದಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ.

ಗೃಹ ಸಚಿವ ಪ್ರಿಯಾಂಕ್ ಖರ್ಗೆ ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್)ದ ಸರಸಂಘ ಚಾಲಕರಿಗೆ ಪತ್ರ ಬರೆದಿರುವುದಕ್ಕೆ ಸಾಮಾಜಿಕ ಜಾಲತಾಣದಲ್ಲಿ ವಿಜಯೇಂದ್ರ ಪ್ರತಿಕ್ರಿಯಿಸಿದ್ದಾರೆ.

ಸ್ವಾತಂತ್ರ್ಯ ಯೋಧರು ಉದಾತ್ತ ಉದ್ದೇಶಕ್ಕಾಗಿ ತಮ್ಮ ಬೆವರ ಹನಿಯ ಹಣವನ್ನು ತೊಡಗಿಸಿ ಕಟ್ಟಿದ ಸುಮಾರು 5000 ಕೋಟಿ ರೂ. ಆಸ್ತಿ ಹೊಂದಿದ್ದ ಹೆರಾಲ್ಡ್ ಸಂಸ್ಥೆಯನ್ನು ಯಂಗ್ ಇಂಡಿಯನ್ ಹೆಸರಲ್ಲಿ ನುಂಗಿ ನೀರು ಕುಡಿದ ನೆಹರು ಕುಟುಂಬದ ಮಹಾನ್ ಫಲಾನುಭವಿಗಳಾಗಿರುವ ಖರ್ಗೆ ಕುಟುಂಬದ ಪ್ರಿಯಾಂಕ್ ಖರ್ಗೆ ಅವರೇ, ರಾಷ್ಟ್ರ ವಿಧ್ವಂಸಕ ಚಟುವಟಿಕೆಯ ಅನೇಕ ಅಲ್ಪಸಂಖ್ಯಾತ ಹೆಸರಿನ ಮತೀಯವಾದಿ ಸಂಘಟನೆಗಳು ಈ ದೇಶದಲ್ಲಿ ತಲೆಯೆತ್ತಿರುವುದು, ಅಕ್ರಮ ವಿದೇಶಿ ದೇಣಿಗೆ ಪಡೆದು ರಾಷ್ಟ್ರದ್ರೋಹಿ ಚಟುವಟಿಕೆಗಳಲ್ಲಿ ತೊಡಗಿರುತ್ತಿರುವ ಮಾಹಿತಿ ಗೃಹ ಇಲಾಖೆ ನಡೆಸುತ್ತಿರುವ ನಿಮ್ಮ ಬಳಿಯೇ ಇದೆ. ಈ ಬಗ್ಗೆ ಪತ್ರ ಬರೆದು ಆ ಸಂಸ್ಥೆಗಳಿಂದ ವಿವರ ಏಕೆ ನೀವು ಕೇಳುವುದಿಲ್ಲ? ಎಂದು ಪ್ರಶ್ನಿಸಿದ್ದಾರೆ.



> ಆರ್‌ಎಸ್‌ಎಸ್ ಅನ್ನು ಚಾಲಿತವಾಗಿ ಟೀಕಿಸುವುದು, ಆ ಮೂಲಕ ನೆಹರು ಕುಟುಂಬದ ಕುಡಿಗಳನ್ನು ಸಂತೃಪ್ತಿಪಡಿಸುವುದು. ಇದರಲ್ಲಿ ನಿಮಗೆ ವಿಕೃತ ಖುಷಿ ಸಿಗುವುದಾದರೆ ಬೈದುಕೊಳ್ಳಿ, ನಿಮ್ಮ ಬಗ್ಗೆ ಮರುಕ ಉಂಟಾಗುತ್ತದೆ. ಏಕೆಂದರೆ, ನೀವು ಆಕಾಶಕ್ಕೆ ಉಗುಳುತ್ತಿದ್ದೀರಿ ಎಂಬ ಸತ್ಯ ನಿಮಗರಿವಿದೆಯೋ ಇಲ್ಲವೋ ಆದರೆ ಈ ಕಾಯಕದಲ್ಲಿ ನಿಮಗೆ ಸಂತೃಪ್ತಿ ಸಿಗುವುದಾದರೆ ಇದನ್ನು ಮುಂದುವರಿಸಿ.
>
> ■ **ಬಿ.ವೈ.ವಿಜಯೇಂದ್ರ,** ಬಿಜೆಪಿ ರಾಜ್ಯಾಧ್ಯಕ್ಷ

ಕಾಂಗ್ರೆಸ್ ಹೆಸರು ಬದಲಿಸಲು ಸಲಹೆ ನೀಡಿ: ಛಲವಾದಿ

ಮಹಾತ್ಮ ಗಾಂಧಿಯವರು 1948ರಲ್ಲಿ ಕಾಂಗ್ರೆಸ್ ವಿಸರ್ಜನೆ ಮಾಡಲು ಹೇಳಿದ್ದರು. ಕಾಂಗ್ರೆಸ್ ಹೆಸರು ಬದಲಿಸಿ ಲೋಕ ಸೇವಕ ಸಂಘ ಎಂಬ ಹೆಸರಿಡಲು, ಮಹಿಳೆಯರು, ಹರಿಜನರು, ಗೋವುಗಳ ರಕ್ಷಣೆಗೆ ನಿಲ್ಲಲು ಹೇಳಿದ್ದರಲ್ಲವೇ? ಈಗ ನಿಮ್ಮ ತಂದೆಯವರೇ ಎಐಸಿಸಿ ಅಧ್ಯಕ್ಷರಿದ್ದಾರೆ. ಮಹಾತ್ಮ ಗಾಂಧಿಯವರ ಆಶಯಕ್ಕೆ ಅನುಗುಣವಾಗಿ ಕಾಂಗ್ರೆಸ್ಸನ್ನು ವಿಸರ್ಜಿಸುವುದು ಯಾವಾಗ ಎಂದು ಯಾಕೆ ಇನ್ನೂ ನೀವು ಪತ್ರ ಬರೆದಿಲ್ಲ ಎಂದು ವಿಧಾನ ಪರಿಷತ್ತಿನ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಪ್ರಶ್ನಿಸಿದ್ದಾರೆ.

ಹೈಕಮಾಂಡ್ ಓಲೈಕೆಗಾಗಿ ಕಾಂಗ್ರೆಸ್ ಹಪಾಹಪಿ

ನೂರು ವರ್ಷಗಳಿಂದ ಯಾವುದೇ ಅಪೇಕ್ಷೆಯಿಲ್ಲದೆ, ನಿಸ್ವಾರ್ಥವಾಗಿ ಭಾರತಾಂಬೆಯ ಸೇವೆಯಲ್ಲಿ ತೊಡಗಿಸಿಕೊಂಡಿರುವ ರಾಷ್ಟ್ರಭಕ್ತ ಸಂಘಟನೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾನೂನು ಬದ್ಧತೆ ಹಾಗೂ ದೇಶನಿಷ್ಠೆಯನ್ನು ಪ್ರಶ್ನೆ ಮಾಡುತ್ತಿರುವುದು ಹಾಸ್ಯಾಸ್ಪದ ಮಾತ್ರವಲ್ಲ, ನಾಚಿಕೆಗೇಡಿತನದ ಪರಮಾವಧಿ. ಪಾಕಿಸ್ತಾನ್ ಜಿಂದಾಬಾದ್ ಎಂದು ಅಟ್ಟಹಾಸದಿಂದ ಘೋಷಣೆ ಕೂಗಿದರು. ಕಣ್ಣು, ಕಿವಿ ಮುಚ್ಚಿ ಕುಳಿತಿದ್ದು ಯಾಕೆ? ಹೈಕಮಾಂಡ್ ಓಲೈಕೆಯ ಹಪಾಹಪಿಗಾಗಿ ಅಲ್ಲವೇ ಎಂದು ವಿಪಕ್ಷ ನಾಯಕ ಆರ್. ಅಶೋಕ್ ಪ್ರಶ್ನಿಸಿದ್ದಾರೆ.

ಮದರಸಾಗಳಂತೆ ಆರ್‌ಎಸ್‌ಎಸ್ ಗುಪ್ತವಾಗಿ ಕಾರ್ಯ ನಿರ್ವಹಿಸುವುದಿಲ್ಲ, ಕೇವಲ ಮತಾಂಧತೆಯನ್ನು ಬಿತ್ತಿ ರಾಷ್ಟ್ರೀಯತೆ ವಿರೋಧಿಸಲು ಪ್ರಚೋದನೆ ನೀಡುವ ಮದರಸದಂಥಾ ಸಂಸ್ಥೆಗಳ ಚಟುವಟಿಕೆಗಳು ನಿಮ್ಮ ಕಣ್ಣಿಗೆ ಬೀಳುವುದಿಲ್ಲ, ಕಿವಿಗೂ ಕೇಳಿಸುವುದಿಲ್ಲ, ಏಕೆಂದರೆ ಅದರ ಮೂಲದಿಂದಲೇ ಶಕ್ತಿ ಯಾಗುತ್ತಿರುವ ಮತಬ್ಯಾಂಕ್ ಅಧಿಪತ್ಯ ಅಧಿಕಾರ ಅನುಭವಿಸುತ್ತಿರುವ ನಿಮಗೆ ರಾಷ್ಟ್ರ ವಿಧ್ವಂಸಕ ಚಟುವಟಿಕೆ ಬಗ್ಗೆ ತಲೆಕೆಡಿಸಿಕೊಳ್ಳುವ ಬದ್ಧತೆ–ನೈತಿಕತೆ ಇರಲು ಹೇಗೆ ಸಾಧ್ಯ? ಎಂದು ಕೇಳಿದ್ದಾರೆ.

ಕೆಂಪೇಗೌಡರ ಹೆಸರಿನಲ್ಲಿ ಟೌನ್ ಪ್ಲಾನಿಂಗ್ ಕಾಲೇಜು: ಡಿಕೆಶಿ



• ಬೆಂಗಳೂರು: ನಾಡಪ್ರಭು ಕೆಂಪೇಗೌಡರ ಹೆಸರಿನಲ್ಲಿ ಟೌನ್ ಪ್ಲಾನಿಂಗ್ ಕಾಲೇಜು ಮಾಡಬೇಕೆಂದು ತೀರ್ಮಾನಿಸಲಾಗಿದ್ದು, ಈ ಸಂಬಂಧ ಈಗಾಗಲೇ ಸಿದ್ಧತೆ ನಡೆಯುತ್ತಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ವಿಧಾನಸೌಧದಲ್ಲಿ ಮಂಗಳವಾರ ನಾಡಪ್ರಭು ಕೆಂಪೇಗೌಡ ಜಯಂತಿ ಆಚರಣೆಗೆ ಪೂರ್ವಭಾವಿ ಸಭೆಯ ಬಳಿಕ ಮಾತನಾಡಿ, ಪ್ರತಿ ವರ್ಷದಂತೆ ಜೂನ್ 27 ರಂದು ಕೆಂಪೇಗೌಡ ಜಯಂತಿ ಆಚರಣೆ ಮಾಡುತ್ತೇವೆ. ಅದರಂತೆ ಪೂರ್ವಭಾವಿ ಸಭೆ ಕರೆಯಲಾಗಿದೆ. ಯಾವ ರೀತಿ ಕಾರ್ಯಕ್ರಮ ಮಾಡಬೇಕು ಎಂಬುದರ ಬಗ್ಗೆ ಸಲಹೆ ಪಡೆದುಕೊಳ್ಳಲು ಎಲ್ಲ ಸಂಘಟನೆಗಳನ್ನು ಕರೆಸಿ ಚರ್ಚೆ ಮಾಡಿದ್ದೇವೆ. ಅನೇಕರು ಕಾರ್ಯಕ್ರಮದ ಬಗ್ಗೆ ಅನೇಕ ಸಲಹೆ ಕೊಟ್ಟಿದ್ದಾರೆ ಎಂದರು.

ಈ ವರ್ಷ ಜೂ.27ರಂದು ನಾಡಪ್ರಭು ಕೆಂಪೇಗೌಡ ನೂತನ ಬಡಾವಣೆಯಲ್ಲಿ ಮಾಡಬೇಕು ಎಂದು ತೀರ್ಮಾನಿಸಲಾಗಿದೆ. ಅಲ್ಲದೇ, ಬಿಡಿಎ ವತಿಯಿಂದ ಶಾಸಕ ಎನ್.ಎ.ಹ್ಯಾರಿಸ್ ಮತ್ತು ಎಸ್.ಟಿ.ಸೋಮಶೇಖರ್ ನೇತೃತ್ವದಲ್ಲಿ ಅಂದೇ 15 ಲಕ್ಷ ಸಸಿಗಳನ್ನು ಬಡಾವಣೆಯಲ್ಲಿಯೇ ನೆಡಲು ತೀರ್ಮಾನಿಸಲಾಗಿದೆ ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು.

ಒಂದು ಲಕ್ಷ ಅನುದಾನ: ಪ್ರತಿ ವಾರ್ಡ್ ಹಾಗೂ ವಿಧಾನಸಭಾ ಕ್ಷೇತ್ರಗಳಿಗೆ ಕೆಂಪೇಗೌಡ ಜಯಂತಿಯನ್ನು ಅದ್ದೂರಿಯಾಗಿ ಆಚರಣೆ ಮಾಡಲು ತಲಾ ಒಂದು ಲಕ್ಷ ರೂ. ನೀಡಲಾಗುತ್ತದೆ ಎಂದರು.

ಥೀಮ್ ಪಾರ್ಕ್ ಉದ್ಘಾಟನೆ

ದೇವನಹಳ್ಳಿ ವಿಮಾನ ನಿಲ್ದಾಣದಲ್ಲಿ ಥೀಮ್ ಪಾರ್ಕ್ ಉದ್ಘಾಟನೆಗೆ ಸಿದ್ಧವಾಗಿದೆ. ಸಚಿವ ಕೃಷ್ಣ ಬೈರೇಗೌಡ ಅವರು ಅದರ ಜವಾಬ್ದಾರಿ ತೆಗೆದುಕೊಂಡು ಕಾರ್ಯಕ್ರಮ ರೂಪಿಸಿದ್ದಾರೆ. ಯಾವ ಸ್ವಾಮಿಗಳು ಹಾಗೂ ಯಾವ ನಾಯಕರನ್ನ ಆಹ್ವಾನಿಸಬೇಕು ಎಂಬ ಜವಾಬ್ದಾರಿ ಕೃಷ್ಣ ಬೈರೇಗೌಡರು ತೆಗೆದುಕೊಂಡಿದ್ದಾರೆ. ಸಂಘಟನೆಗಳ ಜೊತೆ ಅವರೇ ಸಂಪರ್ಕ ಮಾಡುತ್ತಾರೆ. ಒಕ್ಕಲಿಗರ ಸಂಘದವರ ತಂಡದ ಜವಾಬ್ದಾರಿಯನ್ನು ಸಚಿವರೇ ತೆಗೆದುಕೊಂಡಿದ್ದಾರೆ.

ಜಲಮೂಲ ಗುರುತಿಸಿ, ನೀರು ಪರೀಕ್ಷಿಸಿ: ಸಚಿವ ಈಶ್ವರ ಖಂಡ್ರೆ

• ಬೆಂಗಳೂರು: ರಾಜ್ಯದಲ್ಲಿ ಮಳೆ ಕೊರತೆ ಮುನ್ಸೂಚನೆ ಹಿನ್ನೆಲೆಯಲ್ಲಿ ಪರ್ಯಾಯ ಜಲಮೂಲಗಳನ್ನು ಗುರುತಿಸಿ, ನೀರಿನ ಪರೀಕ್ಷೆ ಮಾಡಿ ಸನ್ನದ್ಧ ಸ್ಥಿತಿಯಲ್ಲಿರುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ. ಖಂಡ್ರೆ ಸೂಚನೆ ನೀಡಿದ್ದಾರೆ.



ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಕಾರ್ಯದರ್ಶಿಗಳಿಗೆ ಸಚಿವರು ಈ ಸಂಬಂಧ ಲಿಖಿತ ಸೂಚನೆ ನೀಡಿದ್ದಾರೆ. ಜೂನ್ ಮಧ್ಯಭಾಗದ ಹೊತ್ತಿಗೆ ರಾಜ್ಯದಲ್ಲಿ ವಾಡಿಕೆಯಂತೆ ಆಗಬೇಕಿದ್ದ ಮಳೆ ಆಗಿಲ್ಲ, ಎಲ್ ನಿನೋ ಪ್ರಭಾವದಿಂದಾಗಿ ಮುಂಗಾರು ಮಳೆ ಕೊರತೆ ಉಂಟಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಈ ಹಿನ್ನೆಲೆಯಲ್ಲಿ ಮುಂಜಾಗರೂಕತಾ ಕ್ರಮ ಕೈಗೊಳ್ಳುವಂತೆ ತಿಳಿಸಿದ್ದಾರೆ. ಈ ಸಂಬಂಧ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಖಾಸಗಿ ತೆರೆದ ಬಾವಿ, ಕೊಳವೆಬಾವಿಗಳನ್ನು ಗುರುತಿಸಬೇಕು. ತದನಂತರ ಆ ಬಾವಿಗಳ ನೀರಿನ ಪ್ರಮಾಣ, ಲಭ್ಯತೆ ಖಚಿತಪಡಿಸಿಕೊಂಡು ನೀರು ಕುಡಿಯಲು ಯೋಗ್ಯವಾಗಿದೆಯೇ ಇಲ್ಲವೇ ಎಂಬ ಬಗ್ಗೆ ಪರೀಕ್ಷೆ ನಡೆಸಬೇಕು. ಅಂತಹ ಖಾಸಗಿ ಜಲಮೂಲಗಳ ಮಾಲೀಕರೊಂದಿಗೆ ಮಾತನಾಡಿ, ಅಗತ್ಯ ಬಿದ್ದಲ್ಲಿ ನೀರು ಬಳಕೆ ಮಾಡುವ ಬಗ್ಗೆ ನಿಯಮಾನುಸಾರ ಒಡಂಬಡಿಕೆ ಮಾಡಿಕೊಂಡು ಸನ್ನದ್ಧ ಸ್ಥಿತಿಯಲ್ಲಿರುವಂತೆ ಸಚಿವ ಈಶ್ವರ ಖಂಡ್ರೆ ಸೂಚಿಸಿದ್ದಾರೆ.

ಟೌನ್‌ಶಿಪ್ ವಿಚಾರದಲ್ಲಿ ಜೆಡಿಎಸ್ ರಾಜಕಾರಣ: ಟೀಕೆ

• ಮೈಸೂರು: ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ಜೆಡಿಎಸ್ ರಾಜಕಾರಣ ಮಾಡುತ್ತಿದೆ ಎಂದು ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಆರೋಪಿಸಿದರು. ಮಂಗಳವಾರ ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಬಿಡದಿ ಟೌನ್‌ಶಿಪ್ ಮಾಡುವ ಅವಶ್ಯಕವಿದೆ. ಶೇ.80ರಷ್ಟು ರೈತರು ಜಮೀನು ಕೊಡಲು ಒಪ್ಪಿದ್ದಾರೆ. ಕೆಲವರು ಹೆಚ್ಚಿನ ಪರಿಹಾರಕ್ಕೆ ಒಪ್ಪಿದ್ದಾರೆ. ಆದರೆ ಕೆಲವರು ಮಾತ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಅಂತವರ ಮಾತನ್ನು ಕೇಳಿ ಯೋಜನೆ ಕೈ ಬಿಡಲು ಆಗುವುದಿಲ್ಲ ಎಂದರು. ಬೆಂಗಳೂರಿನಲ್ಲಿ ಜನಸಂದಣಿ ಹೆಚ್ಚಾಗಿದೆ. ಎಕ್ಸ್ಟ್ರಾ ಜಾಗಕ್ಕೆ ನಿವೇಶನದ ಅಗತ್ಯ ಇದೆ. ಬೆಂಗಳೂರು ಜನಸಂಖ್ಯೆ ಬೆಳೆಯುತ್ತಿರುವ ಅಗತ್ಯವಿದೆ. ಬೆಂಗಳೂರು ವಿಸ್ತರಿಸುವ ಅವಶ್ಯಕತೆ ಇದೆ ಎಂದರು.

ಆರೆಸ್ಸೆಸ್ ಆರ್ಥಿಕ ಪಾರದರ್ಶಕತೆ ಬಹಿರಂಗಪಡಿಸಲಿ: ಖರ್ಗೆ

• ಹೊಸದಿಲ್ಲಿ/ಬೆಂಗಳೂರು: ರಾಷ್ಟ್ರೀಯ ಸ್ವಯಂಸೇವಕ ಸಂಘದ ಬಗ್ಗೆ ತಮ್ಮ ಆಕ್ಷೇಪವನ್ನು ಮುಂದುವರಿಸಿರುವ ಸಚಿವ ಪ್ರಿಯಾಂಕ್ ಖರ್ಗೆ ಅವರು, ಆರ್‌ಎಸ್‌ಎಸ್ ಸಂಸ್ಥೆಯು ತನ್ನ ನೋಂದಣಿ ಹಾಗೂ ಆರ್ಥಿಕ ಪಾರದರ್ಶಕತೆಯನ್ನು ಬಹಿರಂಗಪಡಿಸಬೇಕು ಎಂದು ಆಗ್ರಹಿಸಿದ್ದಾರೆ.




ದಿಲ್ಲಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿರುವ ಅವರು, ದೇಶದ ಪ್ರಮುಖ ಸಂಘಟನೆಯಾದ ರಾಷ್ಟ್ರೀಯ ಸ್ವಯಂಸೇವಕ ಸಂಘ ತನ್ನ ಅಸ್ತಿತ್ವದ ಶತಮಾನೋತ್ಸವದ (100 ವರ್ಷ) ಸಂದರ್ಭದಲ್ಲಾದರೂ ತನ್ನ ಕಾನೂನುಬದ್ಧ ಸ್ಥಾನಮಾನವನ್ನು ಸ್ಪಷ್ಟಪಡಿಸಬೇಕು ಎಂದಿದ್ದಾರೆ.

ಕರ್ನಾಟಕವೊಂದರಲ್ಲೇ 4,127 ದೈನಂದಿನ ಶಾಖೆಗಳು, 1,389 ವಾರಾಂತ್ಯ ಸಭೆಗಳು, 60 ಮಾಸಿಕ ಮಂಡಳಿಗಳು ನಡೆಯುತ್ತಿವೆ. ಜೊತೆಗೆ 500ಕ್ಕೂ ಹೆಚ್ಚು ಪಥಸಂಚಲನ ಹಾಗೂ ಲಕ್ಷಾಂತರ ಜನರು ಭಾಗವಹಿಸುವ ಸಮಾವೇಶಗಳು ನಿರಂತರವಾಗಿ ಜರುಗುತ್ತಿವೆ. ಇಷ್ಟು ದೊಡ್ಡ ಮಟ್ಟದ ಸಾರ್ವಜನಿಕ ಸಜ್ಜುಗೊಳಿಸುವಿಕೆ ಹಾಗೂ ಗಣವೇಶಧಾರಿ ಪಥ ಸಂಚಲನಗಳನ್ನು ಖಾಸಗಿ ಅಥವಾ ಅನೌಪಚಾರಿಕ ವ್ಯವಸ್ಥೆ ಎಂದು ಪರಿಗಣಿಸಲು ಸಾಧ್ಯವಿಲ್ಲ, ಇದಕ್ಕೆ ಸಂಬಂಧಿಸಿದ ಅಧಿಕೃತ ಅನುಮತಿಗಳ ವಿವರಗಳನ್ನು ಒದಗಿಸಬೇಕು ಎಂದು ಹೇಳಿದರು.

ಆರ್‌ಎಸ್‌ಎಸ್ ಕೇವಲ ಸಂಪ್ರದಾಯಗಳಿಗೆ ಸೀಮಿತವಾಗದೆ, ಭಾರತೀಯ ಸಂವಿಧಾನಕ್ಕೆ ಗೌರವ ಸಲ್ಲಿಸುವ ನಿಟ್ಟಿನಲ್ಲಿ ಆತ್ಮಾವಲೋಕನ ಮಾಡಿಕೊಳ್ಳಬೇಕು. 100ನೇ ವರ್ಷದಲ್ಲಿ ಸಂಘಟನೆಯು ಕಾನೂನುಬದ್ಧವಾಗಿ ನೋಂದಾಯಿಸಿಕೊಂಡು, ಪಾರದರ್ಶಕತೆಯಿಂದ ಕಾರ್ಯ ನಿರ್ವಹಿಸುವುದೇ ದೇಶಕ್ಕೆ ನೀಡುವ ಅತ್ಯುತ್ತಮ ಕೊಡುಗೆಯಾಗಿದೆ ಎಂದು ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾರೂ ಕಾನೂನಿಗಿಂತ ಮಿಗಿಲಲ್ಲ ಎಂದು ಸಚಿವರು ಪುನರುಚ್ಚರಿಸಿದ್ದಾರೆ.

ಸರ್ಕಾರ ರಚನೆ ವಿರುದ್ಧ ಕೋರ್ಟ್ ಮೆಟ್ಟಿಲೇರಿದ ವ್ಯಕ್ತಿಗೆ ದಂಡ

• ಬೆಂಗಳೂರು: ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರ ನೇತೃತ್ವದ 14 ಮಂದಿ ಸಚಿವರ ಪ್ರಮಾಣ ವಚನ ಸ್ವೀಕಾರ ಹಾಗೂ ಮಂತ್ರಿಮಂಡಲ ರಚನೆ ಸಂವಿಧಾನ ಬಾಹಿರ ಎಂದು ಘೋಷಿಸುವಂತೆ ಕೋರಿ ನ್ಯಾಯಾಲಯದ ಮೆಟ್ಟಿಲೇರಿದ್ದ ವ್ಯಕ್ತಿಗೆ ಕರ್ನಾಟಕ ಹೈಕೋರ್ಟ್ ಬರೋಬ್ಬರಿ 50 ಸಾವಿರ ರೂ.ದಂಡ ವಿಧಿಸಿದೆ.



ಈ ವಿಚಾರವಾಗಿ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಹಾಗೂ 13 ಮಂದಿ ನೂತನ ಸಚಿವರನ್ನು ಪ್ರತಿವಾದಿಗಳನ್ನಾಗಿ ಮಾಡಿ ಹುಬ್ಬಳ್ಳಿಯ ನಿವಾಸಿ ಮಂಗಳಪ್ಪ ಹುಲಿಕೇರಿ ಎಂಬುವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಕ್ರು ಮತ್ತು ನ್ಯಾಯಮೂರ್ತಿ ಕೆ.ಎಸ್.ಹೇಮಲೇಖಾ ಅವರ ವಿಭಾಗೀಯ ಪೀಠ ವಜಾ ಗೊಳಿಸಿದೆ. ಕೆಲ ಕಾಲ ವಾದ ಆಲಿಸಿದ ಪೀಠವು ಇದೊಂದು ಊಹೆ ಮತ್ತು ಗ್ರಹಿಕೆಗಳ ಆಧಾರದಲ್ಲಿ ಪ್ರಚಾರ ಗಿಟ್ಟಿಸಿಕೊಳ್ಳಲು ಸಲ್ಲಿಸಲಾಗಿರುವ ಕ್ಷುಲ್ಲಕ ಅರ್ಜಿಯಾಗಿದೆ.

ಇಂತಹ ಅರ್ಜಿ ಸಲ್ಲಿಸುವ ಮೂಲಕ ನ್ಯಾಯಾಲಯದ ಸಮಯ ಹಾಳು ಮಾಡಲಾಗಿದೆ ಎಂದು ಹೇಳಿ ಅರ್ಜಿದಾರರಿಗೆ 50 ಸಾವಿರ ರೂಪಾಯಿ ದಂಡ ವಿಧಿಸಿ ಅರ್ಜಿ ವಜಾಗೊಳಿಸಿ ಆದೇಶಿಸಿತು.

ವೀರಶೈವ ಪ್ರಧಾನ ಕಾರ್ಯದರ್ಶಿ ನೇಮಕ

• ಬೆಂಗಳೂರು: ಅಖಿಲ ಭಾರತ ವೀರಶೈವ ಮಹಾಸಭೆಯ ಮಹಾಪ್ರಧಾನ ಕಾರ್ಯದರ್ಶಿಯಾಗಿ ದಿ.ಶಾಮನೂರು ಶಿವಶಂಕರಪ್ಪ ಪುತ್ರ, ಎಸ್.ಎಸ್ ಗಣೇಶ್ ಅವರು ನೇಮಕಗೊಂಡಿದ್ದಾರೆ. ಎಸ್.ಎಸ್ ಗಣೇಶ್ ಅವರನ್ನು ಮಹಾಪ್ರಧಾನ ಕಾರ್ಯದರ್ಶಿಯಾಗಿ ನೇಮಕ ಮಾಡಿ ಆದೇಶ ಹೊರಡಿಸಿರುವ ಮಹಾಸಭಾದ ಅಧ್ಯಕ್ಷ ಈಶ್ವರ ಖಂಡ್ರೆ ಅವರು, ಮಹಾಸಭಾ ಸಂವಿಧಾನ ನಿಯಮ 26ರಂತೆ ಕರ್ತವ್ಯ ನಿರ್ವಹಿಸುವುದರ ಜತೆಗೆ ಮಹಾಸಭೆಯ ಗುರಿ ಮತ್ತು ಧ್ಯೇಯೋದ್ದೇಶಗಳನ್ನು ಅನುಷ್ಠಾನಗೊಳಿಸಲು ತಕ್ಷಣದಿಂದ ಕಾರ್ಯಪ್ರವೃತ್ತರಾಗಬೇಕೆಂದು ತಿಳಿಸಿದ್ದಾರೆ.

12 ರಾಜ್ಯಗಳ ಮೇಲೆ ಎಲ್ ನಿನೋ ಪ್ರಭಾವ | ರಾಜ್ಯದ ಹಲವು ಜಿಲ್ಲೆಗಳ ಮೇಲೆ ತೀವ್ರ ಪರಿಣಾಮ ಸಾಧ್ಯ

ಕರ್ನಾಟಕದಲ್ಲಿ ಬರಗಾಲದ ಎಚ್ಚರಿಕೆ

• ಹೊಸದಿಲ್ಲಿ: ಈ ವರ್ಷದ ಮುಂಗಾರು ಹಂಗಾಮಿನಲ್ಲಿ ಎಲ್ ನಿನೋ ಹವಾಮಾನ ವಿದ್ಯಮಾನವು ಕರ್ನಾಟಕ ಸೇರಿದಂತೆ 12 ರಾಜ್ಯಗಳ ಮೇಲೆ ತೀವ್ರ ಪರಿಣಾಮ ಬೀರಬಹುದೆಂದು ಕೇಂದ್ರ ಕೃಷಿ ಸಚಿವಾಲಯ ಎಚ್ಚರಿಕೆ ನೀಡಿದೆ. ರಾಜ್ಯದಲ್ಲಿ ಮಳೆ ಕೊರತೆ, ಬೆಳೆ ನಷ್ಟ ಹಾಗೂ ನೀರಿನ ಅಭಾವದ ಸಾಧ್ಯತೆಗಳಿರುವ ಹಿನ್ನೆಲೆಯಲ್ಲಿ ಜಿಲ್ಲಾಮಟ್ಟದಲ್ಲೇ ಮುಂಗಡ ತುರ್ತು ಕಾರ್ಯಯೋಜನೆ ರೂಪಿಸಲು ಕೇಂದ್ರ ಸರ್ಕಾರ ಸೂಚಿಸಿದೆ.

ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರ ಅಧ್ಯಕ್ಷತೆಯಲ್ಲಿ ನಡೆದ ಖಾರಿಫ್–2026 ಸಿದ್ಧತಾ ಪರಿಶೀಲನಾ ಸಭೆಯಲ್ಲಿ ಈ ಕುರಿತು ಚರ್ಚೆ ನಡೆಸಲಾಗಿದೆ. ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು, ಮಹಾರಾಷ್ಟ್ರ, ಗುಜರಾತ್, ಉತ್ತರ ಪ್ರದೇಶ, ರಾಜಸ್ಥಾನ ಸೇರಿದಂತೆ 12 ರಾಜ್ಯಗಳು ಎಲ್ ನಿನೋದಿಂದ ಹೆಚ್ಚು ಬಾಧಿತವಾಗುವ ಸಾಧ್ಯತೆಯಿರುವ ರಾಜ್ಯಗಳೆಂದು ಗುರುತಿಸಲಾಗಿದೆ.

ಕೇಂದ್ರದ ಮಾಹಿತಿ ಪ್ರಕಾರ, ಈ ರಾಜ್ಯಗಳ 326 ಜಿಲ್ಲೆಗಳಿಗೆ ವಿಶೇಷ ಮುನ್ನೆಚ್ಚರಿಕಾ ಯೋಜನೆ ಸಿದ್ಧಪಡಿಸಲಾಗುತ್ತಿದೆ. ಕರ್ನಾಟಕದಲ್ಲಿಯೂ ಮಳೆ ಕೊರತೆಯ ಅಪಾಯ ಎದುರಾಗಬಹುದಾದ ಜಿಲ್ಲೆಗಳನ್ನು ಗುರುತಿಸಿ, ಬೆಳೆವಾರು ಪರ್ಯಾಯ ಯೋಜನೆಗಳನ್ನು ರೂಪಿಸುವಂತೆ ಸೂಚಿಸಲಾಗಿದೆ.

ಕರ್ನಾಟಕಕ್ಕೆ ಏಕೆ ಹೆಚ್ಚು ಆತಂಕ?

- ಎಲ್ ನಿನೋದಿಂದ ಮುಂಗಾರು ಮಳೆ ಕುಂಠಿತವಾಗುವ ಸಾಧ್ಯತೆ
- ಮಳೆ ಆಧಾರಿತ ಕೃಷಿ ಪ್ರದೇಶಗಳಲ್ಲಿ ಬೆಳೆ ನಷ್ಟದ ಅಪಾಯ
- ಜಲಾಶಯಗಳ ನೀರಿನ ಸಂಗ್ರಹದ ಮೇಲೆ ಪರಿಣಾಮ ಸಾಧ್ಯ
- ರಾಗಿ, ತೊಗರಿ, ಜೋಳ ಸೇರಿ ಮಳೆ ಅವಲಂಬಿತ ಬೆಳೆಗಳಿಗೆ ಹೊಡೆತ ಬೀಳುವ ಆತಂಕ
- ಜಿಲ್ಲಾವಾರು ಪರ್ಯಾಯ ಬೆಳೆ ಹಾಗೂ ನೀರು ಸಂರಕ್ಷಣಾ ಯೋಜನೆ ರೂಪಿಸಲು ಸೂಚನೆ

ಚೌಹಾಣ್ ಅವರು ಜಿಲ್ಲಾಧಿಕಾರಿಗಳು, ಕೃಷಿ ಇಲಾಖೆ, ಕೃಷಿ ವಿಜ್ಞಾನ ಕೇಂದ್ರಗಳು (ಕೆವಿಕೆ) ಹಾಗೂ ವಿಸ್ತರಣಾ ವ್ಯವಸ್ಥೆಗಳೊಂದಿಗೆ ಸಮನ್ವಯ ಸಭೆಗಳನ್ನು ನಡೆಸಿ ರೈತರಿಗೆ ಮುಂಗಡ ಮಾರ್ಗದರ್ಶನ ನೀಡುವಂತೆ ಸೂಚಿಸಿದ್ದಾರೆ.

ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಪ್ರಕಾರ, ಸಮಭಾಜಕ ಪೆಸಿಫಿಕ್ ಮಹಾಸಾಗರ ಪ್ರದೇಶದಲ್ಲಿ ಈಗಾಗಲೇ ಎಲ್ ನಿನೋ ಪರಿಸ್ಥಿತಿ ನಿರ್ಮಾಣವಾಗಿದ್ದು, ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ನಡೆಯುವ ನೈಋತ್ಯ ಮುಂಗಾರು ಅವಧಿಯಲ್ಲಿ ಅದು ಮತ್ತಷ್ಟು ಬಲಗೊಳ್ಳುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ದೇಶದಲ್ಲಿ ಸಾಮಾನ್ಯ ಪ್ರಮಾಣಕ್ಕಿಂತ ಕಡಿಮೆ ಮಳೆಯಾಗುವ ಸಾಧ್ಯತೆ ವ್ಯಕ್ತವಾಗಿದೆ.

ಕೇಂದ್ರ ಸರ್ಕಾರವು ಮಳೆ ಕೊರತೆಯ ಜಿಲ್ಲೆಗಳಲ್ಲಿ ನೀರು ಸಂರಕ್ಷಣೆ, ತೇವಾಂಶ ನಿರ್ವಹಣೆ, ಮಿಶ್ರ ಬೆಳೆ ಪದ್ಧತಿ ಹಾಗೂ ಪರ್ಯಾಯ ಬೆಳೆ ಮಾದರಿಗಳ ಅನುಷ್ಠಾನಕ್ಕೆ ಹೆಚ್ಚಿನ ಒತ್ತು ನೀಡುವಂತೆ ಸೂಚಿಸಿದೆ. ರೈತರಿಗೆ ವೈಜ್ಞಾನಿಕ ಮಾಹಿತಿ ಆಧಾರಿತ ಸಲಹೆಗಳನ್ನು ನೀಡಬೇಕು, ಆತಂಕ ಸೃಷ್ಟಿಸುವ ಸಂದೇಶಗಳನ್ನು ತಪ್ಪಿಸಬೇಕು ಎಂದು ಸಚಿವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ದೂರಿನ ಹಿನ್ನೆಲೆ ರಾಜ್ಯ ಪೊಲೀಸ್ ಇಲಾಖೆಗೆ ಸರ್ಕಾರ ಸೂಚನೆ

ಖಾಸಗಿತನಕ್ಕೆ ಪ್ರಾಮುಖ್ಯತೆ ನೀಡಿ

• ಬೆಂಗಳೂರು: ಅನುಮತಿಯಿಲ್ಲದೇ ಯಾವುದೇ ವ್ಯಕ್ತಿಯ ಖಾಸಗಿ ವಿಡಿಯೋ ಮತ್ತು ಫೋಟೋ ಪ್ರಕಟಿಸುವುದು ಅಥವಾ ಪ್ರಸಾರ ಮಾಡುವ ಪ್ರಕರಣಗಳಲ್ಲಿ ಪೊಲೀಸರು ಅನುಸರಿಸಬೇಕಾದ ಕ್ರಮಗಳ ಕುರಿತು ಸ್ಪಷ್ಟ ಮಾರ್ಗಸೂಚಿಗಳನ್ನು ಪಾಲಿಸುವಂತೆ ರಾಜ್ಯ ಪೊಲೀಸ್ ಇಲಾಖೆಯು ಮಂಗಳವಾರ ಆದೇಶ ಹೊರಡಿಸಿದೆ.

ಇತ್ತೀಚೆಗೆ ಈ ಮೇಲಿನ ಪ್ರಕರಣಗಳಿಗೆ ಸಂಬಂಧಿಸಿದಂತೆ ದೂರುಗಳನ್ನು ದಾಖಲಿಸುವಲ್ಲಿ ವಿಳಂಬ ಅಥವಾ ಕೆಲವೆಡೆ ನಿರಾಕರಣೆ ಮಾಡುತ್ತಿರುವುದು ಗಮನಕ್ಕೆ ಬಂದ ಹಿನ್ನೆಲೆಯಲ್ಲಿ, ಈ ಆದೇಶದಲ್ಲಿ ಚಿತ್ರೀಕರಣಕ್ಕೆ ಒಪ್ಪಿಗೆ ನೀಡಿದರೆ ಪ್ರಸಾರಕ್ಕೂ ಒಪ್ಪಿಗೆ ನೀಡಿದಂತೆ ಅಲ್ಲ ಎಂಬ ಕಾನೂನು ಸ್ಥಿತಿಯನ್ನು ಸ್ಪಷ್ಟಪಡಿಸಲಾಗಿದೆ. ಅಂದರೆ, ಒಬ್ಬ ವ್ಯಕ್ತಿ ಚಿತ್ರ ಸೆರೆಹಿಡಿಯಲು ಒಪ್ಪಿಗೆ ನೀಡಿದ್ದರೂ, ಅದನ್ನು ಹಂಚಲು ಅಥವಾ ಪ್ರಸಾರ ಮಾಡಲು ಒಪ್ಪಿಗೆ ನೀಡದಿದ್ದರೆ, ಅದು ಸಂಜ್ಞೆಯ ಅಪರಾಧವಾಗಲಿದೆ ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಭಾರತೀಯ ನ್ಯಾಯ ಸಂಹಿತೆ(ಬಿಎನ್‌ಎಸ್) 2023ರ ಸೆಕ್ಷನ್ 77ರಂತೆ ಗೌಪ್ಯತೆ ಉಲ್ಲಂಘನೆಗೆ ಸಂಬಂಧಿಸಿದ ವಿಧಿಗಳು, ಮಾಹಿತಿ ತಂತ್ರಜ್ಞಾನ ಕಾಯ್ದೆ 2000ರ ಸೆಕ್ಷನ್ 66(ಇ), 67 ಮತ್ತು 67(ಎ) ಗಳನ್ನು ಅಳವಡಿಸಬೇಕು ಎಂದು ಆದೇಶದಲ್ಲಿ ಸೂಚಿಸಲಾಗಿದೆ. ಮಹಿಳಾ ಸಂತ್ರಸ್ತರಿದ್ದಲ್ಲಿ 77ರ ವಿಧಿಯ ಜೊತೆಗೆ ಐಟಿ ಕಾಯ್ದೆಯ ಸೆಕ್ಷನ್‌ಗಳನ್ನು ಸೇರಿಸಿ ಎಫ್‌ಐಆರ್ ಕಡ್ಡಾಯವಾಗಿ ನೋಂದಣಿ ಮಾಡಬೇಕೆಂದು ನಿರ್ದೇಶಿಸಲಾಗಿದೆ.

ತಕ್ಷಣವೇ ಎಫ್‌ಐಆರ್ ನೋಂದಣಿ: ಅನುಮತಿಯಿಲ್ಲದ ಖಾಸಗಿ/ಆಪ್ತ ಚಿತ್ರಗಳು ಅಥವಾ ವೀಡಿಯೋಗಳ ಪ್ರಸಾರ ಮತ್ತು ಬೆದರಿಕೆ ವಿಡಿಯೋಗಳು, ರಿವೆಂಜ್ ಪೋರ್ನೋಗ್ರಫಿ ಮುಂತಾದ ಪ್ರಕರಣಗಳಲ್ಲಿ ಕೂಡ ತಕ್ಷಣ ಎಫ್‌ಐಆರ್ ದಾಖಲಿಸಬೇಕು. ಪೀಡಿತರು ಮೊದಲು ಚಿತ್ರೀಕರಣಕ್ಕೆ ಒಪ್ಪಿಗೆ ನೀಡಿದ್ದರು ಎಂಬ ಕಾರಣಕ್ಕೆ ದೂರು ನಿರಾಕರಿಸಬಾರದು. ಅಪರಾಧ ಸ್ಥಳೀಯ ವ್ಯಾಪ್ತಿಯ ಹೊರಗೆ ನಡೆದಿದ್ದರೆ ಝೀರೋ ಎಫ್‌ಐಆರ್ ದಾಖಲಿಸಿ ಸಂಬಂಧಿತ ಠಾಣೆಗೆ ವರ್ಗಾಯಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ. ಅಪರಾಧಿಕ ವಿಷಯವನ್ನು ತಕ್ಷಣ ತೆಗೆದುಹಾಕಲು ಐಟಿ ನಿಯಮಗಳ ಪ್ರಕಾರ ಸಂಬಂಧಿತ ಸಂಸ್ಥೆಗಳಿಗೆ ನೋಟಿಸ್ ನೀಡಬೇಕು ಮತ್ತು ಎಲ್ಲ ಡಿಜಿಟಲ್ ಸಾಕ್ಷ್ಯಗಳನ್ನು ಕಾನೂನುಬದ್ಧವಾಗಿ ಸಂರಕ್ಷಿಸಬೇಕು. ಪೀಡಿತರ ಗುರುತು ಗೌಪ್ಯವಾಗಿರಬೇಕು, ಮಹಿಳಾ ಸಂತ್ರಸ್ತೆಯ ದೂರುಗಳನ್ನು ಮಹಿಳಾ ಅಧಿಕಾರಿಗಳು ದಾಖಲಿಸುವಂತೆ ಸೂಚಿಸಲಾಗಿದೆ.

ಸೈಬರ್ ಕ್ರೈಮ್ ಘಟಕಗಳೊಂದಿಗೆ ಸಮನ್ವಯತೆ: ತನಿಖಾಧಿಕಾರಿಗಳು ಸೈಬರ್ ಕ್ರೈಮ್ ಘಟಕಗಳೊಂದಿಗೆ ಸಮನ್ವಯತೆ ಸಾಧಿಸಿ ತಾಂತ್ರಿಕ ತನಿಖೆ ಹಾಗೂ ಫೋರೆನ್ಸಿಕ್ ವಿಶ್ಲೇಷಣೆ ನಡೆಸಬೇಕು. ವಿಳಂಬ ಮಾಡಿದರೆ ಸಂಬಂಧಿತ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಡಿಜಿ–ಐಜಿಪಿ ಎಚ್ಚರಿಕೆ ನೀಡಿದ್ದಾರೆ.

IN THE COURT OF THE XIV ADDITIONAL CITY CIVIL & SESSIONS JUDGE AT BANGALORE
P & S.C. No. 198/2026

BETWEEN: 1. Smt. Aishwarya Raghunandan, W/o. Late Srinath Ramachandran Mudliar, aged about 27 Years, 2. Baby Srishaya Srinath Mudliar, D/o. Late Srinath Ramachandran Mudliar, aged about 8 months, both R/a. No.36, 60 Feet Rd, Shivanagar (South), Rajajinagar, Bengaluru-560010. Represented by mother and Natural Guardian Sri. Aishwarya Raghunandan. 3. Smt. Jagadha Ramachandran Mudliar, W/o Ramachandran Mudliar, aged about 56 years, R/at Flat No.13, Coelho Apartments, Margao, Salcete, Margao, South Goa, Goa 403601 ...PETITIONERS

AND: NIL ...RESPONDENT

PUBLIC NOTICE

Whereas, the above-named Petitioners have made petition to this Court under Section 372 of the Indian Succession Act 1925 for issuance of Succession Certificate in favour of the Petitioners in respect of the schedule assets, which stands in the name of late Sri. Srinath Ramachandran Mudliar. You are hereby informed to appear before this Hon'ble Court in person or through an advocate duly instructed on this **27/07/2026 at 11:00 A.M** in the event you have any objections against the Petition, failing which the above Petition will be heard and decided ex-parte.

SCHEDULE

A. Kotak Mahindra Bank, Thippasandra Branch having Bank Account No. 3749582301 with Balance of Rs. 1,07,194.99 (Rupees One Lakh Seven Thousand One Hundred Ninety four and Ninety Nine Paise) B. HDFC Bank Ltd, Lalbagh Road ... Balance of Rs. 1,34,667.70 ... C. HDFC bank Fixed Deposits ... D. Axis Bank, NM Road Branch ... E. Tata AIA Life Insurance ... F. Mutual Funds ... G. National Pension Scheme ... H. Provident Fund ... I. Term Insurance ... J. US Stocks ... K. India Stocks on Zerodha ... L. Stocks held on IND Money ... M. Crypto investment on Coin Switch ...

Given under my hand and seal of the Court on this 16/06/2026

By order of the Court, Assistant Registrar, City Civil Court, Bengaluru

SANDEEP LAHIRI & DEEPIKA JOSHI
Advocates
LAHIRI LAW CHAMBERS
No. 19, 3rd Floor, 1st Main Road, ISRO Signal, New BEL Road, RMV 2nd stage, Bangalore 560094.
E-mail: sandeeplahiri91@gmail.com deepikajoshi262@gmail.com

IN THE COURT OF THE PRINCIPAL CIVIL JUDGE AND JMFC AT HOSKOTE
C. Mis No. 255/2026

Between: 1. Smt. Sarojamma, D/o Late Sri Narayanappa (Smt Late Mutamma Mother) Aged about 68 years, R/at, No.322, Near Govt School Papareddy Pallya, Nagar Bhavi 2nd Stage, Bangalore-560072. 2. Smt. Kamalamma, D/o late Sri Narayanappa (Smt Late Mutamma Mother) Aged about 66 years, R/at, No.76-2, Renuka Nagar, Sarjapura, Anekal, Bangalore-562125 3. Sri Madesh S/o late Sri Narayanappa (Smt Late Mutamma Mother) Aged about 65 years, R/at, No.238, Devanagondi Village, Anugondanahalli Hobli, Hosakote Taluk, Bangalore Rural District. 4. Smt Shanthamma, D/o late Sri Narayanappa (Smt Late Mutamma Mother) Age 60 years, R/at, No. 72/1, 50th cross, Vidhyanagara, Near Sub-Registrar Office, Sarjapura, Anekal, B'lore 562125. 5. Smt Jayamma, D/o late Sri Narayanappa (Smt Late Mutamma Mother) Aged about 56years, R/at, No.513, Sarjapura, Anekal-562125. 6. Smt Nagamma, D/o late Sri Narayanappa (Smt Late Mutamma Mother) Aged about 52years, R/at, No.5, New 35, Byamma Layout, Papareddy Pallya, Nagar Bhavi 2nd stage, Bangalore North-560072 7. Savitri D/o, D/o late Sri Narayanappa (Smt Late Mutamma Mother) Aged about 44 years, R/at, No.238, Devanagondi Village, Anugondanahalli Hobli, Hosakote Taluk, Bangalore Rural District ...Petitioner's

AND: Tahasildar Hosakote, Bangalore Rural District ...Respondent

Whereas the petitioners above named has filed the above petition U/sec 13(3) of Registration of Births and Deaths Act 1969 seeking direction to the Respondent to enter the date of death of mother of Petitioner No. 1 to 7 in the registrar ... Late Mutamma W/o Sri Late Narayanappa in the register Devanagondi Village, Anugondanahalli Hobli, Hosakote Taluk, Bangalore Rural District, the above matter is posted for appearance of interested parties before the court at 11:00 A.M on 21/07/2026. Therefore interested parties are hereby required to appear before the court on the above said date and time either in person or through Advocate duly instructed, failing which the matter will be disposed of as Ex-parte.

Given under my hand and the seal of this court this the 11/06/2026.

BY ORDER OF THE COURT
Sheristedar, Civil Judge & J.M.F.C, Hosakote.

IN THE COURT OF THE SENIOR CIVIL JUDGE AND JMFC AT TIPTUR.
P & Sc No. 01/2026.

BETWEEN: SRI. NAGAVENI. B.S. ...PETITIONER.

AND: SRI. T.L. BALAJI AND OTHERS... RESPONDENTS

SUMMONS BY WAY OF PAPER PUBLICATION.

Please take Summons that, the petitioner have filed a petition for Succession Certificate to the petitioner, because petitioner is wife of Arun Kumar. T.B S/o T. L. Balaji, Arun Kumar T.B. died with out nominee with his wife on 14/01/2025 the petitioner begs this Hon'ble court issue Succession Certificate for claim of gold Ornament Stand in the name of the pettitioner.

If anybody having any right, title or clime our authority over the Said Schedule Property may appear and Contest the Said petition and the claiming person/s are hereby directed to appear before the Court on Hg. 25.07.2026 at 11.00 AM. either in person or thorough Advocate four filing your written statement our objections failure of which the Petition will determined as per the law.

Given under my hand and seal of the Court this 11th day of June 2026.

By Order of the Court
Senior Sheritedar SENIOR CIVIL JUDGE AND JMFC AT TIPTUR.

Advocate foor pettitioner
HEMANTHA. C.V. Advocate,
KAR/4432/2025 Mailaralingeshwara Badawane, Banavara, Arsikere taluk Hassan District - 573112
Ph. No. 9071892159.

ಪುರಸಭಾ ಕಾರ್ಯಾಲಯ, ಬಿಡದಿ
ಬಿಡದಿ ಮುಖ್ಯ ರಸ್ತೆ, ರಾಮನಗರ ತಾಲ್ಲೂಕು
ಬೆಂಗಳೂರು ದಕ್ಷಿಣ ಜಿಲ್ಲೆ – 562109
ದೂರವಾಣಿ : 080–27282572 e-mail: ka.bidadi.tmc@gmail.com
website: http://www.bidaditown.mrc.gov.in

ಸಂ: ಪುಕಾಬಿ/ಆ.ಶಾ/ಟೆಂಡರ್/01/2026–27 ದಿನಾಂಕ: 16.06.2026

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು 2000ರಂತೆ ಬಿಡದಿ ಪುರಸಭೆಯ 2026–27ನೇ ಸಾಲಿನ ಪುರಸಭಾ ನಿಧಿಯ ಶೇ.24.10 ಅನುದಾನದಲ್ಲಿ ಅರ್ಹ ನೋಂದಾಯಿತ ಮತ್ತು ಸ್ಥಳೀಯ ಆಸ್ಪತ್ರೆಗಳಿಂದ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಅರ್ಹ ಟೆಂಡರ್‌ದಾರರು ಕರೆದಿರುವ ಟೆಂಡರ್‌ನಲ್ಲಿ ಭಾಗವಹಿಸಬಹುದು.

ಕ್ರ. ಸಂ.	ಟೆಂಡರ್ ವಿವರ	ಟೆಂಡರ್ ಮೊತ್ತ (ರೂ.ಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)	ಟೆಂಡರ್ ಫಾರಂ ಶುಲ್ಕ (ರೂ.ಗಳಲ್ಲಿ)
1	ಬಿಡದಿ ಪುರಸಭೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೌರ ಕಾರ್ಮಿಕರಿಗೆ ಮಾಸ್ಟರ್ ಹೆಲ್ತ್ ಚೆಕಪ್.	3,56,000/-	9,000/-	590/-

ಸೂಚನೆ: 1) ಟೆಂಡರ್ ಡಾಕ್ಯುಮೆಂಟ್ ಪಡೆಯಲು ಕೊನೆಯ ದಿನಾಂಕ: 30.06.2026 ಸಂಜೆ 5:30 ಗಂಟೆವರೆಗೆ. 2) ಬಿಡ್ ತೆರೆಯುವ ದಿನಾಂಕ: 01.07.2026ರ ಸಂಜೆ 4.00 ಗಂಟೆ ನಂತರ. 3) ಇ.ಎಂ.ಡಿ ಮೊತ್ತವನ್ನು ಚೆಕ್/ಡಿಡಿ ಮೂಲಕ Chief Officer, TMC Bidadi ರವರ ಹೆಸರಿಗೆ ಸಲ್ಲಿಸಬಹುದು.

ಹೆಚ್ಚಿನ ವಿವರಗಳಿಗೆ ಕಚೇರಿಯ ವೇಳೆಯಲ್ಲಿ ಆರೋಗ್ಯ ಶಾಖೆಯನ್ನು ಸಂಪರ್ಕಿಸಬಹುದು.

ಸಹಿ/– ಆರೋಗ್ಯಾಧಿಕಾರಿ, ಪುರಸಭೆ, ಬಿಡದಿ DIPR/BSD/111/SA/2026-27 ಸಹಿ/– ಮುಖ್ಯಾಧಿಕಾರಿ, ಪುರಸಭೆ, ಬಿಡದಿ

ಬೆಂಗಳೂರು ಉತ್ತರ ನಗರ ಪಾಲಿಕೆ
ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ಪುಲಿಕೇಶಿನಗರ ವಿಭಾಗ, ರಾಮಸ್ವಾಮಿ ರಸ್ತೆ, ಬೆಂಗಳೂರು.

ಸಂ : ಕಾಅ/ಪುನ/ಟೆಂಡರ್/ಪಿಆರ್/06/2026–27 ದಿನಾಂಕ : 16.06.2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ–ಎರಡು ಲಕೋಟೆ ಪದ್ಧತಿ)

[illegible]

ಕ್ರ. ಸಂ.	ಕಾಮಗಾರಿಗಳ ವಿವರ/ಅಂದಾಜು ಮೊತ್ತ (ಲಕ್ಷಗಳಲ್ಲಿ)/ಇಎಂಡಿ (ರೂ. ಗಳಲ್ಲಿ)
	CAT-1 ಕೆಲಸಗಳು
1	ವಾರ್ಡ್ ಸಂಖ್ಯೆ 31 (70), ... 2025–26 ನೇ ಸಾಲಿನ ರಸ್ತೆ ಮತ್ತು ಚರಂಡಿಗಳ ಸುಧಾರಣೆ ಕಾಮಗಾರಿ. ಅಂದಾಜು ಮೊತ್ತ : ರೂ. 20.00 ಲಕ್ಷಗಳು, ಇಎಂಡಿ ಮೊತ್ತ ರೂ. 25,000/–.
2	ವಾರ್ಡ್ ಸಂಖ್ಯೆ 48 (71) ... 2025–26ನೆ ಸಾಲಿನ ರಸ್ತೆ ಮತ್ತು ಚರಂಡಿಗಳ ಸುಧಾರಣೆ ಕಾಮಗಾರಿ. ಅಂದಾಜು ಮೊತ್ತ : ರೂ. 10.00 ಲಕ್ಷಗಳು, ಇಎಂಡಿ ಮೊತ್ತ ರೂ. 12,500/–.
3	ವಾರ್ಡ್ ಸಂಖ್ಯೆ 48 (71) ... 2025–26 ನೇ ಸಾಲಿನ ... ಕಾಮಗಾರಿ. ಅಂದಾಜು ಮೊತ್ತ : ರೂ. 10.00 ಲಕ್ಷಗಳು, ಇಎಂಡಿ ಮೊತ್ತ ರೂ. 12,500/–.

ಕಾರ್ಯಕ್ರಮಗಳ ವೇಳಾಪಟ್ಟಿ : (1) ಟೆಂಡರ್ ದಾಖಲೆಗಳನ್ನು 19.06.2026 ರಿಂದ ಕೆಪಿಪಿ ಪೋರ್ಟಲ್‌ನಲ್ಲಿ ಡೌನ್‌ಲೋಡ್ ಮಾಡಬಹುದು. (2) ಪೂರ್ವ–ಬಿಡ್ ಸಭೆಯು 22.06.2026 ರಂದು ಮಧ್ಯಾಹ್ನ 15:00 ಗಂಟೆಗೆ ಕಾರ್ಯನಿರ್ವಾಹಕ ಅಭಿಯಂತರರು, ಪುಲಿಕೇಶಿನಗರ ವಿಭಾಗ, ರಾಮಸ್ವಾಮಿ ರಸ್ತೆ, ... ಬೆಂಗಳೂರು–560 005 ಇವರ ಕಚೇರಿಯಲ್ಲಿ ನಡೆಯಲಿದೆ. (3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: 06.07.2026 ರ 16:00 ಗಂಟೆಯವರೆಗೆ. (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ 08.07.2026 ರ 11:30 ಗಂಟೆಗಳ ನಂತರ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಪುಲಿಕೇಶಿನಗರ ವಿಭಾಗ, ಬೆಂಗಳೂರು ಉತ್ತರ ನಗರ ಪಾಲಿಕೆ

IN THE COURT OF THE PRINCIPAL CIVIL JUDGE AND JMFC AT ANEKAL
C.MIS. No. 930/2026

BETWEEN : 1. SRI. RAMASWAMY REDDY S/o Late Chowda Reddy Aged about 86 years, 2. SMT. NANJAMMA D/o Late Chowda Reddy Aged about 79 years, 3. SMT. KANTHAMMA D/o Late Chowda Reddy Aged about 74 years, 4. SMT. INDRAMMA D/o Late Chowda Reddy Aged about 70 years Petitioners all are R/at No. 39, Nekkundi Village, Sarjapura Hobli, Anekal Taluk, Bangalore District 560087. ...PETITIONERS

AND : THE THAHALDAR, Anekal Town and Taluk, Bangalore District. ...RESPONDENT

PUBLIC NOTICE

Whereas, the Petitioners have instituted the above petition for seeking death certificate of their Mother namely **Late Smt. Pillamma W/o. Late Chowda Reddy was died on dated: 13.03.1985** in Petitioners home at No. 39, Nekkundi Village, Sarjapura Hobli, Anekal Taluk, Bangalore District.

You are hereby informed to appear before this Hon'ble court, in person or by pleader duly instructed and able to answer material question relating to suit or you shall be accompanied by person to answer all such questions **on 17th day of July 2026 at 11-00 A.M** in the said case at Principal Civil Judge and JMFC at Anekal.

Take notice in default of your appearance on the date before mentioned the suit will be heard and determined in your absence.

Given under my hand and seal of the court this 15th day of June 2026 at Anekal.

By Order of the Court, Sheristedar,
Civil Judge (Jr.Dn), and JMFC, Anekal
L.N. RAJU, Advocate
No. 7, Advaita Law Firm, Uma Complex, Near MRF Tyres Anekal Town, Bangalore - 562106.

IN THE COURT OF THE PRINCIPAL CIVIL JUDGE AND JMFC AT ANEKAL
C.MIS. No. 932/2026

BETWEEN : 1. SRI. RAMASWAMY REDDY S/o Late Chowda Reddy Aged about 86 years, 2. SMT. NANJAMMA D/o Late Chowda Reddy Aged about 79 years, 3. SMT. KANTHAMMA D/o Late Chowda Reddy Aged about 74 years, 4. SMT. INDRAMMA D/o Late Chowda Reddy Aged about 70 years Petitioners all are R/at No. 39, Nekkundi Village, Sarjapura Hobli, Anekal Taluk, Bangalore District 560087. ...PETITIONERS

AND : THE THAHALDAR, Anekal Town and Taluk, Bangalore District. ...RESPONDENT

PUBLIC NOTICE

Whereas, the Petitioners have instituted the above petition for seeking death certificate of their father namely **Late Chowdareddy S/o. Munireddy was died on dated: 15.04.1986** in Petitioners home at No. 39, Nekkundi Village, Sarjapura Hobli, Anekal Taluk, Bangalore District.

You are hereby informed to appear before this Hon'ble court, in person or by pleader duly instructed and able to answer material question relating to suit or you shall be accompanied by person to answer all such questions **on 17th day of July 2026 at 11-00 A.M** in the said case at Principal Civil Judge and JMFC at Anekal.

Take notice in default of your appearance on the date before mentioned the suit will be heard and determined in your absence.

Given under my hand and seal of the court this 15th day of June 2026 at Anekal.

By Order of the Court, Sheristedar,
Civil Judge (Jr.Dv), and JMFC, Anekal
L.N. RAJU, Advocate
No. 7, Advaita Law Firm, Uma Complex, Near MRF Tyres Anekal Town, Bangalore - 562106.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ದೊಡ್ಡಬಳ್ಳಾಪುರ
ಪಿ.ಮಿಸ್. ಸಂಖ್ಯೆ 344/2026

[illegible]

By Order of the Court, Chief Ministerial Officer,
Prl. Civil Judge and JMFC, Doddaballapura.

[illegible]

CHANGE OF NAME

I, **JITENDRA KUMAR** S/o BHOPARAM aged 39 years, residing at No. 11, 2nd Floor, D S Lane, Sowrastra Pet, Bangalore South, Chickpet, Bengaluru-560053, do hereby declare that I have changed my name from **JITENDRA KUMAR BHOPARAM** to **JITENDRA KUMAR**, henceforth, and I shall be known and called as **JITENDRA KUMAR**, for all purposes, vide affidavit dated 09TH JUNE 2026, sworn before Advocate and Notary **R VISHWANATH** at Bangalore.

IN THE COURT OF THE IV ADDL. CIVIL JUDGE AND JMFC AT ANEKAL
Crl. Misc No. 899/2026

BETWEEN: Smt. Nagamma, D/o Late Chikkayallappa & Late Osari Yallamma, W/o Sampangi, aged about 54 years, R/at, #E789, Kammasandra Village, Anekal Taluk, Bangalore 560100 ... PETITIONERS

AND: Nagarasabe, Hebbagodi, Anekal Taluk, Anekal ... RESPONDENT

PUBLIC NOTICE

Whereas, the Petitioner above named filed the above petition for seeking death certificate of petitioner Sister Namely Hosuramma @ Hosur Yallamma D/o. Late Chikkayallappa W/o. Late Chandrahasa who was died on 10/11/2001, (Tenth day of November Two Thousand One) at Kammasandra Village, Anekal Taluk Bangalore. You are if anyone have any objection hereby inform to appear before this Hon'ble court in person or any Legal heirs are by a pleader duly instructed on **14/07/2026 at 11:00 A.M** in forenoon to show cause against the claim, filing which the matter will be heard and determined ex-party.

Given under my hand and the seal of the court on this 10/06/2026

By order of the Court, Sheristedar, Civil Judge Jr.Dvn and J.M.F.C Court, Anekal

RAMESH .G, SUJNDRA KUMAR .P
Advocates
Off at- No2, R.G. Law Associates, Behind Raghavendra Bhavan, Beside PLD Bank, Anekal Town, Bangalore

---

ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕೋಲಾರ
ಪಿ. ಅಮಲ್ ಜಾರಿ ಸಂಖ್ಯೆ : 61/2025

ಅರ್ಜಿದಾರರು : ಶ್ರೀ ... [illegible]

ವಿರುದ್ಧ

ಎದುರುದಾರರು

2. ... **State Bank Employees Co-operative Credit Society Ltd, Mysore Bank, Bengaluru Circle Branch.**

ಸಾರ್ವಜನಿಕ ಪ್ರಕಟಣೆ

[illegible]

ಶೆಡ್ಯೂಲ್

Kolar Branch, State Bank of India, A/C No. 54042461315, Amount of Rs.2,88,866/- ... [illegible]

... ದಿನಾಂಕ 16.06.2026 ... [illegible]

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು ಪ್ರಧಾನ ಸಿವಿಲ್ ನ್ಯಾಯಾಲಯ, ಕೋಲಾರ

ಅರ್ಜಿದಾರರ ಪರ ವಕೀಲರು: ... [illegible], ಕೋಲಾರ.
ಮೊ.ಸಂ. 9480109968

ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಹೊನ್ನಾವರ ವಿಭಾಗ, ಹೊನ್ನಾವರ – 581 334
OFFICE OF THE DEPUTY CONSERVATOR OF FORESTS, HONAVAR DIVISION, HONAVAR-581334
ದೂರವಾಣಿ ಸಂ: 08387–295236 Email: dcf.honavar@gmail.com
ಸಂ.ಎ2/ಟಿಟೆಂ/ಕೆಸಿಎಫ್/ಟೆಂಡರ್/ವಿವ–/2026–27 ದಿನಾಂಕ: 08.06.2026

ಟೆಂಡರ್ ಪ್ರಕಟಣೆ

(1) 2026–27 ನೇ ಸಾಲಿನ ... ಇ–ಟೆಂಡರ್ ... ಒಟ್ಟು 10 ಯುನಿಟ್ಟುಗಳಿಗೆ ದಿನಾಂಕ 17.06.2026 ರಂದು ಅಥವಾ ಬಿಡ್ ಟೆಂಡರ ಕರೆಯಲಾಗಿದೆ. (2) 2026–27 ನೇ ಸಾಲಿನ ... ಒಟ್ಟು 25 ಯುನಿಟ್ಟುಗಳಿಗೆ ದಿನಾಂಕ 19.06.2026 ರಂದು ಅಥವಾ ಬಿಡ್ ಟೆಂಡರ ಕರೆಯಲಾಗಿದೆ. (3) 2026–27 ನೇ ಸಾಲಿನ ... ಒಟ್ಟು 17 ಯುನಿಟ್ಟುಗಳಿಗೆ ದಿನಾಂಕ 22.06.2026 ರಂದು ಅಥವಾ ಬಿಡ್ ಟೆಂಡರ ಕರೆಯಲಾಗಿದೆ. ದಿನಾಂಕ 06.12.2024 ಮತ್ತು 17.10.2025 ರ Pre qualified tender ... https://kppp.karnataka.gov.in ಮೂಲಕ ಹಾಗೂ ಈ ಕಛೇರಿಯ ದೂರವಾಣಿ ಸಂಖ್ಯೆ 08387–295236 ಮೂಲಕ ಹೆಚ್ಚಿನ ಮಾಹಿತಿ ಪಡೆದುಕೊಳ್ಳಬಹುದಾಗಿದೆ.

DIPR/KWR/KSMCA/211/26-27 ದಿ. 16.06.2026

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ, ಹೊನ್ನಾವರ ವಿಭಾಗ, ಹೊನ್ನಾವರ

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್ ಧಾರವಾಡ
ಕಾರ್ಯನಿರ್ವಾಹಕ ಇಂಜಿನೀಯರರು,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಧಾರವಾಡ
ಕ್ರ.ಸಂ.ಪಂ.ರಾ.ಇಂ.ವಿ.ಧಾ/ಕ.ಇಂ.–2/2026–2027/915 ದಿನಾಂಕ : 16–06–2026

ಅಲ್ಪಾವಧಿ ಟೆಂಡರ್ ಪ್ರಕಟಣೆ –04/2026–27
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜನೀಯರ್, ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ, ಧಾರವಾಡ ಇವರಿಂದ ಸರ್ಕಾರ ಆದೇಶ ಸಂಖ್ಯೆ: No.FD 876 Exp-12/2017, Bangalore, dated: 15–09–2017 ರನ್ವಯ ... **KW-1, KW-2, KW-3** ... 2000 ರನ್ವಯ ಇ–ಪ್ರೊಕ್ಯೂರ್‌ಮೆಂಟ್‌ನ **https://kppp.karnataka.gov.in/** ನಿಂದ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಂಡು ಟೆಂಡರ್‌ಗಳನ್ನು ಸಲ್ಲಿಸಬಹುದು.

Indent Numbers :
General : 26403, 26769, 26404, 26431, 26411 ,26772, 26438/Call-2 26445/Call-2, 26526/Call-2, 26529/Call-2, 24812/Call-2 24801/Call-2, 26430/Call-2, 24390/Call-2, 24507/Call-2 24473/Call-2, 26963/Call-2.
SC Category : 26774, 26698, 24333/Call-2, 24320/Call-2.
ST Category : 26773, 26402, 24348/Call-2, 24808/Call-2.
CAT-2 (A) : 26425, 26408.
CAT-1 : 23958/Call-2

ಪ್ರಮುಖ ದಿನಾಂಕಗಳು:
1) ಟೆಂಡರ್ ದಾಖಲೆಗಳನ್ನು ದಿನಾಂಕ: 18–06–2026 ರಿಂದ ಡೌನ್‌ಲೋಡ್ ಮಾಡಿಕೊಂಡು ದಿನಾಂಕ: 29–06–2026 ರ ಸಂಜೆ 4.00 ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. 2) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 30–06–2026 ರ ಸಾಯಂಕಾಲ 4.30 ಗಂಟೆಗೆ. ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ.

ಕಾಮಗಾರಿಯ ಹೆಸರು/ಗುತ್ತಿಗೆದಾರರ ಅರ್ಹತೆ/ಟೆಂಡರ್ ನಿಯಮ/ಟೆಂಡರ್ ಷರತ್ತುಗಳು/ಟೆಂಡರ್ ಪ್ರೋಸೆಸ್ಸಿಂಗ್ ಶುಲ್ಕ/ EMD ಮೊತ್ತ ಇತ್ಯಾದಿ ವಿವರಗಳಿಗೆ **https://kppp.karnataka.gov.in/** ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಸಂಬಂಧಿಸಿದ ವಿಭಾಗ ನಿರ್ವಹಕರನ್ನು ಸಂಪರ್ಕಿಸಬಹುದು.

ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ, ಯಾವುದೇ ಟೆಂಡರನ್ನು ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/– (ಶ್ರೀ ಪ್ರಶ್ಚೈಲ ಹೊಸಕೇರಿ)
ಕಾರ್ಯನಿರ್ವಾಹಕ ಇಂಜನೀಯರರು,
ಪಂ.ರಾ.ಇಂ.ವಿಭಾಗ, ಧಾರವಾಡ
ವಾ.ಮಾ.ಸಂ./ಧಾರವಾಡ/313/ಪಿಇಡಬ್ಲ್ಯೂಡಿ/ಎಸ್‌ಎ/2026-27

ಪ್ರಮಾಣ ಪತ್ರ

[illegible] ... 11.06.2026ರಂದು ಪ್ರಮಾಣೀಕರಿಸಲಾಗಿದೆ.

ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರು ... ನ್ಯಾಯಾಲಯ
ಮೂಲ ದಾವಾ ಸಂಖ್ಯೆ 1254/2024

[illegible]

IN THE COURT OF THE SENIOR CIVIL JUDGE AND J.M.F.C. AT PAVAGADA
P & Sc. No. 4/2025

PETITIONER: M.Pandi S/o late Mutharayappa, aged about 35 years, R/O Kotagudda village, Nidagal Hobli, Pavagada Taluk, Tumakuru Dist.

-Vs-

RESPONDENT: -- NIL--

PAPER PUBLICATION

WHEREAS, the petitioners have filed the above petition seeking issue of a Succession Certificate to the petitioner pertaining to the policy in Life Insurance Corporation of India (LIC) in respect of policy No.729105573 in Pavagada branch, Pavagada as her assets. Now the matter is set down for issue notice/suit summons to all or any 1 interested persons or legal heirs whoever got any claim over the above said amount may appear in this case either as respondents or as petitioners and may prosecute the same on the date of hearing i.e., on 30/06/2026.

You are hereby called upon to appear before this Hon'ble court at 11.00 AM. on the said date of hearing either in person or through your counsel. If you fail to appear before this court, the matter will be Heard and decided as exparte.

Given under the hand and seal of the court, this day of 12/06/2026.

By order : Sheristedar
C.M.O., Senior civil judge, & JMFC court Pavagada.
Adv. for petitioner : P H Subramanyam
Advocate, Pavagada.

GENERAL PUBLIC NOTICE

My client Ramesh Jamane, aged 43 years, S/o. Nagabhushan Rao, residing at No.22, 7th Main, Near Kabeer Ashrama, Doddakammanahalli, Bangalore 87 had entered into sale agreement on 21.3.2025 with respect to residential corner site No.21/A, E-PID Katha No. 2785332955 situated in Sy.No. 7 and 8 of HAL II Stage Extension, Domlur, Bangalore measuring east to west 15.10 meters, north to south 0.40 + 17.40/2 meters and totally measuring 137.41 square meters and immovable property bearing residential corner site No.01/A situated in Sy.No. 7 & 8 of HAL II Stage Extension, Domlur, Bangalore measuring east to west 13.70 meters, north to south 5.00 + 18.20/2 meters and totally measuring 158.02 square meters. Both sites amalgamated measuring about 293.11 square meters or 3155 square feet together. Vide order of Bangalore Mahanagara Palike dated 18.12.2000, thereby retaining the Municipal Katha No 1A to both the sites and including a 3 floored old commercial building consisting of basement area of 27.04 square meters, 8 commercial shops in the ground floor measuring 87.01 square meters and one large space in the second floor measuring 87.01 square meters, bounded by east by Site No.21/A, west by road, north by site No.1 and south by road with Shamala Reddy.S, W/o. Late Ganeshwar Reddy, aged 79 years and one Srinivas Reddy, S/o. Late Ganeshwar Reddy, both residing at No.17/4, Cambridge Road, near Shamala Hospital, Halasuru, Bangalore 560008. As per the sale agreement the vendors have agreed to complete the execution and registration of the sale deed with respect to the above said property within one year from the date of the agreement and the said one year got over on 21.3.2026. As such my client has issued notice on 30.5.2026 calling upon the vendors to execute the sale deed as per the agreement. The said notices have returned with an endorsement "left", hence I am taking this public notice before initiating legal proceedings

P.C. VINITHA ADVOCATE No.7/2, 1st Floor, Annapoorna Block, 2nd Cross, Kumarapark West, Bangalore 560 020 Mob.: 9880105503

IN THE COURT OF THE PRINCIPAL CIVIL JUDGE AND JMFC AT ANEKAL
C.MIS. No. 931/2026

BETWEEN : 1. SRI. RAMASWAMY REDDY S/o Late Chowda Reddy Aged about 86 years, 2. SMT. NANJAMMA D/o Late Chowda Reddy Aged about 79 years, 3. SMT KANTHAMMA D/o Late Chowda Reddy Aged about 74 years, 4. SMT. INDRAMMA D/o Late Chowda Reddy Aged about 70 years Petitioners all are R/at No. 39, Nekkundi Village, Sarjapura Hobli, Anekal Taluk, Bangalore District 560087. ...PETITIONERS

AND : THE THAHALDAR, Anekal Town and Taluk, Bangalore District. ...RESPONDENT

PUBLIC NOTICE

Whereas, the Petitioners have instituted the above petition for seeking death certificate of their elder sister namely **Late Lakshmamma D/o Late Chowda Reddy was died on dated: 15.09.1991** in Petitioners home at No. 39, Nekkundi Village, Sarjapura Hobli, Anekal Taluk, Bangalore District.

You are hereby informed to appear before this Hon'ble court, in person or by pleader duly instructed and able to answer material question relating to suit or you shall be accompanied by person to answer all such questions **on 17th day of July 2026 at 11-00 A.M** in the said case at Principal Civil Judge and JMFC at Anekal.

Take notice in default of your appearance on the date before mentioned the suit will be heard and determined in your absence.

Given under my hand and seal of the court this 15th day of June 2026 at Anekal.

By Order of the Court, Sheristedar,
Civil Judge (Jr.Dv), and JMFC, Anekal
L.N. RAJU, Advocate
No. 7, Advaita Law Firm, Uma Complex, Near MRF Tyres Anekal Town, Bangalore - 562106.

IN THE COURT OF HON'BLE II-ADDL CIVIL JUDGE & JMFC AT K.G.F.
C.M.C. No: 110/2026

Petitioner:- 1. PRASATH.V S/o. Late. Venkataswamy, Aged about 48 years R/at: #14, N.T.Block Oorgaum Post, K.G.F. 563120. 2. SMT. MUPPARAPU JANAKI D/o. Late. Venkataswamy W/o. Mupparapu Abraham Aged about 55 years R/at: #14, N.T.Block Oorgaum Post, K.G.F. 563120. 3. SMT. JAYA D/o. Late. Venkataswamy Aged about 40 years, R/at: #14, N.T.Block Oorgaum Post, K.G.F. 563120

-V/S-

Respondent: THE COMMISSIONER Robertsonpet City Municipal K.G.F.

PUBLIC NOTICE

WHEREAS, the petitioners has filed a Petition Under Section 13(3) of Registration of Birth & Death Act 1969, for obtaining the Death Certificate of the petitioner No.1 FATHER SRI. VENKATASWAMY, S/o. GURAIAH & SMT. MARIYAMMA, was died on 12-10-2021 at Home # 14, N.T.Block, Oorgaum Post, K.G.F. 563120.

The hearing date of the case if posted on 1st July 2026. If any persons having any claim or objection has to appear before this Hon'ble Court in persons or by pleader in the above said hearing date at about 11.00 am to answer the same, failing which the petitioners will be disposed off as Ex-Parte.

Given under my hand and seal of this Court on this 4th June 2026

By the Order of this Court
Chief Ministrial Officer,
PRL CIVIL JUDGE AND JMFC COURT
KOLAR GOLD FIELDS

Advocate for Petitioners
KUM.BANU.B, B.Com., LL.B.,
SRI.RICHARD DANIEL, B.Com., LL.B
Advocates, K.G.F.

ಕರ್ನಾಟಕ ಸರ್ಕಾರ (ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಕೆ.ಎಚ್.ಪಾಟೀಲ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ
ಹಿಂದಿನ ಹೆಸರು ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ ಮುಳಗುಂದ ರಸ್ತೆ, ಮಲ್ಲಸಮುದ್ರ, ಗದಗ–582103 ದೂರವಾಣಿ ಸಂಖ್ಯೆ: 08372–200601
E-mail ID : gimsgadag@gmail.com
web : www.gimsgadag.karnataka.gov.in
File No : KHPIMS/Tender/Cost Per Test/20/2026-27/35
Date : 16.06.2026

ಇ–ಟೆಂಡರ ಪ್ರಕಟಣೆ

ಕೆ.ಎಚ್.ಪಾಟೀಲ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಜೀವ ರಸಾಯನ ವಿಭಾಗಕ್ಕೆ Biochemistry Analyser Reagents Cost Per Reportable Test Reagent Rental Basis ಮುಖಾಂತರ ವೈದ್ಯಕೀಯ ಪ್ರಯೋಗ ಶಾಲಾ ಪರೀಕ್ಷೆಗಳಿಗಾಗಿ ಬಾಡಿಗೆ ಆಧಾರದ ಮೇಲೆ ಸರಬರಾಜುಗಾಗಿ ಕರೆದ ಟೆಂಡರ ಆಸಕ್ತಿಯುಳ್ಳ ಸಂಘ–ಸಂಸ್ಥೆಗಳಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಮರು ಟೆಂಡರ ಕರೆಯಲಾಗಿದ್ದು, ದಿನಾಂಕ : 17.06.2026 ರಿಂದ ದಿನಾಂಕ : 01.07.2026ರ ಸಾಯಂಕಾಲ 4:00 ಗಂಟೆವರೆಗೆ ಇ–ಪೋರ್ಟಲ್ ಸಂಖ್ಯೆ:DME/2026-27/IND2076 (https://kppp.Karnataka .gov.in/)ನಲ್ಲಿ ಟೆಂಡರ ಅಪ್‌ಲೋಡ್ ಮಾಡಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕರ್ತವ್ಯದ ದಿನಗಳಲ್ಲಿ ಕೆಳಗೆ ಸಹಿ ಮಾಡಿದವರ ಕಛೇರಿಗೆ ಸಂಪರ್ಕಿಸಬಹುದು.

ಸಹಿ/– ನಿರ್ದೇಶಕರು
ಕೆ.ಎಚ್.ಪಾಟೀಲ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ
ವಾಮಾಸಂಇ/ಗದಗ/122/ಕೆಎಸ್‌ಎಂಸಿಎ/2026–27

ಫಾರಂ ಎ

ಸಾರ್ವಜನಿಕ ಘೋಷಣೆ

(ಭಾರತದ ಇನ್ಸಾಲ್ವೆನ್ಸಿ ಮತ್ತು ಬ್ಯಾಂಕ್‌ರಪ್ಸಿ ಬೋರ್ಡ್ (ಸ್ವಯಂ ದಿವಾಳಿತನ ಪ್ರಕ್ರಿಯೆ) ನಿಯಮಾವಳಿಗಳು, 2017ರ ನಿಯಮಾವಳಿ14)

ಸಿಂಜೀನ್ ಮ್ಯಾನುಫ್ಯಾಕ್ಚರಿಂಗ್ ಸೊಲ್ಯೂಷನ್ಸ್ ಲಿಮಿಟೆಡ್‌ನ ಹೂಡಿಕೆದಾರರ ಗಮನಕ್ಕೆ

1	ಕಾರ್ಪೊರೇಟ್ ವ್ಯಕ್ತಿಯ ಹೆಸರು	ಸಿಂಜೀನ್ ಮ್ಯಾನುಫ್ಯಾಕ್ಚರಿಂಗ್ ಸೊಲ್ಯೂಷನ್ಸ್ ಲಿಮಿಟೆಡ್
2	ಕಾರ್ಪೊರೇಟ್ ವ್ಯಕ್ತಿಯ ಸಂಸ್ಥಾಪನಾ ದಿನಾಂಕ	ಆಗಸ್ಟ್ 26,2022
3	ಕಾರ್ಪೊರೇಟ್ ವ್ಯಕ್ತಿಯು ಸಂಸ್ಥಾಪಿತ/ನೋಂದಾಯಿತವಾಗಿರುವ ಪ್ರಾಧಿಕಾರ	ಆರ್‌ಓಸಿ–ಬೆಂಗಳೂರು
4	ಕಾರ್ಪೊರೇಟ್ ವ್ಯಕ್ತಿಯ ಕಾರ್ಪೊರೇಟ್ ಗುರುತಿನ ಸಂಖ್ಯೆ	U24290KA2022PLC165409
5	ಕಾರ್ಪೊರೇಟ್ ವ್ಯಕ್ತಿಯ ನೋಂದಾಯಿತ ಕಚೇರಿ ಮತ್ತು ಪ್ರಧಾನ ಕಚೇರಿಯ (ಯಾವುದಾದರೂ ಇದ್ದರೆ) ವಿಳಾಸ	[illegible]
6	ಕಾರ್ಪೊರೇಟ್ ವ್ಯಕ್ತಿಯ ದಿವಾಳಿತನ ಆರಂಭದ ದಿನಾಂಕ	ಜೂನ್ 15, 2026
7	ಲಿಕ್ವಿಡೇಟರ್‌ನ ಹೆಸರು, ವಿಳಾಸ, ಇಮೇಲ್ ವಿಳಾಸ, ದೂರವಾಣಿ ಸಂಖ್ಯೆ ಮತ್ತು ನೋಂದಣಿ ಸಂಖ್ಯೆ	ಹೆಸರು: ಶ್ರೀ. ಜಾಬಿ ಚಾಕೊ; ವಿಳಾಸ: ನಂ. 120, 3ನೇ ಕ್ರಾಸ್, 3ನೇ ಮುಖ್ಯ ... ಬೆಂಗಳೂರು – 560 105; ಇಮೇಲ್: jobykc@gmail.com ಫೋನ್: +91 [illegible]; ಪ್ರಕ್ರಿಯೆ ಇಮೇಲ್ : syngene.vl@gmail.com; ನೋಂದಣಿ ಸಂಖ್ಯೆ: IBBI/IPA-001/IP-P01372/2018-19/12300
8	ಕ್ಲೈಮ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ	ಜುಲೈ 15, 2026

[illegible]

ದಿನಾಂಕ: 17.06.2026
ಸ್ಥಳ: ಬೆಂಗಳೂರು

ಸಹಿ/–
ಜಾಬಿ ಚಾಕೊ
ಲಿಕ್ವಿಡೇಟರ್
ನೋಂದಣಿ ಸಂ.: IBBI/IPA-001/IP-P01372/2018-19/12300

IN THE COURT OF SENIOR CIVIL JUDGE AT MAGADI
R.A. No. 1/2022

BETWEEN: SRI. G. SHIVANANDA, S/o late. Gangarudraiah, aged about 70 years, R/at Basagarahalli village, Madduru Taluk, Mandya District & Others ...APPELLANTS

AND: SRI. MANJUNATHA, S/o late. Shivanna, aged about 40 years, R/at Malluru Village, Soluru Hobli, Magadi Taluk, Ramanagara District & Others ...RESPONDENTS

NOTICE TO THE PROPOSED RESPONDENTS

7(a). SMT. G.P. RENUKAMMA, W/o late S.M. Mahadevaiah, aged about 55 years, R/at No. 65/129, Prabhu Nilaya, 2nd Main Road, Maruthi Nagara/Vajarahalli, Nelamangala, Bangalore Rural District-562123. 7(b) SRI. M. SUPRITH, S/o late S.M. Mahadevaiah, aged about 28 years, R/at No. 65/129, Prabhu Nilaya, 2nd Main Road, Maruthi Nagara/Vajarahalli, Nelamangala, Bangalore Rural District-562123, 7(c) SRI. M. SUHAS, S/o late S.M. Mahadevaiah, aged about 25 years, R/at No. 65/129, Prabhu Nilaya, 2nd Main Road, Maruthi Nagara Vajarahalli, Nelamangala, Bangalore Rural District-562 123. 11. SRI. M.S. RAVISHANKARA, W/o late M.Y Sadashivaiah, aged about 52 years, R/at Motaganahalli village, Soluru Hobli, Magadi Taluk, Ramanagara District. 16. SMT. BHAVYA, D/o R. Rudrappa, aged about 24 years, R/at Motaganahalli village, Soluru Hobli, Magadi Taluk, Ramanagara District. 17. SRI. M.V. YATHISH, S/o late. Veerashettappa, aged about 48 years, R/at Motaganahalli village, Soluru Hobli, Magadi Taluk, Ramanagara District. 19. SRI. M.Y. RAJKUMAR, S/o late. Yediyurappa, R/at Motaganahalli village, Soluru Hobli, Magadi Taluk, Ramanagara District. 20. SRI. M. LOKESH, S/o late. Parvathamma, aged about 45 years, R/at No. 1150/3, K.N. Extention, Opp. Mangala Nursing Home, Yeshwanthpur, Bangalore-22. 22. SMT. SUKANYA, W/o Rajashekar, aged about 50 years, R/at No. 2/1, 3rd Cross, 4th Main, 4th Block, Thyagarajanagara, Bangalore- 28. 25. SMT. PUTTA RUDRAMMA, D/o late Shivanna, aged about 40 years, R/at Kaverripura Village, BSK Post, Bangalore-70. 26. SMT. RENUKAMBA, D/o late Shivanna, aged about 37 years, R/at Mahadevapura, Nelamangala Taluk, Bangalore Rural District. 27. SRI. H. JAYANNA, S/o late Aralekunte, aged about 48 years, R/at Chikkanahalli Village, Kallambella Hobli, Sira Taluk, Tumakuru District ...RESPONDENTS

UNDER ORDER V RULE 20 (a) OF CODE OF CIVIL PROCEDURE

Whereas, the appellants named above have challenged the judgement and decree passed in O.S.No.73/2004, dated 10.11.2021 on the file of court below. The proposed LRS of the 7th respondent and respondents No. 11, 16, 17, 19, 20, 22, 25, 26 & 27 named above hereby directed to appear before Senior Civil Judge at Magadi, Ramanagara District in person or by their pleader duly instructed on **04/08/2026 at 11.00 A.M.** in forenoon and to resist the above suit, failing which the matter will be heard and decide by ex-parte.

Given under my hand and seal of the court on this 11/06/2026.

By order of the Court, Sheristedar, Senior Civil Judge & JMFC Court, Magadi

Advocate for Appellants:
M.D. BASAVANNA
No. 27, 1st Floor, ASVNV Complex, No.39/2, K.G. Road, Bangalore- 09.

IN THE COURT OF THE HON'BLE PRL. SENIOR CIVIL JUDGE AT KOLAR
G&WC. NO. 24/2025

BETWEEN : Smt. Manjula W/o Late Devaraj, Aged about 37 years, R/at Subash Nagar, Malur Town ...Petitioner

IN THE MATTER OF WARDS

Minor wards : 1) Master Kishore D S/o Late Devaraj, Aged about 16 years. 2) Kumari Spoorthi D D/o Late Devaraj, Aged about 15 years. And

Nil ...Respondent

PUBLIC NOTICE TO THE INTERESTED PERSONS

The petitioner filed this petition before this Hon'ble court to get an order to sell the suit schedule property on behalf of minor wards and such other reliefs.

The above matter is coming up for hearing on 20-07-2026. The persons who are interested in the matter may appear before this court in person or through their advocate on that day at 11.00 am to file their objections if any. Failing which the matter will be heard and determined exparte.

SCHEDULE

The land situated at Hogari village, Kasaba Hobli, Kolar Taluk bearing old Sy.No. 7/1 measuring total extent of 1 acre 34.12.00 guntas after phodi assigned as Sy.No. 7/8 measuring 0.14.12.00 guntas bounded on:- East by : "D" Schedule property allotted to Lokesh, West by : "B" Schedule property allotted to Manjula, North by : Beerappa's land and 2 gunta's of land in Sy.No.7/1 belonging to one Harish.T, South by : Road.

Given under my hand and seal of this court on this 16th day of June 2026.

By the order of the court : Sheristedar
Hon'ble Pr. Senior civil Judge Kolar.
Advocate for Petitioner : Mohammed Hannel, Advocate, Kolar

ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ
ಪಿ.ಮಿಸ್. ಸಂ. 264/2026

[illegible]

ಮಾನ್ಯ ... ಸಿವಿಲ್ ನ್ಯಾಯಾಧೀಶರು ... ನ್ಯಾಯಾಲಯ, ಚಿಕ್ಕಬಳ್ಳಾಪುರ
ಮೂಲ ದಾವಾ ಸಂಖ್ಯೆ 967/2023

[illegible]

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಚಿಕ್ಕಬಳ್ಳಾಪುರ
ಓ.ಎಸ್ ಸಂಖ್ಯೆ 344/2023

[illegible]

SCHEDULE

Lands situated at Sidlaghatta village, Kasaba hobli, Sidlaghatta taluk Chikkaballapur Dist. 1. Land bearing sy.no. 229/1A measuring to an extent of 0-08.08 Guntas assesed at Rs. 1.05/- 2. Land bearing sy.no. 222/1 measuring to an extent of 0-11 guntas along with 0-08 Gunta Phut karab assesed at Rs.1-04/- 3. Land bearing sy.no. 222/2 measuring to an extent of 0-04 guntas along with 0-08 Gunta Phut karab assessed Rs.0-35/- 4. Land bearing sy.no. 222/3 measuring to an extent of 0-04 guntas assesed at Rs.0-40/-

[illegible]

ದಿನಾಂಕ : 16.06.2026 ಸ್ಥಳ : ಚಿಕ್ಕಬಳ್ಳಾಪುರ

ಹುಣಸೂರು ಯೋಜನಾ ಪ್ರಾಧಿಕಾರ, ಹುಣಸೂರು
ಮೊದಲನೇ ಮಹಡಿ, ಎಸ್.ಜೆ.ಆರ್.ವೈ ಕಟ್ಟಡ,
ನಗರ ಸಭೆ ಆವರಣ, ಹುಣಸೂರು–571105
Gmail.hunsurplanning@gmail.com ದೂರವಾಣಿ:08222–295122
ಸಂ.ಹು.ಯೋ.ಪ್ರಾ/ಮೊ.ಗ್ರಾ/ಭೂ.ಉ.ಬ/66/2026–27 ದಿನಾಂಕ: 10.06.2026

ಸಾರ್ವಜನಿಕ ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರನ್ವಯ)

ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಕಸಬಾ ಹೋಬಳಿ, ಮೂಕನಹಳ್ಳಿ ಗ್ರಾಮದ ಸ.ನಂ:133/3ರಲ್ಲಿ 0ಎ–09.08ಗುಂ ವಿಸ್ತೀರ್ಣದ ಜಮೀನನ್ನು ಸರ್ಕಾರದಿಂದ ಅನುಮೋದನೆಯಾದ ಹುಣಸೂರು ವಿಸ್ತೃತ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಕೃಷಿ/ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿದ್ದು, ಸದರಿ ವಲಯದಿಂದ ವಾಣಿಜ್ಯ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಶ್ರೀ.ಜಿ.ಹಾಹರಿಸಿರಗ್ಗವರ ಬಿನ್ ಲೇ.ಆನಂದ ಸಿರಗ್ಗವರ ಇವರು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ.

ಅರ್ಜಿದಾರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿಯು ಈ ಕೆಳಕಂಡಂತಿರುತ್ತದೆ.

ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಕಸಬಾ ಹೋಬಳಿ, ಮೂಕನಹಳ್ಳಿ ಗ್ರಾಮದ ಸ.ನಂ:133/3ರಲ್ಲಿ 0ಎ–09.08ಗುಂ ವಿಸ್ತೀರ್ಣದ ಜಮೀನು ಸರ್ಕಾರದಿಂದ ಅನುಮೋದನೆಯಾಗಿರುವ ಹುಣಸೂರು ಪಟ್ಟಣದ ಸರ್ಕಾರದಿಂದ ಅನುಮೋದನೆಯಾದ ಹುಣಸೂರು ವಿಸ್ತೃತ ಸ್ಥಳೀಯ ಯೋಜನಾ ಪ್ರದೇಶದಲ್ಲಿ ವ್ಯವಸಾಯ/ಕೃಷಿ ವಲಯದಲ್ಲಿದ್ದು ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಪಡೆದು ಸದರಿ ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತನೆ ಆದ ನಂತರ ವಾಣಿಜ್ಯ ವಿನ್ಯಾಸ ನಕ್ಷೆಗೆ ಅನುಮೋದನೆ ಪಡೆದು ವಾಣಿಜ್ಯ ಬಡಾವಣೆಯನ್ನು ನಿರ್ಮಿಸಿ ಸಾರ್ವಜನಿಕರಿಗೆ ಮತ್ತು ಬಡವರಿಗೆ ಅನುಕೂಲವಾಗುವಂತೆ ಅಂಗಡಿಮುಂಗಟ್ಟುಗಳನ್ನು ನಿರ್ಮಿಸಿ ಕೆಲಸ–ಕಾರ್ಯಗಳನ್ನು ನೀಡುವ ಸಾರ್ವಜನಿಕ ಹಿತಾಸಕ್ತಿ ಅಂಶವನ್ನು ಹೊಂದಿರುತ್ತೇವೆ ಎಂದು ಅರ್ಜಿದಾರರು ತಿಳಿಸಿರುತ್ತಾರೆ.

ಆದ್ದರಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರನ್ವಯ ಪ್ರಕಾರ ವ್ಯವಸಾಯ/ಕೃಷಿ ವಲಯದಿಂದ ವಾಣಿಜ್ಯ ಉದ್ದೇಶಕ್ಕೆ ಭೂಉಪಯೋಗ ಬದಲಾವಣೆ ಮಾಡುವ ಸಂಬಂಧ ಸಾರ್ವಜನಿಕರಿಂದ ಯಾವುದೇ ಸಲಹೆ/ಆಕ್ಷೇಪಣೆಗಳಿದ್ದಲ್ಲಿ ಈ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 07 ದಿನಗಳ ಒಳಗಾಗಿ ಸದಸ್ಯ ಕಾರ್ಯದರ್ಶಿಗಳು, ಹುಣಸೂರು ಯೋಜನಾ ಪ್ರಾಧಿಕಾರ, ಹುಣಸೂರು ಇವರಿಗೆ ಲಿಖಿತವಾಗಿ/ನೋಂದಾಯಿತ ಅಂಚೆ ಮೂಲಕ ಸಲ್ಲಿಸಲು ತಿಳಿಸಲಾಗಿದೆ. ಅವಧಿ ಮುಗಿದ ನಂತರ ಬರುವ ಸಲಹೆ/ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– (ಶ್ರೀ.ಹೆಚ್.ಪಿ.ಅಮರ್‌ನಾಥ್)
ಅಧ್ಯಕ್ಷರು
ಹುಣಸೂರು ಯೋಜನಾ ಪ್ರಾಧಿಕಾರ, ಹುಣಸೂರು

ಸಹಿ/– (ಶ್ರೀಮತಿ.ಹೆಚ್.ಕೆ.ರೇಣುಕ)
ಸದಸ್ಯ ಕಾರ್ಯದರ್ಶಿಗಳು ಹಾಗೂ ಸಹಾಯಕ ನಿರ್ದೇಶಕರು
ಹುಣಸೂರು ಯೋಜನಾ ಪ್ರಾಧಿಕಾರ ಹುಣಸೂರು

DIPR/DDMYS/312/KSMCA/221/2026-27

ದಿಲ್ಲಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಉಗ್ರ ಜಾಲ

ಪಾಕಿಸ್ತಾನ ಬೆಂಬಲಿತ ಏಳು ಉಗ್ರರ ಬಂಧನ



• ಹೊಸದಿಲ್ಲಿ: ಪಾಕಿಸ್ತಾನ ಬೆಂಬಲಿತ ಉಗ್ರ-ಅಪರಾಧ ಜಾಲವನ್ನು ದಿಲ್ಲಿ ಪೊಲೀಸರು ಭೇದಿಸಿದ್ದು, ಶಸ್ತ್ರಾಸ್ತ್ರ ಹಾಗೂ ಮಾದಕ ವಸ್ತುಗಳ ಕಳ್ಳಸಾಗಣೆ, ಸಂವೇದನಾಶೀಲ ಸ್ಥಳಗಳ ಮಾಹಿತಿ ಸಂಗ್ರಹಣೆ ಸೇರಿದಂತೆ ಹಲವು ಚಟುವಟಿಕೆಗಳಲ್ಲಿ ತೊಡಗಿದ್ದ ಏಳು ಉಗ್ರರನ್ನು ಬಂಧಿಸಿದ್ದಾರೆ. ಬಂಧಿತರು ಪಾಕಿಸ್ತಾನ ಮೂಲದ ಗ್ಯಾಂಗ್‌ಸ್ಟರ್‌ನಿಂದ ಉಗ್ರನಾಗಿರುವ ಶಹಜಾದ್ ಭಟ್ಟಿ ಹಾಗೂ ಆತನ ಸಹಚರ ಅಬ್ಬಲ್ ಗುಜ್ಜರ್‌ಗಾಗಿ ಕೆಲಸ ಮಾಡುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಇವರೆಲ್ಲರೂ ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ಆಶ್ರಯದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂಬ ಶಂಕೆ ವ್ಯಕ್ತವಾಗಿದೆ. ಪೊಲೀಸರ ಮಾಹಿತಿ ಪ್ರಕಾರ, ಪಂಜಾಬ್ ಗಡಿಭಾಗದಲ್ಲಿ ಡ್ರೋನ್‌ಗಳ ಮೂಲಕ ಪಾಕಿಸ್ತಾನದಿಂದ ಶಸ್ತ್ರಾಸ್ತ್ರ ಹಾಗೂ ಮಾದಕ ವಸ್ತುಗಳನ್ನು ಕಳ್ಳಸಾಗಣೆ ಮಾಡಿ, ನಂತರ ದಿಲ್ಲಿ-ಎನ್‌ಸಿಆರ್ ಪ್ರದೇಶದಲ್ಲಿ ಅವುಗಳನ್ನು ಪೂರೈಸುವ ಕಾರ್ಯವನ್ನು ಈ ಜಾಲ ನಡೆಸುತ್ತಿತ್ತು.

ಬಂಧಿತರನ್ನು ಅನಸ್ ಅಲಿಯಾಸ್ ಅನಸ್ ತ್ಯಾಗಿ (26), ಮೋಹಿತ್ ಅಲಿಯಾಸ್ ಯೋಗಿ (26), ದೀಪಕ್ ಅಲಿಯಾಸ್ ದೀಪಕ್ ಅಗ್ರೋಲಾ (38), ಆರಿಫ್ ಅಲಿಯಾಸ್ ಪ್ರಧಾನ (30), ಕರಣವೀರ್ ಸಿಂಗ್ (26), ಜತಿನ್ (29) ಹಾಗೂ ಸಮೀರ್ (30) ಎಂದು ಗುರುತಿಸಲಾಗಿದೆ. ದಾಳಿಯ ವೇಳೆ ಐದು ಅತ್ಯಾಧುನಿಕ ಅರೆ-ಸ್ವಯಂಚಾಲಿತ ಪಿಸ್ತೂಲುಗಳು, 41 ಜೀವಂತ ಗುಂಡುಗಳು, ಉಗ್ರ ಚಟುವಟಿಕೆಗಳಿಗೆ ಸಂಬಂಧಿಸಿದ ಚಾಟ್ ಹಾಗೂ ಧ್ವನಿ ಸಂದೇಶಗಳಿರುವ ಏಳು ಮೊಬೈಲ್ ಫೋನ್‌ಗಳು ಮತ್ತು ಒಂದು ಎಸ್‌ಯುವಿ ವಾಹನವನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಜೊತೆಗೆ ಮಾದಕ ವಸ್ತು ಹಾಗೂ ಅಕ್ರಮ ಶಸ್ತ್ರಾಸ್ತ್ರ ಮಾರಾಟದಿಂದ ಬಂದ ಹಣ ವರ್ಗಾವಣೆಗಾಗಿ ಬಳಸಲಾಗಿದ್ದ ಬ್ಯಾಂಕ್ ಖಾತೆಗಳ ಮಾಹಿತಿಯೂ ಪತ್ತೆಯಾಗಿದೆ.

ಸಾಮಾಜಿಕ ಜಾಲತಾಣಗಳ ಬಳಕೆ: ಮೇ ತಿಂಗಳಲ್ಲಿ ದೊರೆತ ಗುಪ್ತಚರ ಮಾಹಿತಿಯ ಆಧಾರದಲ್ಲಿ ಪೊಲೀಸರು ತನಿಖೆ ಆರಂಭಿಸಿದ್ದರು. ಸಾಮಾಜಿಕ ಜಾಲತಾಣಗಳ ಮೂಲಕ ಯುವಕರನ್ನು ಸೆಳೆದು ದಿಲ್ಲಿ-ಎನ್‌ಸಿಆರ್‌ನಲ್ಲಿ ದಾಳಿ ನಡೆಸುವ ಸಂಚು ರೂಪಿಸಲಾಗುತ್ತಿದೆ ಎಂಬ ಮಾಹಿತಿ ಲಭ್ಯವಾಗಿತ್ತು. ಇದನ್ನಾಧರಿಸಿ ಯಮುನಾ ವಿಹಾರದ ಭಗೀರಥ್ ಜಲಶುದ್ಧೀಕರಣ ಘಟಕದ ಸಮೀಪ ಮೋಹಿತ್‌ನನ್ನು ಬಂಧಿಸಲಾಗಿತ್ತು. ಆತನಿಂದ ಅಕ್ರಮ ಪಿಸ್ತೂಲು, ನಾಲ್ಕು ಜೀವಂತ ಗುಂಡುಗಳು ಹಾಗೂ ಅಬ್ಬಲ್ ಗುಜ್ಜರ್ ಜತೆಗಿನ ಸಂಭಾಷಣೆಯಿರುವ ಮೊಬೈಲ್ ಫೋನ್ ವಶಪಡಿಸಿಕೊಳ್ಳಲಾಗಿತ್ತು.

ವಶಕ್ಕೆ ಸಿಕ್ಕ ವಸ್ತುಗಳು

- 5 ಅತ್ಯಾಧುನಿಕ ಅರೆ-ಸ್ವಯಂಚಾಲಿತ ಪಿಸ್ತೂಲುಗಳು
- 41 ಜೀವಂತ ಗುಂಡುಗಳು
- 7 ಮೊಬೈಲ್ ಫೋನ್‌ಗಳು
- ಒಂದು ಎಸ್‌ಯುವಿ ವಾಹನ
- ಬ್ಯಾಂಕ್ ಖಾತೆಗಳ ವಿವರಗಳು
- ಪಾಕ್ ಹ್ಯಾಂಡ್ಲರ್‌ಗಳೊಂದಿಗೆ ನಡೆಸಿದ ಚಾಟ್ ಮತ್ತು ಧ್ವನಿ ಸಂದೇಶಗಳು



ನಕಲಿ ಪ್ರಶ್ನೆಪತ್ರಿಕೆ ಜಾಲಕ್ಕೆ ಚೆಕ್‌ಮೇಟ್

ದೇಶದಲ್ಲಿ ನೀಟ್ (ಯುಜಿ) 2026 ಮರುಪರೀಕ್ಷೆಯ ಸಮಯದಲ್ಲಿ ನಕಲಿ ಪ್ರಶ್ನೆಪತ್ರಿಕೆ ಸೋರಿಕೆ ಮತ್ತು ಆನ್‌ಲೈನ್ ವಂಚನೆಯನ್ನು ತಡೆಗಟ್ಟುವ ಉದ್ದೇಶದಿಂದ ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಮೆಸೇಜಿಂಗ್ ಆ್ಯಪ್ ಟೆಲಿಗ್ರಾಮ್ ಮೇಲೆ ತಾತ್ಕಾಲಿಕ ನಿರ್ಬಂಧವನ್ನು ಹೇರಿದೆ. ಕೇಂದ್ರ ಸರ್ಕಾರ ತೆಗೆದುಕೊಂಡ ಕಠಿಣ ಕ್ರಮದ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಸಾಮಾನ್ಯ ಜನರಿಂದ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ಮಾಹಿತಿ ತಂತ್ರಜ್ಞಾನ ಸಚಿವಾಲಯದ ಈ ನಿರ್ಬಂಧ ಕುರಿತಾಗಿ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ತನ್ನ ಸ್ಪಷ್ಟೀಕರಣವನ್ನೂ ಮಂಗಳವಾರ ನೀಡಿದೆ. ಮರುಪರೀಕ್ಷೆಯ ಪ್ರಶ್ನೆಪತ್ರಿಕೆ ಒದಗಿಸುವುದಾಗಿ ಟೆಲಿಗ್ರಾಮ್ ಮೂಲಕ ವಂಚನೆಮಾಡುವವರಿಗೆ ಕೇಂದ್ರ ಸರ್ಕಾರ ನೀಡಿದ ಚೆಕ್‌ಮೇಟ್ ಕುರಿತಾದ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

> **ವಿದ್ಯಾರ್ಥಿಗಳನ್ನು ಗುರಿಯಾಗಿಸಿ ವಂಚಕರು ಟೆಲಿಗ್ರಾಮ್ ಪ್ಲ್ಯಾಟ್‌ಫಾರಂ ಅನ್ನು ದುರ್ಬಳಕೆ ಮಾಡುತ್ತಿರುವ ಕಾರಣದಿಂದ ಈ ಕಠಿಣ ಕ್ರಮ ತೆಗೆದುಕೊಂಡಿದ್ದೇವೆ. ವಿದ್ಯಾರ್ಥಿಗಳಲ್ಲಿರುವ ಪರೀಕ್ಷೆಯ ಆತಂಕವನ್ನೇ ದಾಳವಾಗಿ ಬಳಸಿಕೊಂಡು ವಂಚಿಸುವುದು ತಿಳಿದುಬಂದಿದೆ.**
> ■ ಅಭಿಷೇಕ್ ಸಿಂಗ್, ಎನ್‌ಟಿಎ ಪ್ರಧಾನ ನಿರ್ದೇಶಕ

ವಾಟ್ಸ್ಆ್ಯಪ್ ಮೇಲೆ ಯಾಕಿಲ್ಲ ನಿರ್ಬಂಧ?

ಇತರ ದೈತ್ಯ ಟೆಕ್ ಕಂಪನಿಗಳಂತೆ ಸರ್ಕಾರಗಳೊಂದಿಗೆ ಸಹಕರಿಸುವ ಮೆಸೇಜಿಂಗ್ ಪ್ಲ್ಯಾಟ್‌ಫಾರಂಗಳ ಪಟ್ಟಿಗೆ ಟೆಲಿಗ್ರಾಮ್ ಸೇರುವುದಿಲ್ಲ. ಇದೇ ಉದ್ದೇಶದಿಂದಲೇ ಪಾವೆಲ್ ದುರೋವ್ ಟೆಲಿಗ್ರಾಮ್ ಪ್ಲ್ಯಾಟ್‌ಫಾರಂ ಅನ್ನು ಸ್ಥಾಪಿಸಿದ್ದರು. ವಾಟ್ಸ್ಆ್ಯಪ್ ಮತ್ತು ಎಕ್ಸ್ ಭಾರತದಲ್ಲಿ ಕೇಂದ್ರ ಸರ್ಕಾರದ ನಿರ್ದೇಶನ ಅನುಸರಿಸುತ್ತವೆ. ಆದರೆ ಟೆಲಿಗ್ರಾಮ್ ಭಾರತದಲ್ಲಿ ಕಚೇರಿ ಹೊಂದಿಲ್ಲ. ಟೆಲಿಗ್ರಾಮ್ ನಿಯಂತ್ರಿಸುವುದು ಅಸಾಧ್ಯ ಕಠಿಣವಾಗಿದೆ. ಇದರಿಂದ ಸದ್ಯ ವಾಟ್ಸ್ಆ್ಯಪ್ ಮೇಲೆ ಸರ್ಕಾರ ನಿರ್ಬಂಧ ಹೇರಿಲ್ಲ. 2025ರಲ್ಲಿ ಟೆಲಿಗ್ರಾಮ್ 43.5 ದಶಲಕ್ಷ ಚಾನೆಲ್ ಮತ್ತು ಗ್ರೂಪ್‌ಗಳನ್ನು ಬ್ಲಾಕ್ ಮಾಡಿತ್ತು.

ನಿರ್ಬಂಧ ಯಾಕೆ?

ನಾಡಿದ್ದು ಜೂ.21ರಂದು ಭಾನುವಾರ ನೀಟ್ (ಯುಜಿ) ಮರುಪರೀಕ್ಷೆ ನಡೆಯುವ ಹಿನ್ನೆಲೆ ಎನ್‌ಟಿಎ ಸುರಕ್ಷತಾ ಕ್ರಮವಾಗಿ ಟೆಲಿಗ್ರಾಮ್ ಮೇಲೆ ತಾತ್ಕಾಲಿಕ ನಿರ್ಬಂಧ ಹೇರಬೇಕೆಂಬ ಶಿಫಾರಸು ಮಾಡಿದ್ದು, ಈ ಶಿಫಾರಸಿನ ಆಧಾರದಲ್ಲಿ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ನೀಟ್ ಮರುಪರೀಕ್ಷೆ ಮುಗಿಯುವ ಮುಂದಿನ ದಿನದವರೆಗೂ ಅಂದರೆ ಜೂ.22ರವರೆಗೆ ಭಾರತದಲ್ಲಿ ಟೆಲಿಗ್ರಾಮ್‌ನ ಮೇಲೆ ನಿರ್ಬಂಧ ಹೇರಿದೆ. ಅಲ್ಲದೆ, ಜೂ.23ರಿಂದ ಟೆಲಿಗ್ರಾಮ್ ಲಭ್ಯವಾದರೂ ಜೂ.30ರವರೆಗೆ ಮೆಸೇಜ್ ಎಡಿಟಿಂಗ್ ಸೇವೆಯನ್ನು ತಾತ್ಕಾಲಿಕ ನಿಷ್ಕ್ರಿಯಗೊಳಿಸಲು ಟೆಲಿಗ್ರಾಮ್ ಆ್ಯಪ್‌ಗೆ ನಿರ್ದೇಶನ ನೀಡಲಾಗಿದೆ. ನೀಟ್ ಮರುಪರೀಕ್ಷೆಯ ಸಂದರ್ಭ ಹಲವು ಟೆಲಿಗ್ರಾಮ್ ಚಾನೆಲ್‌ಗಳು, ಬಾಟ್ ಪ್ರೊಫೈಲ್‌ಗಳ ಮೂಲಕ ಜೂ.21ರಂದು ನಡೆಯಲಿರುವ ಮರುಪರೀಕ್ಷೆಯ ಪ್ರಶ್ನೆಪತ್ರಿಕೆ ನೀಡುವುದಾಗಿ ನೀಟ್ ಅಭ್ಯರ್ಥಿಗಳು, ಪೋಷಕರು ಹಾಗೂ ಕುಟುಂಬ ಸದಸ್ಯರನ್ನು ನಂಬಿಸಿ ಲಕ್ಷಾಂತರ ರೂ. ವಂಚಿಸಿರುವ ಪ್ರಕರಣಗಳು ಬೆಳಕಿಗೆ ಬಂದ ಹಿನ್ನೆಲೆಯಿಂದ ಈ ಮಹತ್ವದ ಕ್ರಮ ತೆಗೆದುಕೊಳ್ಳಲಾಗಿದೆ. ಈಗಾಗಲೇ ಸರ್ಕಾರ 200ಕ್ಕೂ ಅಧಿಕ ಚಾನೆಲ್‌ಗಳು, ಬಾಟ್‌ಗಳನ್ನು ತೆರವುಗೊಳಿಸಿದೆ.

- ಜೂ.22ರವರೆಗೆ ಭಾರತದಲ್ಲಿ ಟೆಲಿಗ್ರಾಮ್ ತಾತ್ಕಾಲಿಕ ನಿಷೇಧ
- ಜೂ.30ರವರೆಗೆ ಟೆಲಿಗ್ರಾಮ್ ಮೆಸೇಜ್ ಎಡಿಟ್ ಸೌಲಭ್ಯವಿಲ್ಲ
- 200ಕ್ಕೂ ಅಧಿಕ ಟೆಲಿಗ್ರಾಮ್ ಚಾನೆಲ್, ಬಾಟ್ ಪ್ರೊಫೈಲ್ ತೆರವು

ನಿರ್ಬಂಧ ಕುರಿತು ಎನ್‌ಟಿಎ ಹೇಳಿದ್ದೇನು?

1 ಟೆಲಿಗ್ರಾಮ್ ಪ್ಲ್ಯಾಟ್‌ಫಾರಂ ಕುರಿತಾಗಿ ನೀಡಲಾದ ನಿರ್ದೇಶನವನ್ನು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಸ್ವಾಗತಿಸುತ್ತದೆ. ಎನ್‌ಟಿಎ ಶಿಫಾರಸಿನ ಆಧಾರದಲ್ಲಿ ಈ ನಿರ್ದೇಶನ ಜಾರಿಗೊಳಿಸಲಾಗಿದೆ.
(ಎ) ಮಾಹಿತಿ ತಂತ್ರಜ್ಞಾನ ಕಾಯ್ದೆ, 2000ದ ಸೆಕ್ಷನ್ 69 ಎ ಅನ್ವಯ ಟೆಲಿಗ್ರಾಮ್ ಅನ್ನು ನೀಟ್ (ಯುಜಿ) 2026 ಮರುಪರೀಕ್ಷೆ ಮುಕ್ತಾಯದವರೆಗೆ, ಅಂದರೆ 2026ರ ಜೂ.22ರವರೆಗೆ ಸೀಮಿತ ಅವಧಿಯ ನಿರ್ಬಂಧ ಹೇರಲಾಗಿದೆ.
(ಬಿ) 2026ರ ಜೂ.30ರವರೆಗೆ ಭಾರತದಲ್ಲಿ ಟೆಲಿಗ್ರಾಮ್ ತನ್ನ ಮೆಸೇಜ್ ಎಡಿಟಿಂಗ್ ಸೇವೆಯನ್ನು ತಾತ್ಕಾಲಿಕವಾಗಿ ನಿಷ್ಕ್ರಿಯಗೊಳಿಸಬೇಕು. ಪ್ರಶ್ನೆ ಪತ್ರಿಕೆ ಸೋರಿಕೆ ಬಳಿಕ ಅದರ ಸಾಕ್ಷ್ಯಗಳನ್ನು ನಾಶಪಡಿಸಲು ಮೆಸೇಜ್ ಎಡಿಟಿಂಗ್ ಬಳಸಲಾಗಿತ್ತು. ಇದು ವಿದ್ಯಾರ್ಥಿಗಳ ಮತ್ತು ಸಾರ್ವಜನಿಕರ ಹಿತಾಸಕ್ತಿಯಿಂದ ತೆಗೆದುಕೊಂಡ ಪ್ರಮುಖ ಕ್ರಮಗಳಾಗಿವೆ. ಈ ಕ್ರಮ 2026ರ ಜೂ.21ರಂದು ಸುರಕ್ಷತೆಯಿಂದ ಪರೀಕ್ಷೆಯನ್ನು ನಡೆಸಲು ಎನ್‌ಟಿಎಗೆ ನೆರವಾಗಲಿದೆ.

2 ಕಾರ್ಯಾಚರಣೆಯಲ್ಲಿ ಕೇಂದ್ರ ಗೃಹ ಇಲಾಖೆ ಅನ್ವಯ ಭಾರತೀಯ ಸೈಬರ್ ಅಪರಾಧ ಸಹಯೋಗ ಕೇಂದ್ರ (ಐ4ಸಿ), ಬಿಹಾರ, ಗುಜರಾತ್ ಮತ್ತು ರಾಜಸ್ಥಾನ ಪೊಲೀಸರು ನೆರವಾಗಿದ್ದಾರೆ.

3 ನಿರ್ಬಂಧಗಳ ರೂಪುರೇಷೆ ಅತ್ಯಂತ ಮಿತಿಯಲ್ಲಿದೆ. ಪರೀಕ್ಷಾ ಅವಧಿವರೆಗೆ ಮಾತ್ರ ಸೀಮಿತ ಟೆಲಿಗ್ರಾಮ್ ಪ್ಲ್ಯಾಟ್‌ಫಾರಂ ಪ್ರವೇಶ ನಿರ್ಬಂಧ ಹಾಗೂ ಪರೀಕ್ಷೆಯ ನಂತರ ನಿರ್ದಿಷ್ಟ ಅವಧಿಗೆ ಅನ್ವಯಿಸುವ ನಿರ್ಬಂಧಗಳನ್ನು ಇವು ಒಳಗೊಂಡಿವೆ. ಸಾರ್ವಜನಿಕ ಸುವ್ಯವಸ್ಥೆಗೆ ಸಂಬಂಧಿಸಿದ ಆತಂಕವನ್ನು ನಿವಾರಿಸಲು ಅಗತ್ಯವಿರುವ ಕನಿಷ್ಠ ಮಟ್ಟದ ನಿರ್ಬಂಧವನ್ನೇ ವಿಧಿಸುವ ಪ್ರಯತ್ನ ಇದಾಗಿದೆ.

4 ಪೇಪರ್ ಲೀಕ್ ನೀಟ್, ರಿ-ನೀಟ್ 2026, ಪ್ರೈವೇಟ್ ಮಾಫಿಯಾ, ರಿ-ನೀಟ್ ಮಾಫಿಯಾ ಹೆಸರಿನ ಟೆಲಿಗ್ರಾಮ್ ಚಾನೆಲ್‌ಗಳು ನೀಟ್ ಅಭ್ಯರ್ಥಿಗಳ ಕುಟುಂಬ ಸದಸ್ಯರಿಂದ ಮರುಪರೀಕ್ಷೆಯ ಪ್ರಶ್ನೆ ಪತ್ರಿಕೆಯ ಬದಲಿಗೆ ಲಕ್ಷಾಂತರ ಹಣ ಬೇಡಿಕೆ ಇಟ್ಟಿದ್ದವು. ಆದರೆ ಮರುಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆ ಆಗಿಲ್ಲ, ಇದೆಲ್ಲವೂ ನೀಟ್ ವಿದ್ಯಾರ್ಥಿಗಳ ದಾರಿತಪ್ಪಿಸುವ ಮತ್ತು ವಂಚಿಸುವ ಪ್ರಯತ್ನಗಳಾಗಿವೆ.

5 ಮೆಸೇಜ್ ಎಡಿಟಿಂಗ್ ಸೇವೆ, ಪ್ರಸ್ತುತ ಚಾನೆಲ್ ನಿರ್ವಾಹಕರಿಗೆ ಪಿಡಿಎಫ್‌ನಂತಹ ಕಡತಗಳ ಎಡಿಟಿಂಗ್ ಅವಕಾಶವನ್ನು ನೀಡುತ್ತದೆ. ಆದರೆ ಮೂಲ ಸಂದೇಶ ಕಳುಹಿಸಿದ ಸಮಯ ಹಾಗೆಯೇ ಉಳಿಯುತ್ತದೆ. ಈ ಸೇವೆಯನ್ನು ದುರುಪಯೋಗಪಡಿಸಿ ನಕಲಿ ಪ್ರಶ್ನೆಪತ್ರ ಸೋರಿಕೆ ಸಾಕ್ಷ್ಯಗಳನ್ನು ಸೃಷ್ಟಿಸಲಾಗಿದೆ. ಪರೀಕ್ಷೆ ಮುಗಿದ ನಂತರ, ಚಾನೆಲ್ ನಿರ್ವಾಹಕರು ಹಳೆಯ ನಿರುಪದ್ರವ ಸಂದೇಶವನ್ನು ಎಡಿಟ್ ಮಾಡಿ ನಿಜವಾದ ಪ್ರಶ್ನೆಪತ್ರಿಕೆಯನ್ನು ಸೇರಿಸುತ್ತಾರೆ. ನಂತರ ಆ ಚಾಟ್‌ನ ಸ್ಕ್ರೀನ್‌ಶಾಟ್‌ಗಳನ್ನು ಪರೀಕ್ಷೆಗೆ ಮುಂಚೆಯೇ ಸೋರಿಕೆಯಾಗಿದೆ ಎಂಬ ಸುಳ್ಳು ಸಾಕ್ಷ್ಯ ಸೃಷ್ಟಿಸಲಾಗುತ್ತದೆ. ಇಂತಹ ಕೃತ್ಯಗಳನ್ನು ತಡೆಯುವ ಉದ್ದೇಶದಿಂದ ಈ ನಿರ್ಬಂಧ ಹೇರಲಾಗಿದೆ.

6 ಅಹಮದಾಬಾದ್ ಸೈಬರ್ ಕ್ರೈಂ ಬ್ರ್ಯಾಂಚ್ ಅಂತರ್‌ರಾಜ್ಯ ಸೈಬರ್ ವಂಚನಾ ಜಾಲದ ಸದಸ್ಯರನ್ನು ಬಂಧಿಸಿದೆ. ಈ ಜಾಲವು ಇದೇ ರೀತಿಯ ವಂಚನಾ ಚಟುವಟಿಕೆಗಳಿಗಾಗಿ ಎಂಟು ಟೆಲಿಗ್ರಾಂ ಚಾನೆಲ್‌ಗಳನ್ನು ನಡೆಸುತ್ತಿತ್ತು. 1.5 ಕೋಟಿ ರೂ. ವಂಚನೆ ಮತ್ತು ತಿಂಗಳಲ್ಲೇ ಸಾವಿರ ಮೊಬೈಲ್ ಸಂಖ್ಯೆಗಳೊಂದಿಗೆ ಸಂಪರ್ಕ ಸಾಧಿಸಿದ್ದು ತನಿಖೆಯಲ್ಲಿ ತಿಳಿದುಬಂದಿದೆ.

7 ಮಾಹಿತಿ ತಂತ್ರಜ್ಞಾನ ಸಚಿವಾಲಯ ವಿಧಿಸಿದ ನಿರ್ಬಂಧದಿಂದ ಟೆಲಿಗ್ರಾಂ ಅನ್ನು ವೈಯಕ್ತಿಕ, ಶೈಕ್ಷಣಿಕ, ವೃತ್ತಿಪರ ಮತ್ತು ಮಾಹಿತಿ ಉದ್ದೇಶಗಳಿಗೆ ಕಾನೂನುಬದ್ಧವಾಗಿ ಬಳಸುವ ಲಕ್ಷಾಂತರ ನಾಗರಿಕರಿಗೆ ತೊಂದರೆಯಾಗಿರುವುದನ್ನು ಎನ್‌ಟಿಎ ಒಪ್ಪಿಕೊಳ್ಳುತ್ತದೆ ಮತ್ತು ಅದಕ್ಕಾಗಿ ವಿಷಾದ ವ್ಯಕ್ತಪಡಿಸುತ್ತದೆ.

8 ನೀಟ್ (ಯುಜಿ) 2026 ಮರುಪರೀಕ್ಷೆಯನ್ನು 2026ರ ಜೂ.21ರಂದು ನಿಗದಿಯಂತೆ ನಡೆಸಲಾಗುತ್ತದೆ. ತೆಗೆದುಕೊಳ್ಳಲಾದ ಕ್ರಮಗಳಿಂದ ಪರೀಕ್ಷಾ ಭದ್ರತೆಗೆ ಯಾವುದೇ ಧಕ್ಕೆಯಾಗಿಲ್ಲ, ನ್ಯಾಯಸಮ್ಮತ, ಸುರಕ್ಷಿತ ಮತ್ತು ವಿಶ್ವಾಸಾರ್ಹ ಪರೀಕ್ಷೆ ನಡೆಸುವ ತನ್ನ ಬದ್ಧತೆಯನ್ನು ಎನ್‌ಟಿಎ ಪುನರುಚ್ಚರಿಸುತ್ತದೆ.

9 ಯಾವುದೇ ವಂಚನಾ ಪ್ರಯತ್ನಗಳು ಕಂಡುಬಂದರೆ ರಾಷ್ಟ್ರೀಯ ಸೈಬರ್ ಅಪರಾಧ ಸಹಾಯವಾಣಿ 1930ಕ್ಕೆ ಕರೆ ಮಾಡಿ ಅಥವಾ ರಾಷ್ಟ್ರೀಯ ಸೈಬರ್ ಅಪರಾಧ ವರದಿ ಪೋರ್ಟಲ್‌ಗೆ ಮಾಹಿತಿ ನೀಡಬೇಕು.
ಎನ್‌ಟಿಎ ಸಹಾಯವಾಣಿ: 011-40759000/011-69227700 ಮತ್ತು ಇ-ಮೇಲ್ neetug@nta.ac.in.

10 ಸಮಯೋಚಿತ ಮತ್ತು ಸಮನ್ವಯಿತ ನಿರ್ದೇಶನಗಳನ್ನು ನೀಡಿದ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯಕ್ಕೆ, ಗೃಹ ಸಚಿವಾಲಯ ಮತ್ತು ಐ4ಸಿ, ಸಿಬಿಐ ಹಾಗೂ ಬಿಹಾರ, ಗುಜರಾತ್, ರಾಜಸ್ಥಾನ ಮತ್ತು ಇತರ ರಾಜ್ಯಗಳ ಪೊಲೀಸ್ ಪಡೆಗಳಿಗೆ ಎನ್‌ಟಿಎ ತನ್ನ ಹೃತ್ಪೂರ್ವಕ ಕೃತಜ್ಞತೆಯನ್ನು ತಿಳಿಸುತ್ತದೆ.

ಎಲ್ಲಾ ಔಷಧಿಗೂ ವೈದ್ಯರ ಚೀಟಿ ಕಡ್ಡಾಯ

ಚೀಟಿ ಇಲ್ಲದೆ ಸಿಗಲ್ಲ ಸಿರಪ್

• ಹೊಸದಿಲ್ಲಿ: ದೇಶದಲ್ಲಿ ಕೆಮ್ಮಿನ ಸಿರಪ್ ಸೇರಿದಂತೆ ಎಲ್ಲ ಔಷಧೀಯ ಸಿರಪ್‌ಗಳ ಮಾರಾಟಕ್ಕೆ ಕೇಂದ್ರ ಸರ್ಕಾರ ಹೊಸ ನಿಯಮ ಜಾರಿಗೊಳಿಸಿದ್ದು, ಇನ್ನು ಮುಂದೆ ವೈದ್ಯರ ಚೀಟಿ ಇಲ್ಲದೆ ಇವುಗಳನ್ನು ಖರೀದಿಸಲು ಅವಕಾಶ ಇರುವುದಿಲ್ಲ.

ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ಔಷಧ ನಿಯಮಾವಳಿಗಳಿಗೆ ತಿದ್ದುಪಡಿ ಮಾಡಿ ಈ ಆದೇಶ ಹೊರಡಿಸಿದೆ. ಹೊಸ ನಿಯಮದ ಪ್ರಕಾರ ವೈದ್ಯರ ಸಲಹೆ ಹಾಗೂ ಲಿಖಿತ ಪ್ರಿಸ್ಕ್ರಿಪ್ಷನ್ ಆಧರಿಸಿ ಮಾತ್ರ ಔಷಧ ಮಳಿಗೆಗಳು ಸಿರಪ್ ಔಷಧಿಗಳನ್ನು ವಿತರಿಸಬೇಕು. ದೇಶದಲ್ಲಿ ಕೆಲವು ಕೆಮ್ಮಿನ ಸಿರಪ್‌ಗಳ ದುರ್ಬಳಕೆ, ಅನಗತ್ಯ ಬಳಕೆ ಮತ್ತು ಕಳಪೆ ಗುಣಮಟ್ಟದ ಔಷಧಿಗಳಿಂದ ಉಂಟಾದ ಆರೋಗ್ಯ ಸಮಸ್ಯೆಗಳ ಹಿನ್ನೆಲೆಯಲ್ಲಿ ಸರ್ಕಾರ ಈ ಕ್ರಮ ಕೈಗೊಂಡಿದೆ. ಔಷಧಿಗಳ ಸುರಕ್ಷಿತ ಬಳಕೆಯನ್ನು ಖಚಿತಪಡಿಸುವ ಜೊತೆಗೆ ಸ್ವಯಂ ಔಷಧ ಸೇವನೆಗೆ ಕಡಿವಾಣ ಹಾಕುವುದು ಇದರ ಪ್ರಮುಖ ಉದ್ದೇಶವಾಗಿದೆ. ಆರೋಗ್ಯ ತಜ್ಞರ ಪ್ರಕಾರ, ಸಿರಪ್ ರೂಪದ ಔಷಧಿಗಳನ್ನು ವೈದ್ಯರ ಸಲಹೆ ಇಲ್ಲದೆ ಸೇವಿಸುವುದರಿಂದ ಕೆಲವೊಮ್ಮೆ ಗಂಭೀರ ಅಡ್ಡಪರಿಣಾಮಗಳು ಉಂಟಾಗುವ ಸಾಧ್ಯತೆ ಇದೆ. ಹೊಸ ನಿಯಮದಿಂದ ಔಷಧಿಗಳ ಬಳಕೆ ಮೇಲೆ ಹೆಚ್ಚಿನ ನಿಯಂತ್ರಣ ಸಾಧ್ಯವಾಗಲಿದ್ದು, ರೋಗಿಗಳ ಆರೋಗ್ಯ ಸುರಕ್ಷತೆಗೆ ನೆರವಾಗಲಿದೆ.

- ಕೆಮ್ಮಿನ ಸಿರಪ್ ಸೇರಿದಂತೆ ಎಲ್ಲ ಔಷಧೀಯ ಸಿರಪ್ ಖರೀದಿಗೆ ವೈದ್ಯರ ಚೀಟಿ ಕಡ್ಡಾಯ
- ವೈದ್ಯರ ಪ್ರಿಸ್ಕ್ರಿಪ್ಷನ್ ಇಲ್ಲದೆ ಔಷಧ ಮಳಿಗೆಗಳು ಸಿರಪ್ ಮಾರಾಟ ಮಾಡುವಂತಿಲ್ಲ
- ದೇಶದಾದ್ಯಂತ ಒಂದೇ ರೀತಿಯ ನಿಯಮ ಅನ್ವಯ
- ಔಷಧ ದುರ್ಬಳಕೆ ಹಾಗೂ ಸ್ವಯಂ ಚಿಕಿತ್ಸೆಗೆ ಕಡಿವಾಣ

ಕಿರುಸುದ್ದಿ

ನೆಲಬಾಂಬ್ ಸ್ಫೋಟ: 4 ಯೋಧರಿಗೆ ಗಾಯ

• ಶ್ರೀನಗರ: ಜಮ್ಮು ಕಾಶ್ಮೀರದ ರಾಜೌರಿ ಜಿಲ್ಲೆಯಲ್ಲಿ ಗಡಿ ನಿಯಂತ್ರಣ ರೇಖೆ (ಎಲ್‌ಒಸಿ)ನಲ್ಲಿ ಸೈನಿಕರು ದೈನಂದಿನ ಗಸ್ತು ನಡೆಸುವ ವೇಳೆ ಆಕಸ್ಮಿಕವಾಗಿ ನೆಲಬಾಂಬ್ (ಗ್ರೆನೇಡ್) ಒಂದು ಸ್ಫೋಟಗೊಂಡಿದ್ದರಿಂದ ನಾಲ್ವರು ಸೈನಿಕರು ಗಾಯಗೊಂಡ ಘಟನೆ ಮಂಗಳವಾರ ನಡೆದಿದೆ. ವರದಿಗಳ ಪ್ರಕಾರ, ರಾಜೌರಿ ಜಿಲ್ಲೆಯ ನೌಶೇರಾ ಸೆಕ್ಟರ್‌ನಲ್ಲಿ ಘಟನೆ ಸಂಭವಿಸಿದೆ. ಗಾಯಗೊಂಡ ನಾಲ್ವರು ಸೈನಿಕರಲ್ಲಿ ಒಬ್ಬ ಜೂನಿಯರ್ ಕಮಿಷನ್ಡ್ ಆಫೀಸರ್ (ಜೆಸಿಒ) ಮತ್ತು ಮೂವರು ಜವಾನರಿದ್ದಾರೆ. ಸೂಕ್ಷ್ಮ ಗಡಿ ಪ್ರದೇಶದಲ್ಲಿ ಎಂದಿನಂತೆ ಗಸ್ತು ಕರ್ತವ್ಯ ನಿರ್ವಹಣೆ ಸಂದರ್ಭ ಆಕಸ್ಮಿಕವಾಗಿ ನೆಲಬಾಂಬ್ ಸ್ಫೋಟಗೊಂಡಿದೆ.

ಆಧಾರ್ ದುರುಪಯೋಗ: ಕೇಂದ್ರ, ರಾಜ್ಯಕ್ಕೆ ನೋಟಿಸ್

• ಹೊಸದಿಲ್ಲಿ: ಆಧಾರ್ ಕಾರ್ಡ್‌ಗಳನ್ನು ಪೌರತ್ವ, ವಾಸಸ್ಥಳ ಮತ್ತು ಜಾತಿ ನಿರ್ಣಯದ ಪುರಾವೆಯಾಗಿ ದುರುಪಯೋಗಪಡಿಸಿಕೊಳ್ಳಲಾಗಿದೆ. ಗುರುತಿನ ಪರಿಶೀಲನೆಗಾಗಿ ಅದರ ಬಳಕೆಯನ್ನು ಕಟ್ಟುನಿಟ್ಟಾಗಿ ನಿರ್ಬಂಧಿಸಲು ನಿರ್ದೇಶನಗಳನ್ನು ಕೋರಿ ಸಲ್ಲಿಸಿದ್ದ ಅರ್ಜಿ ಕುರಿತು ಸುಪ್ರೀಂ ಕೋರ್ಟ್, ಕೇಂದ್ರ ಮತ್ತು ರಾಜ್ಯಗಳ ಪ್ರತಿಕ್ರಿಯೆ ಕೇಳಿದೆ. ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ಪಿ.ಮೋಹನಾ ಅವರನ್ನೊಳಗೊಂಡ ಪೀಠವು ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಅವರು ಸಲ್ಲಿಸಿದ ಅರ್ಜಿಯ ಮೇರೆಗೆ ಕೇಂದ್ರ ಮತ್ತು ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ನೋಟಿಸ್ ನೀಡಿದೆ.

3 ಡ್ರಗ್ ಪೆಡ್ಲರ್‌ಗಳ 4 ಕೋಟಿ ಆಸ್ತಿ ಜಪ್ತಿ

• ಶ್ರೀನಗರ: ಜಮ್ಮು ಕಾಶ್ಮೀರದ ಪುಲ್ವಾಮ ಮತ್ತು ಶ್ರೀನಗರ ಜಿಲ್ಲೆಯಲ್ಲಿ ಮಂಗಳವಾರ ಮೂವರು ಮಾದಕವಸ್ತು ಮಾರಾಟಗಾರರಿಗೆ ಸೇರಿದ 4 ಕೋಟಿ ರೂ. ಮಾರುಕಟ್ಟೆ ಮೌಲ್ಯದ ಆಸ್ತಿಯನ್ನು ಪೊಲೀಸರು ಮುಟ್ಟುಗೋಲು ಹಾಕಿಕೊಂಡಿದ್ದಾರೆ ಎಂದು ಅಧಿಕೃತ ವಕ್ತಾರರು ತಿಳಿಸಿದ್ದಾರೆ. ಇದರಲ್ಲಿ ಕುಖ್ಯಾತ ಮಾದಕವಸ್ತು ಮಾರಾಟಗಾರ ನಿಸಾರ್ ಅಹ್ಮದ್ ವಾಂಗೆಗೆ ಸೇರಿದ 2.5 ಕೋಟಿ ರೂ. ಮೌಲ್ಯದ ಎರಡು ಅಂತಸ್ತಿನ ವಾಣಿಜ್ಯ ಮತ್ತು ಭೂಮಿಯನ್ನು ನಾರ್ಕೋಟಿಕ್ಸ್ ಡ್ರಗ್ಸ್ ಮತ್ತು ಸೈಕೋಟ್ರೋಪಿಕ್ ಸಬ್‌ಸ್ಟೆನ್ಸ್ (ಎನ್‌ಡಿಪಿಎಸ್) ಕಾಯ್ದೆಯ ಸೆಕ್ಷನ್ 68-ಎಫ್, 68-ಇ ಅನ್ವಯ ಪೊಲೀಸರು ವಶಪಡಿಸಿದ್ದಾರೆ. ಇನ್ನುಳಿದ 1.5 ಕೋಟಿ ರೂ. ಮೌಲ್ಯದ ಆಸ್ತಿ ಸಿಕಂದರ್ ಫಿರೋಜ್‌ಗೆ (80 ಲಕ್ಷ ರೂ.) ಸೇರಿದ ಶ್ರೀನಗರದ ವಾಣಿಜ್ಯ ಮತ್ತು ಫಯಾಜ್ ಹಸನ್ ಭಟ್‌ಗೆ (70 ಲಕ್ಷ ರೂ.) ಸೇರಿದ ಅನಂತನಾಗ್ ಜಿಲ್ಲೆಯ ವಾಣಿಜ್ಯವಾಗಿದೆ.

ರಾಗಾ ದೊಡ್ಡ ಜೋಕರ್ ಡಿಎಂಕೆ ತೀಕ್ಷ್ಣ ವಾಗ್ದಾಳಿ

• ಚೆನ್ನೈ: ತಮಿಳುನಾಡಿನಲ್ಲಿ ಕಾಂಗ್ರೆಸ್ ಹಾಗೂ ಡಿಎಂಕೆ ನಡುವಿನ ರಾಜಕೀಯ ಬಿಕ್ಕಟ್ಟು ಮತ್ತಷ್ಟು ತೀವ್ರಗೊಂಡಿದ್ದು, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ಡಿಎಂಕೆ ತೀಕ್ಷ್ಣ ವಾಗ್ದಾಳಿ ನಡೆಸಿದೆ. ರಾಹುಲ್ ಗಾಂಧಿ ಅವರನ್ನು 'ದೊಡ್ಡ ಜೋಕರ್' ಎಂದು ಟೀಕಿಸಿರುವ ಡಿಎಂಕೆ, 'ಇನ್ನೂ ರಾಜಕೀಯ ಪ್ರೌಢತೆ ಬೆಳೆಸಿಕೊಳ್ಳಲು ಸಾಧ್ಯವಾಗಿಲ್ಲ' ಎಂದು ಕಟುವಾಗಿ ಟೀಕಿಸಿದೆ. ಡಿಎಂಕೆಯ ಅಧಿಕೃತ ಮುಖವಾಣಿ ಮುರಸೋಲಿಯಲ್ಲಿ ಪ್ರಕಟವಾದ ಲೇಖನದಲ್ಲಿ ಕಾಂಗ್ರೆಸ್ ನಾಯಕತ್ವವನ್ನು ಗುರಿಯಾಗಿಸಿಕೊಂಡು ಟೀಕಿಸಲಾಗಿದ್ದು, ರಾಹುಲ್ ಗಾಂಧಿಯವರ ರಾಜಕೀಯ ಅಪಕ್ವತೆ ಮತ್ತು ನಿರ್ಧಾರಗಳೇ ಕಾಂಗ್ರೆಸ್‌ಗೆ ಮಿತ್ರಪಕ್ಷಗಳಿಂದ ಟೀಕೆ ಎದುರಾಗಲು ಕಾರಣವಾಗಿದೆ ಎಂದು ಆರೋಪಿಸಲಾಗಿದೆ. ಇತ್ತೀಚಿನ ತಮಿಳುನಾಡು ರಾಜಕೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಕಾಂಗ್ರೆಸ್, ಡಿಎಂಕೆ ಮೈತ್ರಿಯಿಂದ ಹೊರಬಂದು ತಮಿಳಗ ವೆಟ್ರಿ ಕಳಗಂ (ಟಿವಿಕೆ) ಸರ್ಕಾರಕ್ಕೆ ಬೆಂಬಲ ನೀಡಿದ ನಂತರ ಉಭಯ ಪಕ್ಷಗಳ ನಡುವಿನ ಸಂಬಂಧ ಹದಗೆಟ್ಟಿದೆ. ಇದೇ ಹಿನ್ನೆಲೆಯಲ್ಲಿ ಡಿಎಂಕೆ ನಿರಂತರವಾಗಿ ಕಾಂಗ್ರೆಸ್ ವಿರುದ್ಧ ಟೀಕಾ ಪ್ರಹಾರ ನಡೆಸುತ್ತಿದೆ. ಮುರಸೋಲಿ ಲೇಖನದಲ್ಲಿ ರಾಹುಲ್ ಗಾಂಧಿ ಅವರು ತಮ್ಮ ರಾಜಕೀಯ ತಪ್ಪುಗಳಿಂದಲೇ ಇಂಡಿ ಮೈತ್ರಿಕೂಟದೊಳಗೆ ಅಸಮಾಧಾನ ಉಂಟುಮಾಡಿದ್ದಾರೆ ಎಂದು ಹೇಳಲಾಗಿದೆ. ಕಾಂಗ್ರೆಸ್ ನಾಯಕತ್ವವು ಮಿತ್ರಪಕ್ಷಗಳ ಭಾವನೆಗಳಿಗೆ ಗೌರವ ನೀಡದೆ ವರ್ತಿಸುವುದರಿಂದ ಮೈತ್ರಿ ರಾಜಕಾರಣದಲ್ಲಿ ವಿಶ್ವಾಸದ ಕೊರತೆ ಉಂಟಾಗಿದೆ ಎಂದು ಡಿಎಂಕೆ ಆರೋಪಿಸಿದೆ.

ಛತ್ತೀಸ್‌ಗಢ ಶಾಲೆಗಳಲ್ಲಿ ಗಾಯತ್ರಿಮಂತ್ರ ಕಡ್ಡಾಯ

• ರಾಯ್ಪುರ: ಛತ್ತೀಸ್‌ಗಢ ಸರ್ಕಾರವು ರಾಜ್ಯದ ಎಲ್ಲಾ ಶಾಲೆಗಳಲ್ಲಿ ಇತರ ಸಾಂಪ್ರದಾಯಿಕ ಹಿಂದು ಪ್ರಾರ್ಥನೆಗಳು, ರಾಷ್ಟ್ರಗೀತೆ ಜನಗಣಮನ ಮತ್ತು ರಾಷ್ಟ್ರೀಯಗೀತೆ ವಂದೇ ಮಾತರಂ ಜತೆಗೆ ಪ್ರತಿದಿನ ಗಾಯತ್ರಿ ಮಂತ್ರವನ್ನು ಪಠಿಸುವುದನ್ನು ಕಡ್ಡಾಯಗೊಳಿಸುವ ಆದೇಶವನ್ನು ಹೊರಡಿಸಿದೆ. ಶಾಲಾ ಶಿಕ್ಷಣ ಇಲಾಖೆಯು ರಚಿಸಿದ ಮತ್ತು ಎಲ್ಲಾ ಜಿಲ್ಲಾ ಶಿಕ್ಷಣ ಅಧಿಕಾರಿಗಳಿಗೆ (ಡಿಇಒ) ಹೊರಡಿಸಿದ ಈ ನಿರ್ದೇಶನವು ಶಿಕ್ಷಣ ಸಂಸ್ಥೆಗಳ ದೈನಂದಿನ ದಿನಚರಿಯಲ್ಲಿ ಆಮೂಲಾಗ್ರ ಬದಲಾವಣೆಯನ್ನು ಸೂಚಿಸುತ್ತದೆ.

2026-27ರ ಶೈಕ್ಷಣಿಕ ಅಧಿವೇಶನದ ಆರಂಭದೊಂದಿಗೆ ಸಂಪೂರ್ಣ ಜಾರಿಗೆ ಬರುವ ಈ ಹೊಸ ನೀತಿಯು, ಶಾಲಾ ದಿನವಿಡೀ ಸಾಮೂಹಿಕ ಪಠಣ ಮತ್ತು ಗಾಯನಕ್ಕಾಗಿ ಕಟ್ಟುನಿಟ್ಟಾಗಿ ನಿಯಂತ್ರಿಸಲಾದ, ಮೂರು ಹಂತದ ವೇಳಾಪಟ್ಟಿಯನ್ನು ರೂಪಿಸಲಾಗಿದೆ. ಸರ್ಕಾರಿ ಅಧಿಕಾರಿಗಳ ಪ್ರಕಾರ, ಈ ಸಮಗ್ರ ಆದೇಶವು ಸರ್ಕಾರಿ ಮತ್ತು ಖಾಸಗಿ ಶಾಲೆಗಳಿಗೆ ಅನ್ವಯಿಸುತ್ತದೆ. ಹೊಸ ಶಿಷ್ಟಾಚಾರವು ಶಾಲಾ ದಿನವನ್ನು ಸಾಂಸ್ಕೃತಿಕ ಮತ್ತು ಮೌಲ್ಯ ಆಧಾರಿತ ಚಟುವಟಿಕೆಗಳಿಗೆ ಮೀಸಲಾಗಿರುವ ಮೂರು ನಿರ್ದಿಷ್ಟ ಸ್ಲಾಟ್‌ಗಳಾಗಿ ವಿಂಗಡಿಸುತ್ತದೆ. ಹೊಸದಾಗಿ ಜಾರಿಗೆ ತರಲಾದ ಮಾರ್ಗಸೂಚಿಗಳಲ್ಲಿ, ಬೆಳಗಿನ ಸಭೆಯು ಈಗ ರಾಷ್ಟ್ರಗೀತೆ ಮತ್ತು ರಾಷ್ಟ್ರೀಯಗೀತೆಯನ್ನು ಸಾಮೂಹಿಕವಾಗಿ ಹಾಡುವ ಮೂಲಕ ಪ್ರಾರಂಭವಾಗುತ್ತದೆ. ನಂತರ ನೇರವಾಗಿ ದೀಪ್ ಮಂತ್ರ, ಸರಸ್ವತಿ ವಂದನಾ ಮತ್ತು ಗುರು ಮಂತ್ರವನ್ನು ಪಠಿಸಲಾಗುತ್ತದೆ. ಬೆಳಗಿನ ದಿನಚರಿಯು ಗಣ್ಯ ವ್ಯಕ್ತಿಗಳ ಜೀವನಚರಿತ್ರೆಗಳನ್ನು ಕಡ್ಡಾಯವಾಗಿ ಓದುವುದರೊಂದಿಗೆ ಮುಕ್ತಾಯಗೊಳ್ಳುತ್ತದೆ.

ತ.ನಾಡಲ್ಲಿ ₹10 ಲಕ್ಷ ಕೋಟಿ ಸಾಲದ ಹೊರೆ

• ಚೆನ್ನೈ: ರಾಜ್ಯದ ಹಣಕಾಸಿನ ಸ್ಥಿತಿ ಬಗ್ಗೆ ತಮಿಳುನಾಡಿನ ಹಣಕಾಸು ಸಚಿವ ಮೇರಿ ವಿಲ್ಸನ್ ಮಂಗಳವಾರ ಶ್ವೇತಪತ್ರ ಬಿಡುಗಡೆ ಮಾಡಿದ್ದಾರೆ. ಸಚಿವಾಲಯದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ವಿಲ್ಸನ್, ತಮಿಳುನಾಡಿನಲ್ಲಿ 10 ಲಕ್ಷ ಕೋಟಿ ರೂ.ಗಳ ನೇರ ಸಾಲದ ಹೊರೆ ಮತ್ತು 78,324 ಕೋಟಿ ರೂ.ಗಳ ಆದಾಯ ಕೊರತೆ ಇದೆ. ರಾಜ್ಯದ ಸ್ವಂತ ತೆರಿಗೆ ಆದಾಯ (ಎಸ್‌ಒಟಿಆರ್) ಶೇ.5.45 ಮಾತ್ರ ಇದ್ದು, ಇದು ತುಂಬಾ ಕಡಿಮೆಯಾಗಿದೆ. ರಾಜ್ಯದ ಸಾಲ ಮತ್ತು ಜಿಎಸ್‌ಡಿಪಿ ಅನುಪಾತ ಶೇ.28.3 ರಷ್ಟಿದೆ.



ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಕೂಡಲೇ, ಟಿವಿಕೆ ಸಂಸ್ಥಾಪಕ ಸಿ. ಜೋಸೆಫ್ ವಿಜಯ್ ಅವರು ತಮ್ಮ ಸರ್ಕಾರವು ರಾಜ್ಯದ ಹಣಕಾಸು ಕುರಿತು ಶ್ವೇತಪತ್ರವನ್ನು ಬಿಡುಗಡೆ ಮಾಡುತ್ತದೆ ಎಂದು ಭರವಸೆ ನೀಡಿದ್ದರು. ಈ ಮೂಲಕ ತಮಿಳುನಾಡಿನಲ್ಲಿ ಜನಿಸಿದ ಪ್ರತಿ ಮಗುವಿನ ಮೇಲೆ ಸುಮಾರು 1 ಲಕ್ಷ ರೂ.ಗಳ ಸಾಲದ ಹೊರೆ ಇದೆ ಎಂದು ಅಂದಾಜಿಸಲಾಗಿದೆ. ಈ ದಾಖಲೆಯು ಸಾರ್ವಜನಿಕ ಹಣಕಾಸಿನ ಸುಸ್ಥಿರತೆಯ ಬಗ್ಗೆ ಹೆಚ್ಚುತ್ತಿರುವ ಕಳವಳಗಳನ್ನು ಎತ್ತಿ ತೋರಿಸುತ್ತದೆ. ವಿಶೇಷವಾಗಿ ಸಾಲದ ಸೇವೆಗಳ ವೆಚ್ಚಗಳು ಹೆಚ್ಚಾಗುತ್ತಿವೆ. ರಾಜ್ಯ ಸರ್ಕಾರವು ಗಳಿಸುವ ಪ್ರತಿ ರೂಪಾಯಿಗೆ, ಸುಮಾರು 22.8 ಪೈಸೆಗಳನ್ನು ಕೇವಲ ಬಡ್ಡಿ ಪಾವತಿಸಲಾಗುತ್ತದೆ. ಇದರಿಂದಾಗಿ ಅಭಿವೃದ್ಧಿ ವೆಚ್ಚ ಮತ್ತು ಕಲ್ಯಾಣ ಯೋಜನೆಗಳಿಗೆ ಅವಕಾಶ ಕಡಿಮೆಯಿರುತ್ತದೆ ಎಂದು ವರದಿ ಹೇಳಿದೆ.

23 ರಾಜ್ಯಗಳಲ್ಲಿ ಗಣತಿ ಪೂರ್ಣ

• ಹೊಸದಿಲ್ಲಿ: 2027ರ ಜನಗಣತಿಯ ಮೊದಲ ಹಂತದ ಮನೆ ಪಟ್ಟಿ ಮತ್ತು ಜನಗಣತಿ (ಎಚ್‌ಎಲ್‌ಒ) ಇಲ್ಲಿಯವರೆಗೆ 23 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಪೂರ್ಣಗೊಂಡಿದೆ ಎಂದು ಕೇಂದ್ರ ಸರ್ಕಾರ ಮಂಗಳವಾರ ತಿಳಿಸಿದೆ. ಕೇರಳ ಮತ್ತು ನಾಗಾಲ್ಯಾಂಡ್‌ನಲ್ಲಿ 15 ದಿನಗಳ ಸ್ವಯಂ-ಎಣಿಕೆ ಪ್ರಕ್ರಿಯೆಯು ನಡೆಯುತ್ತಿದೆ. ಕ್ಷೇತ್ರ ಕಾರ್ಯಾಚರಣೆಯು ಜು.1ರಿಂದ ಪ್ರಾರಂಭವಾಗಿ ಜು.30ರವರೆಗೆ ಮುಂದುವರಿಯುತ್ತದೆ. ಹಿಮಾಚಲ ಪ್ರದೇಶದಲ್ಲಿ ಮಂಗಳವಾರ ಆರಂಭವಾದ ಈ ಹಂತದ ಕಾರ್ಯಾಚರಣೆಗಳು ಈಗಾಗಲೇ ಗುಜರಾತ್, ಜಮ್ಮು-ಕಾಶ್ಮೀರ, ಲಡಾಖ್, ಪುದುಚೇರಿ ಮತ್ತು ಉತ್ತರ ಪ್ರದೇಶದಲ್ಲಿ ನಡೆಯುತ್ತಿವೆ. ಸ್ವಯಂ-ಗಣನೆಯನ್ನು ಪೂರ್ಣಗೊಳಿಸಿದ ನಿವಾಸಿಗಳು ತಮ್ಮ ಸ್ವಯಂ-ಗಣನೆಯ ಗುರುತಿನ ಚೀಟಿಯನ್ನು ಸಿದ್ಧವಾಗಿಟ್ಟುಕೊಳ್ಳುವಂತೆ ವಿನಂತಿಸಲಾಗಿದೆ ಮತ್ತು ಎಚ್‌ಎಲ್‌ಒ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಕ್ಷೇತ್ರ ಭೇಟಿಯ ವೇಳೆ ಅದನ್ನು ಎಣಿಕೆದಾರರೊಂದಿಗೆ ಹಂಚಿಕೊಳ್ಳಬೇಕು. ಸ್ವಯಂ ಗಣನೆಯನ್ನು ಆಯ್ಕೆ ಮಾಡದ ಕುಟುಂಬಗಳನ್ನು ಗಣಕರ ಪ್ರತ್ಯಕ್ಷ ಮನೆ-ಮನೆ ಭೇಟಿಯ ಸಮಯದಲ್ಲಿ ಒಳಗೊಳ್ಳಲಾಗುತ್ತದೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಸಿಎಜಿ ವರದಿಯಲ್ಲಿ ಬಹಿರಂಗವಾದ ರಾಜ್ಯಗಳ ಹಣಕಾಸು ಸ್ಥಿತಿ

13 ರಾಜ್ಯಗಳಿಗೆ ಹೆಚ್ಚುವರಿ ಆದಾಯ

• ಹೊಸದಿಲ್ಲಿ: 2024-25ನೇ ಹಣಕಾಸು ವರ್ಷದಲ್ಲಿ ಉತ್ತರ ಪ್ರದೇಶ, ಗುಜರಾತ್, ಜಾರ್ಖಂಡ್, ಮಣಿಪುರ ಸೇರಿದಂತೆ ಒಟ್ಟು 13 ರಾಜ್ಯಗಳು ಹೆಚ್ಚುವರಿ ಆದಾಯ ದಾಖಲಿಸಿದರೆ, ಉಳಿದ 15 ರಾಜ್ಯಗಳು ಆದಾಯ ಕೊರತೆ ಅನುಭವಿಸಿವೆ ಎಂದು ಭಾರತದ ಮಹಾಲೆಕ್ಕಪರಿಶೋಧಕ (ಸಿಎಜಿ) ಬಿಡುಗಡೆ ಮಾಡಿದ ಸ್ಟೇಟ್ ಫೈನಾನ್ಸ್ 2024-25 ವರದಿ ತಿಳಿಸಿದೆ.

ಸಿಎಜಿ ಕೆ. ಸಂಜಯ್ ಮೂರ್ತಿ ಮಂಗಳವಾರ ಬಿಡುಗಡೆ ಮಾಡಿದ ವರದಿಯ ಪ್ರಕಾರ, ಒಟ್ಟು 18 ರಾಜ್ಯಗಳು ಆದಾಯ ಹೆಚ್ಚುವರಿ ಗುರಿ ಹೊಂದಿದ್ದರೂ, ಅವುಗಳಲ್ಲಿ ಕೇವಲ 9 ರಾಜ್ಯಗಳು ಮಾತ್ರ ಗುರಿ ತಲುಪಿವೆ. ಅಸ್ಸಾಂ, ಬಿಹಾರ, ಛತ್ತೀಸ್‌ಗಢ, ಹರಿಯಾಣ, ಹಿಮಾಚಲ ಪ್ರದೇಶ, ಕರ್ನಾಟಕ, ಮಹಾರಾಷ್ಟ್ರ, ಮಿಜೋರಾಂ ಹಾಗೂ ತೆಲಂಗಾಣ ರಾಜ್ಯಗಳು ಗುರಿ ಸಾಧಿಸಲಾಗದೇ ವರ್ಷಾಂತ್ಯದಲ್ಲಿ ಆದಾಯ ಕೊರತೆಯಲ್ಲೇ ಉಳಿದಿವೆ. 15ನೇ ಹಣಕಾಸು ಆಯೋಗ ನಿಗದಿಪಡಿಸಿದ್ದ ಜಿಎಸ್‌ಡಿಪಿಯ ಶೇ.3 ಹಣಕಾಸು ಕೊರತೆ ಗುರಿಯನ್ನು 18 ರಾಜ್ಯಗಳು ಮೀರಿವೆ. 2024-25ರ ವೇಳೆಗೆ ರಾಜ್ಯಗಳ ಒಟ್ಟು ಬಾಧ್ಯತೆಗಳು 90.51 ಲಕ್ಷ ಕೋಟಿ ರೂ. ತಲುಪಿದ್ದು, ಎಲ್ಲಾ 28 ರಾಜ್ಯಗಳೂ ಹಣಕಾಸು ಕೊರತೆ ದಾಖಲಿಸಿವೆ.

> **ರಾಜ್ಯಗಳ ಆರ್ಥಿಕ ನಿರ್ವಹಣೆಯಲ್ಲಿ ಆದಾಯ ವೃದ್ಧಿ, ವೆಚ್ಚ ನಿಯಂತ್ರಣ ಮತ್ತು ಸಾಲದ ಹೊರೆ ಕಡಿತಗೊಳಿಸುವುದು ಮುಂದಿನ ವರ್ಷಗಳಲ್ಲಿ ಪ್ರಮುಖ ಸವಾಲಾಗಲಿದೆ.**
> ■ ಕೆ. ಸಂಜಯ್ ಮೂರ್ತಿ, ಸಿಎಜಿ

ಎಸ್‌ಜಿಎಸ್‌ಟಿಯೇ ಆದಾಯ ಮೂಲ

ರಾಜ್ಯಗಳ ಒಟ್ಟು ಆದಾಯ ಸ್ವೀಕೃತಿ 40.52 ಲಕ್ಷ ಕೋಟಿ ರೂ. ಆಗಿದ್ದು, ಅದರ ಶೇ.50ರಷ್ಟು ರಾಜ್ಯಗಳ ಸ್ವಂತ ತೆರಿಗೆ ಆದಾಯದಿಂದ ಬಂದಿದೆ. ರಾಜ್ಯ ಜಿಎಸ್‌ಟಿ ಮಾತ್ರವೇ ಈ ತೆರಿಗೆ ಆದಾಯದ ಶೇ.43ಕ್ಕಿಂತ ಹೆಚ್ಚು ಪಾಲು ಹೊಂದಿದೆ. ರಾಜ್ಯಗಳ ಒಟ್ಟು ವೆಚ್ಚ 51.20 ಲಕ್ಷ ಕೋಟಿ ರೂ. ತಲುಪಿದ್ದು, ವೇತನ, ಪಿಂಚಣಿ ಹಾಗೂ ಬಡ್ಡಿ ಪಾವತಿಗಳು ಇನ್ನೂ ಪ್ರಮುಖ ವೆಚ್ಚಗಳಾಗಿ ಮುಂದುವರಿದಿವೆ.

ವಿಶ್ವಸಂಸ್ಥೆ ಭದ್ರತಾ ಮಂಡಳಿಯಲ್ಲಿ ಸುಧಾರಣೆ ಅಗತ್ಯ: ಜಂಟಿ ಹೇಳಿಕೆ

ಭಾರತದ ಶಾಶ್ವತ ಸದಸ್ಯತ್ವಕ್ಕೆ ಬೆಂಬಲ

• ಬ್ರಾಟಿಸ್ಲಾವ: ವಿಶ್ವಸಂಸ್ಥೆಯ ಸುಧಾರಿತ ಭದ್ರತಾ ಮಂಡಳಿಯಲ್ಲಿ ಶಾಶ್ವತ ಸದಸ್ಯತ್ವ ನೀಡಬೇಕೆಂಬ ಭಾರತದ ಬೇಡಿಕೆಗೆ ಸ್ಲೋವಾಕಿಯಾ ಬೆಂಬಲಿಸಿದೆ. ವಿಶ್ವಸಂಸ್ಥೆ ಬಹುಪಕ್ಷೀಯ ಸಂಸ್ಥೆಯಾಗಿರಬೇಕು ಹಾಗೂ ಭದ್ರತಾ ಮಂಡಳಿಯಲ್ಲಿ ಸುಧಾರಣೆ ಅಗತ್ಯವಿದೆ ಎಂದು ಪ್ರಧಾನಿ ಮೋದಿ ಮತ್ತು ಸ್ಲೋವಾಕ್ ಪ್ರಧಾನಿ ರಾಬರ್ಟ್ ಫಿಕೊ ಸೋಮವಾರ ಜಂಟಿ ಹೇಳಿಕೆಯನ್ನು ಬಿಡುಗಡೆ ಮಾಡಿದ್ದಾರೆ.



ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಇನ್ನಷ್ಟು ಪ್ರತಿನಿಧಿತ್ವ, ಅಂತರ್ಗತ ಮತ್ತು ಸಮಕಾಲೀನ ಭೌಗೋಳಿಕ ರಾಜಕೀಯ ಸ್ವರೂಪವನ್ನು ಪ್ರತಿಬಿಂಬಿಸುವ ಅಗತ್ಯವಿದೆ. ವಿಶ್ವಸಂಸ್ಥೆ ಮತ್ತು ಅದರ ಭದ್ರತಾ ಮಂಡಳಿಯಲ್ಲಿ (ಯುಎನ್‌ಎಸ್‌ಸಿ) ಸಮಗ್ರ ಸುಧಾರಣೆಯ ಅಗತ್ಯವಿದೆ ಎಂದು ಪ್ರಧಾನಿ ಮೋದಿ ಹಾಗೂ ಸ್ಲೋವಾಕ್ ಪ್ರಧಾನಿ ರಾಬರ್ಟ್ ಫಿಕೊ ಸೋಮವಾರ ಜಂಟಿ ಹೇಳಿಕೆ ಬಿಡುಗಡೆ ಮಾಡಿದ್ದಾರೆ. ವಿಶ್ವಸಂಸ್ಥೆ ಭದ್ರತಾ ಮಂಡಳಿಯನ್ನು ಶಾಶ್ವತ ಸದಸ್ಯರು ಮತ್ತು ಅಶಾಶ್ವತ ಸದಸ್ಯರೆಂಬ ಎರಡು ವಿಭಾಗಗಳಲ್ಲಿ ಇನ್ನಷ್ಟು ವಿಸ್ತರಿಸುವುದು ತುರ್ತು ಅಗತ್ಯವಿದೆ ಎಂದು ಇಬ್ಬರೂ ನಾಯಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಮಧ್ಯ ಯುರೋಪ್ ರಾಷ್ಟ್ರ ಸ್ಲೋವಾಕಿಯಾಗೆ ನೀಡಿದ ಐತಿಹಾಸಿಕ ಭೇಟಿಯ ಸಂದರ್ಭ ಉಭಯ ರಾಷ್ಟ್ರಗಳು ಸಮಗ್ರ ಪಾಲುದಾರಿಕೆಯ ಮಟ್ಟವನ್ನು ಉನ್ನತೀಕರಿಸಿವೆ. ಇದೇ ವಿಚಾರದಲ್ಲಿ, ತನ್ನ ಶಾಶ್ವತ ಸದಸ್ಯತ್ವದ ಬೇಡಿಕೆಗೆ ಬೆಂಬಲಿಸಿದ ಸ್ಲೋವಾಕಿಯಾಗೆ ಭಾರತ ಕೃತಜ್ಞತೆಯನ್ನು ಜಂಟಿ ಹೇಳಿಕೆಯಲ್ಲೇ ಉಲ್ಲೇಖಿಸಿದೆ.

ಮೋದಿಗೆ ಸ್ಲೋವಾಕ್ ಅತ್ಯುನ್ನತ ನಾಗರಿಕ ಪ್ರಶಸ್ತಿ: ಸ್ಲೋವಾಕ್ ಅಧ್ಯಕ್ಷ ಪೀಟರ್ ಪೆಲ್ಲೆಗ್ರಿನಿ ಪ್ರಧಾನಿ ಮೋದಿಯವರಿಗೆ ಆರ್ಡರ್ ಆಫ್ ದಿ ವೈಟ್ ಡಬಲ್ ಕ್ರಾಸ್ (ಫಸ್ಟ್ ಕ್ಲಾಸ್) ಸ್ಲೋವಾಕಿಯಾ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಯನ್ನು ನೀಡಿ ಗೌರವಿಸಿದರು. ಇದು ಪ್ರಧಾನಿಗೆ ಸಿಕ್ಕ 33ನೇ ಅಂತಾರಾಷ್ಟ್ರೀಯ ಪ್ರಶಸ್ತಿಯಾಗಿದೆ.

ಸಂಪಾದಕೀಯ

ಆಹಾರ ಸುರಕ್ಷೆಗೆ ಆದ್ಯತೆಯಿರಲಿ

ತಮ್ಮ ಆಹಾರ ಉತ್ಪನ್ನಗಳ ಕುರಿತಂತೆ ಗ್ರಾಹಕರ ದಿಕ್ಕು ತಪ್ಪಿಸುತ್ತಿರುವ ಹತ್ತಕ್ಕೂ ಅಧಿಕ ಕಂಪನಿಗಳಿಗೆ 'ಭಾರತೀಯ ಆಹಾರ ಸುರಕ್ಷೆ ಮತ್ತು ಗುಣಮಟ್ಟ ಪ್ರಾಧಿಕಾರ'(ಎಫ್‌ಎಸ್‌ಎಸ್‌ಎಐ)ವು ನೋಟಿಸು ಜಾರಿ ಮಾಡಿರುವುದು ಸ್ವಾಗತಾರ್ಹ ಕ್ರಮವಾಗಿದೆ. ಹೀಗೆ ನೋಟಿಸು ಪಡೆದ ಕಂಪನಿಗಳಲ್ಲಿ ಕೆಲವು ಪ್ರಖ್ಯಾತ ಕಂಪನಿಗಳೂ ಸೇರಿವೆ. ತಮ್ಮದು ಅತ್ಯಂತ ಶುದ್ಧ ಆಹಾರ, ಆರೋಗ್ಯಪೂರ್ಣ ಆಹಾರ, ಶಕ್ತಿವರ್ಧಕ ಉತ್ಪನ್ನ ಮುಂತಾಗಿ ಈ ಕಂಪನಿಗಳು ಬಣ್ಣಿಸಿಕೊಂಡಿದ್ದರೂ ಈ ಬಣ್ಣನೆಗಳನ್ನು ಸಮರ್ಥಿಸುವಂತಹ ಪುರಾವೆಗಳು ಉತ್ಪನ್ನಗಳಲ್ಲಿ ಇಲ್ಲದ ಕಾರಣದಿಂದಾಗಿ ಕಂಪನಿಗಳಿಗೆ ನೋಟಿಸು ಜಾರಿ ಮಾಡಲಾಗಿದೆ. ಒಂದೆಡೆಯಿಂದ ಜಂಕ್ ಫುಡ್‌ಗಳು ಮತ್ತು ಕಲಬೆರಕೆ ವಸ್ತುಗಳ ದೆಸೆಯಿಂದಾಗಿ, ಜನರ ಆರೋಗ್ಯ ಕೆಡುತ್ತಿರುವುದರ ಕುರಿತಂತೆ ಆತಂಕಗಳು ಹೆಚ್ಚಿ ಜನರಲ್ಲಿ ಆರೋಗ್ಯ ಕಾಳಜಿ ಹೆಚ್ಚುತ್ತಿರುವ ಮಧ್ಯೆಯೇ, ಈ ಕಾಳಜಿಯನ್ನೇ ಲಾಭ ಮಾಡಿಕೊಳ್ಳುವ



ಹಲವಾರು ಕಂಪನಿಗಳು ತಮ್ಮದು ನೈಸರ್ಗಿಕವಾಗಿ ಪರಿಶುದ್ಧ ಉತ್ಪನ್ನ, ಸಂಪೂರ್ಣ ಸಾವಯವ ಉತ್ಪನ್ನ ಮುಂತಾಗಿ ಪ್ರಚಾರ ಮಾಡುವ ಮೂಲಕ ಗ್ರಾಹಕರನ್ನು ತಮ್ಮೆಡೆಗೆ ಸೆಳೆಯುತ್ತವೆ. ಆರೋಗ್ಯದ ಕುರಿತಂತೆ ಕಾಳಜಿ ಹೊಂದಿರುವ ಜನರು ಇಂತಹ ಉತ್ಪನ್ನಗಳನ್ನು ಖರೀದಿಸಲು ಆದ್ಯತೆ ನೀಡುವುದೂ ಸಹಜವೇ ಆಗಿದೆ. ಆದರೆ ವಾಸ್ತವದಲ್ಲಿ ಇಂತಹ ಉತ್ಪನ್ನಗಳು ತಾವು ಹೇಳಿಕೊಂಡಂತೆ ಇರುವುದಿಲ್ಲ. ರಾಸಾಯನಿಕಗಳನ್ನು ಬಳಸಿಯೇ ತಯಾರಿಸಲಾದ ವಸ್ತುಗಳನ್ನು ಸಾವಯವಗಳೆಂದು ಮಾರಾಟ ಮಾಡುವ ನಿದರ್ಶನಗಳು ಈ ಹಿಂದೆಯೂ ಕಂಡುಬಂದಿದ್ದವು. 'ಆರೋಗ್ಯಪೂರ್ಣ' ಎಂದು ಹೇಳುವ ಉತ್ಪನ್ನಗಳಲ್ಲಿ ಅನಾರೋಗ್ಯಕರ ಅಂಶಗಳು ಪತ್ತೆಯಾಗಿದ್ದವು. ಈ ಹಿನ್ನೆಲೆಯಲ್ಲಿ ಎಫ್‌ಎಸ್‌ಎಸ್‌ಎಐ ಈ ಕಂಪನಿಗಳಿಗೆ ನೋಟಿಸು ನೀಡಿರುವುದು ಹಾಗೂ ಜನರನ್ನು ತಪ್ಪು ದಾರಿಗೆಳೆಯುವ ಜಾಹೀರಾತುಗಳನ್ನು ನೀಡದಂತೆ ಎಚ್ಚರಿಸಿರುವುದು ಸಕಾಲಿಕವಾಗಿದೆ. ಇದು ಜನರಲ್ಲಿ ಕೂಡಾ ಈ ಉತ್ಪನ್ನಗಳ ಕುರಿತಂತೆ ಜಾಗೃತಿ ಮೂಡಿಸಲು ಸಹಕಾರಿಯಾಗಲಿದೆ.

ಆದರೆ ಎಲ್ಲಾ ಕಂಪನಿಗಳು ಎಫ್‌ಎಸ್‌ಎಸ್‌ಎಐ ನಿರ್ದೇಶವನ್ನು ಪಾಲಿಸುತ್ತವೆಯೆ? ಹಾಗೆ ಪಾಲಿಸದ ಕಂಪನಿಗಳ ಮೇಲೆ ಎಫ್‌ಎಸ್‌ಎಸ್‌ಎಐ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆಯೆ? ಈ ಕುರಿತಂತೆ ಮಾತ್ರ ಸೂಕ್ತ ಮಾಹಿತಿಗಳು ಲಭಿಸುವುದಿಲ್ಲ. ವರದಿಯೊಂದರ ಪ್ರಕಾರ ಎಫ್‌ಎಸ್‌ಎಸ್‌ಎಐ ನೋಟಿಸು ನೀಡಿದ ಬಳಿಕವೂ ಕೆಲವಾರು ಉತ್ಪನ್ನಗಳು ಅದೇ ಆಕ್ಷೇಪಾರ್ಹ ಬಣ್ಣನೆಯೊಂದಿಗೆ ಈಗಲೂ ಮಾರುಕಟ್ಟೆಯಲ್ಲಿ ಉಳಿದಿರುವ ನಿದರ್ಶನಗಳಿವೆ. ಎಫ್‌ಎಸ್‌ಎಸ್‌ಎಐ ಕೇವಲ ನೋಟಿಸು ನೀಡಿ ಸುದ್ದಿಯಾಗುವಷ್ಟಕ್ಕೇ ಸೀಮಿತವಾಗುವುದು ಸರಿಯಲ್ಲ. ಸೂಕ್ತ ಕ್ರಮಗಳೊಂದಿಗೂ ಜನತೆಯ ಮುಂದೆ ಬರಬೇಕು. ಆ ಮೂಲಕ ಗ್ರಾಹಕರ ಹಿತ ರಕ್ಷಿಸುವಂತಾಗಬೇಕು.

ಮರಣಕ್ಕೆ ಸಂಬಂಧಪಟ್ಟ ಇನ್ನಷ್ಟು ವಿಷಯಗಳು

ಲೋಕದಲ್ಲಿರುವಂತೆ ಮರಣವನ್ನು ಶಾಸ್ತ್ರಗಳು ಅಶುಭವೆಂದು ಭಾವಿಸುವುದಿಲ್ಲ.

ಪದಸಂಚಲನ
• ಡಾ. ವಿಶ್ವನಾಥ ಸುಂಕಸಾಳ
sunkasalvishwa@gmail.com



ಕಳೆದ ಅನೇಕ ಸಂಚಿಕೆಗಳಲ್ಲಿ ಹುಟ್ಟು ಹಾಗೂ ಮರಣ ಪ್ರಕ್ರಿಯೆಯ ಬಗ್ಗೆ ಭಾರತೀಯ ಜ್ಞಾನಪರಂಪರೆಯಲ್ಲಿ ಹೇಗೆ ತಿಳಿಸಲಾಗಿದೆ ಎಂಬುದನ್ನು ಅತ್ಯಂತ ವಿಸ್ತೃತವಾಗಿ ನೋಡಿದೆವು. ಇನ್ನು ಈ ಸರಣಿಯ ಕೊನೆಯ ಹಂತದಲ್ಲಿ ಈಗ ಮರಣ, ಅದರ ಪ್ರಕ್ರಿಯೆ ಹಾಗೂ ಮರಣದ ಅನಂತರದ ಕೆಲವು ವಿಷಯಗಳ ಬಗ್ಗೆ ಪುನರೀಕ್ಷಣೆಯನ್ನು ಮಾಡೋಣ. ಇಲ್ಲಿಯವರೆಗಿನ ಎಲ್ಲ ಲೇಖನಗಳ ಸಾರರೂಪದಲ್ಲಿ ಕೆಲವು ಅಂಶಗಳನ್ನು ಹೀಗೆ ಸಂಗ್ರಹಿಸಬಹುದು.

1. ಮರಣವು ದೇಹಕ್ಕೆ ಹೊರತೂ ಆತ್ಮಕ್ಕಲ್ಲ. ಅರ್ಥಾತ್ ಭಾರತೀಯ ಸಂಸ್ಕೃತಿಯಲ್ಲಿ ಮರಣವೆಂದರೆ ಕೊನೆಯಲ್ಲ, ಬದಲಿಗೆ ಅದೊಂದು ತುದಿ ಅಷ್ಟೇ. ಅಲ್ಲಿಂದ ಮತ್ತೆ ಮುಂದುವರಿಕೆ ಎಂಬುದು ಇದ್ದೇ ಇದೆ. ಹಾಗಾಗಿ ಮರಣಕ್ಕೆ ಒಳಗಾಗುವುದು ಪಾಂಚಭೌತಿಕ ದೇಹವೇ ಹೊರತೂ ಅದರೊಳಗಿನ ಆತ್ಮವಲ್ಲ.

2. ಮರಣವೊದಗಿದರೂ ಸೂಕ್ಷ್ಮಶರೀರ ಮತ್ತು ಕಾರಣಶರೀರಸಹಿತನಾದ ಜೀವನು ತನ್ನ ಮುಂದಿನ ಶರೀರಪ್ರಾಪ್ತಿಗಾಗಿ ಪ್ರಯಾಣವನ್ನು ಬೆಳೆಸುತ್ತಾನೆ. ಹಾಗಾಗಿ ಮರಣವು ಕೇವಲ ಸ್ಥೂಲಶರೀರಕ್ಕೆ ಮಾತ್ರ. ಈ ದೃಷ್ಟಿಯಿಂದ ಸ್ಥೂಲಶರೀರದ ಪರಿವರ್ತನೆಯೇ ಹುಟ್ಟು ಮತ್ತು ಮರಣದ ಉದ್ದೇಶ.

3. ಸ್ಥೂಲಶರೀರವು ಅವರವರ ಕರ್ಮಕ್ಕನುಗುಣವಾಗಿ ದೊರೆಯುತ್ತದೆ. ಜೊತೆಗೆ ಸ್ಥೂಲಶರೀರವಿಲ್ಲದೆಯೇ ಭೋಗವು ಉಂಟಾಗುವುದಿಲ್ಲ. ಹಾಗಿದ್ದರೆ ಈ ಕರ್ಮವು ದೇಹದಲ್ಲಿ ಎಲ್ಲಿರುತ್ತದೆ? ಎಂದರೆ, ಅದು ನಮ್ಮ ಸೂಕ್ಷ್ಮಶರೀರದಲ್ಲಿರುತ್ತದೆ. ಹಾಗಾಗಿ ಸ್ಥೂಲಶರೀರವನ್ನು ಬಿಟ್ಟು ಜೀವನು ಪ್ರಯಾಣವನ್ನು ಬೆಳೆಸಿದ ಮೇಲೂ, ತನ್ನ ಸೂಕ್ಷ್ಮಶರೀರದಲ್ಲಿ ಕರ್ಮಗಳು ಸೂಕ್ಷ್ಮವಾಗಿ ಇರುವುದರಿಂದ, ಅದನ್ನು ಹೊತ್ತೊಯ್ಯುತ್ತಾನೆ.

4. ಮರಣದ ಅನಂತರ ಮುಂದಿನ ಜನ್ಮವನ್ನು ಪಡೆಯಲು ಬಹಳ ಸಮಯ ಬೇಕಾಗುತ್ತದೆ. ಉಪನಿಷತ್ತಿನ ಪ್ರಕಾರ, ಅನೇಕ ಮಾರ್ಗವನ್ನು ಆ ಜೀವನು ಹಾದು ಬರಬೇಕಾಗುತ್ತದೆ. ಹಾಗಾಗಿ ಮರಣದ ಅನಂತರ ಕೂಡಲೇ ಆತನಿಗೆ ಮತ್ತೊಂದು ಶರೀರಪ್ರಾಪ್ತಿಯಾಗಲಾರದು.

5. ಮನುಷ್ಯನ ಕಾಲಮಾನ, ಪಿತೃ-ದೇವತೆಗಳ ಕಾಲಮಾನ ಬೇರೆ ಬೇರೆ. ಹಾಗಾಗಿ ಮನುಷ್ಯನ ಕಾಲಮಾನದಲ್ಲಿ ಒಂದು ವರ್ಷದವರೆಗೂ ಮರಣವನ್ನು ಹೊಂದಿದವನು ಒಂದೊಂದು ಸ್ಥಾನವನ್ನು ತಲುಪುತ್ತಾ ಪ್ರಯಾಣವನ್ನು ಬೆಳೆಸುತ್ತಾನೆ. ಇದಕ್ಕೆ ಸಹಕಾರಿಯಾಗಿ ಉತ್ತರಕ್ರಿಯೆ ಮತ್ತು ಶ್ರಾದ್ಧಾದಿಗಳನ್ನು ಶಾಸ್ತ್ರವು ವಿಧಿಸಿದೆ.

6. ಶ್ರಾದ್ಧ ಅಥವಾ ಪಿತೃಕಾರ್ಯವು ಕೇವಲ ಮರಣವನ್ನು ಹೊಂದಿದವನಿಗಾಗಿ ಮಾತ್ರವಲ್ಲ, ಮುಖ್ಯವಾಗಿ ಮಕ್ಕಳಿಗೆ ತಮ್ಮ ಪಿತೃಋಣವನ್ನು ಕಳೆದುಕೊಳ್ಳಲೋಸುಗ ಇರುವ ಒಂದು ಮಾರ್ಗ. ಅಷ್ಟೇ ಅಲ್ಲ, ಇದು ಅವರಿಗೆ ಒಂದು ಕರ್ತವ್ಯ ಕೂಡ. ಆಚರಿಸದಿದ್ದರೆ ಕರ್ತವ್ಯಾಚರಣೆ ಮಾಡದಿರುವುದರಿಂದ ಮಕ್ಕಳು ಶ್ರೇಯಸ್ಸಿನಿಂದ ವಂಚಿತರಾಗುತ್ತಾರೆ. ನಿತ್ಯಕರ್ಮದಂತೆಯೇ ನೈಮಿತ್ತಿಕ ಕರ್ಮಗಳೂ ಕೂಡ ತಪ್ಪದೇ ಅನುಷ್ಠೇಯವೇ ಆಗಿವೆ. ಹಾಗಾಗಿ ಮರಣಾನಂತರದ ಕರ್ಮಗಳು ಕೇವಲ ಮರಣಹೊಂದಿದವನಿಗೆ ಎಂಬ ಭಾವನೆ ಸರಿಯಲ್ಲ.

7. ಜೀವಿಗೆ ಆಯುಸ್ಸು ನಿರ್ಧಾರವಾಗುವುದು ಆತನ ಕರ್ಮದಿಂದ. ಈ ಜನ್ಮದಲ್ಲಿ ಅನುಭವಿಸಲೆಂದು ನಿರ್ದಿಷ್ಟವಾದ ಕರ್ಮಗಳ ಪ್ರಮಾಣಕ್ಕನುಗುಣವಾಗಿ ಆತ ಈ ದೇಹದಲ್ಲಿ ನೆಲೆಸುತ್ತಾನೆ. ಅದನ್ನು ಪ್ರಾರಬ್ಧಕರ್ಮ ಎನ್ನಲಾಗುತ್ತದೆ. ಪ್ರಾರಬ್ಧಕರ್ಮವನ್ನು ಅನುಭವಮಾತ್ರದಿಂದಲೇ ನಾಶಮಾಡಿಕೊಳ್ಳಬೇಕಾಗಿದೆ. ಸಂಚಿತ ಮತ್ತು ಆಗಾಮಿಕರ್ಮಗಳು ಜ್ಞಾನದಿಂದಲೂ ನಾಶವಾಗಬಲ್ಲವು. ಹಾಗಾಗಿ ಅನಂತವಾದ ಈ ಹುಟ್ಟು-ಸಾವಿನ ಚಕ್ರದಿಂದ ಪಾರಾಗಲು ಆತ್ಮಜ್ಞಾನವನ್ನು ಪಡೆಯಬೇಕೆಂದು ಶಾಸ್ತ್ರಗಳು ತಿಳಿಸುತ್ತವೆ.

8. ವೇದಾಂತದ ಪ್ರಕಾರ, ಹುಟ್ಟು-ಸಾವುಗಳು ನಿರಂತರವಾದ ಒಂದು ಪ್ರಕ್ರಿಯೆ. ಲೋಕದಲ್ಲಿರುವಂತೆ ಮರಣವನ್ನು ಶಾಸ್ತ್ರಗಳು ಅಶುಭವೆಂದು ಭಾವಿಸುವುದಿಲ್ಲ. ನಿರಂತರವಾಗಿ ಜೀವಿಸಬೇಕೆಂಬ ಜೀವಿಯ ಇಚ್ಛೆಯೇ ಮರಣವನ್ನು ಅಶುಭವೆಂದು ತಿಳಿಯಲು ಕಾರಣ. ಅಷ್ಟೇ ಅಲ್ಲ, ಮರಣಾನಂತರ ಮತ್ತೆ ಯಾವ ರೀತಿಯ ಜನ್ಮ ದೊರೆಯುವುದೆಂಬ ಊಹೆ ನಮಗಿರುವುದಿಲ್ಲವಾದ ಕಾರಣ ನಮಗಿದು ಅಶುಭವೆಂದು ಅನಿಸುತ್ತದೆ.

9. ಶಾಸ್ತ್ರಗಳಲ್ಲಿ ಮರಣ ಮತ್ತು ಅದರ ಅನಂತರದ ಪ್ರಕ್ರಿಯೆಯನ್ನು ಮನುಷ್ಯನಿಗೆ ಈ ಹುಟ್ಟು-ಸಾವಿನ ಚಕ್ರದಿಂದ ತಪ್ಪಿಸಿಕೊಳ್ಳಲು ದೃಢವಾದ ವೈರಾಗ್ಯ ಉಂಟಾಗಲಿ ಎಂಬ ಉದ್ದೇಶದಿಂದ ವಿವರಿಸುತ್ತದೆ. ಎಲ್ಲಿಯವರೆಗೆ ಈ ಸಂಸಾರದ ಅನಿತ್ಯತ್ವವನ್ನು ಮತ್ತು ಇಲ್ಲಿನ ಅನರ್ಥವನ್ನು ಅರ್ಥಮಾಡಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಮನುಷ್ಯನು ಈ ಸಂಸಾರದ ಮೇಲೆ ತೀವ್ರವಾದ ಮೋಹವನ್ನು ಬೆಳೆಸಿಕೊಂಡು, ದುಃಖದಲ್ಲಿ ಬೀಳುತ್ತಾನೆ. ಎಷ್ಟುಷ್ಟು ಅನಿತ್ಯತ್ವಬುದ್ಧಿ ಬೆಳೆಯುವುದೋ ಅಷ್ಟಷ್ಟು ನಿರ್ಲಿಪ್ತವಾಗಿ ಹಾಗೂ ಅರ್ಥಪೂರ್ಣವಾಗಿ ಜೀವನವನ್ನು ಮನುಷ್ಯನು ಕಳೆಯಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಉಪನಿಷತ್ತು, ಪುರಾಣಗಳಲ್ಲಿ ವಿಸ್ತೃತವಾಗಿ ಮರಣದ ಪ್ರಕ್ರಿಯೆಯನ್ನು ವಿವರಿಸುತ್ತವೆ. ಹಾಗಂತ ಶಾಸ್ತ್ರಗಳು ಇಹ ಜೀವನವನ್ನು ಉಪೇಕ್ಷಿಸುವುದಿಲ್ಲ, ಆದರೆ ಇದೇ ಪಾರಮಾರ್ಥಿಕವಲ್ಲ ಎಂಬುದು ಅವುಗಳ ದೃಷ್ಟಿ.

10. ಜೀವನಿಗೆ ಗರ್ಭವಾಸ ಇದೇ ಮೊದಲಲ್ಲ, ಹಾಗೆಯೇ ಮರಣವೂ ಕೂಡ. ಹಾಗಾಗಿ ಮರಣದ ಭಯ ಎಲ್ಲರಿಗೂ ಇರುತ್ತದೆ. ಈ ಹಿಂದೆ ಮರಣವನ್ನು ಹೊಂದಿದಾಗ ಅನುಭವಿಸಿದ ನೋವಿನ ಸಂಸ್ಕಾರವು ನಮ್ಮೆಲ್ಲರ ಮನಸ್ಸಿನಲ್ಲಿ ಇರುವುದರಿಂದ ಸಹಜವಾಗಿ ನಮಗೆಲ್ಲ ಮರಣದ ಭಯವಿರುತ್ತದೆ. ಇಂಥ ಮರಣದಿಂದ ತಪ್ಪಿಸಿಕೊಳ್ಳಬೇಕು ಮತ್ತು ಜೀವಂತವಾಗಿರಬೇಕೆಂಬ ಆಗ್ರಹವನ್ನೇ ಅಭಿನಿವೇಶವೆಂಬುದಾಗಿ ಯೋಗಶಾಸ್ತ್ರವು ತಿಳಿಸುತ್ತದೆ. ಆದರೆ ಶರೀರದಲ್ಲಿ ನಿತ್ಯವಾಗಿ ಇರಲು ಸಾಧ್ಯವಿಲ್ಲ, ಯಾಕೆಂದರೆ ಅದಕ್ಕೆ ಹುಟ್ಟು ಇದೆ. ಯಾವುದಕ್ಕೆ ಹುಟ್ಟಿದೆಯೋ ಅದೆಲ್ಲಕ್ಕೆ ಸಾವು ಕೂಡ ಅನಿವಾರ್ಯ. ಹಾಗಾಗಿ ಈ ಶರೀರಧಾರಣೆಯೇ ಮತ್ತೊಮ್ಮೆ ಘಟಿಸದಂತೆ ಮಾಡಿಕೊಳ್ಳಬೇಕು ಎಂಬುದಾಗಿ ಶಾಸ್ತ್ರಗಳು ಉಪದೇಶಿಸುತ್ತವೆ. ಅದನ್ನು ಮೋಕ್ಷವೆನ್ನಲಾಗುತ್ತದೆ.

11. ಮೋಕ್ಷವೇ ಪರಮಪುರುಷಾರ್ಥವಾಗಿದೆ. ಮೋಕ್ಷವನ್ನು ಹೊಂದಿದ ಮೇಲೆ ಸಂಸಾರಕ್ಕೆ ಮತ್ತೆ ಜೀವನು ಬೀಳಲಾರ. ಯಾಕೆಂದರೆ ಜ್ಞಾನದಿಂದ ಆತನ ಕರ್ಮವು ನಾಶವಾಗಿರುತ್ತದೆ. ಕರ್ಮಕ್ಕೆ ಕಾರಣವಾದ ಅಜ್ಞಾನವೂ ನಾಶವಾಗಿರುತ್ತದೆ. ಹೀಗೆ ಮುಕ್ತಿಯ ಸಂದರ್ಭದಲ್ಲಿ ಆ ಜ್ಞಾನಿಯ ಸೂಕ್ಷ್ಮಶರೀರಾದಿಯಾಗಿ ಎಲ್ಲವೂ ಇಲ್ಲೇ ವಿಲಯವನ್ನು ಹೊಂದುತ್ತವೆ.

12. ಇದಕ್ಕೆ ವ್ಯತಿರಿಕ್ತವಾಗಿ ಅಜ್ಞಾನಿಯ ಪ್ರಾಣ, ಇಂದ್ರಿಯ, ಮನಸ್ಸು, ಬುದ್ಧಿ ಹಾಗೂ ಅಜ್ಞಾನಗಳೆಲ್ಲ ಮರಣದ ಸಂದರ್ಭದಲ್ಲಿ ಈ ಶರೀರವನ್ನು ಬಿಟ್ಟು ಮುಂದಿನ ಶರೀರವನ್ನು ಪಡೆಯಲೋಸುಗ ಜೀವನ ಜೊತೆ ಹೊರಡುತ್ತವೆ. ಎಲ್ಲಿಯವರೆಗೆ ಆತ್ಮಕ್ಕೆ ಇಂಥ ಅಜ್ಞಾನದ ಸಂಸ್ಪರ್ಶವಿರುವುದೋ ಅಲ್ಲಿಯವರೆಗೆ ಹುಟ್ಟು-ಸಾವುಗಳು ತಪ್ಪಿದ್ದಲ್ಲ.

13. ಶಾಸ್ತ್ರಗಳು ಆತ್ಮನನ್ನು ಅಮೃತನೆಂದು ಕರೆಯುತ್ತವೆ. ಒಟ್ಟಾರೆ ಭಾರತೀಯ ಸಂಸ್ಕೃತಿಯೊಂದನ್ನು ಬಿಟ್ಟು ಮತ್ತೆ ಬೇರಾವ ಮತಗಳಲ್ಲೂ ಆತ್ಮನನ್ನು ನಿತ್ಯವೆಂದು ನೋಡುವುದಿಲ್ಲ. ಆತ್ಮನನ್ನು ಆನಂದರೂಪಿಯೆಂದು ಉಪನಿಷತ್ತುಗಳು ತಿಳಿಸುತ್ತವೆ. ಹಾಗಾಗಿ ನಾವೆಲ್ಲ ಅಮೃತಸ್ವರೂಪಿಗಳು ಅಷ್ಟೇ ಅಲ್ಲ, ನಿತ್ಯಮುಕ್ತರು. ಇಂಥ ಭಾವನೆ ದೃಢವಾದಾಗ ಈ ಶರೀರದ ತ್ಯಾಗದ ಬಗೆಗಿನ ಭಯ ಸ್ವಲ್ಪ ಕಡಿಮೆಯಾಗುವುದರ ಜೊತೆಗೆ, ಈ ಜನ್ಮವನ್ನು ಕೇವಲ ಭೋಗಸಾಧನೆಯ ಬದಲು ಆಧ್ಯಾತ್ಮಸಾಧನೆಯ ಹಾದಿಗೆ ತಿರುಗಿಸಿಕೊಳ್ಳಬೇಕೆಂಬ ಪ್ರಜ್ಞೆ ಉದಯಿಸುತ್ತದೆ.

14. ಮರಣದ ಕ್ಷಣದಲ್ಲಿ ಜೀವನಿಗೆ ಯಾವ ರೀತಿಯ ಮನೋವೃತ್ತಿಗಳು ಹುಟ್ಟುತ್ತವೋ ಅಂಥ ಜನ್ಮವನ್ನೇ ಆತ ಮುಂದೆ ಪಡೆಯುತ್ತಾನೆ. ಹಾಗಾಗಿ ಮರಣದ ಸಮಯದಲ್ಲಿ ಶುಭವೃತ್ತಿಗಳು ಹುಟ್ಟುವಂತೆ ಇಡೀ ಜೀವನವನ್ನು ಆತ ಕಳೆಯಬೇಕು. ಸಾವಿನ ಸಮಯದಲ್ಲಿ ಮರ್ಮಚ್ಛೇದವಾಗುವ ಹಂತದಲ್ಲಿಯೂ ಭಗವಂತನ ಸ್ಮರಣೆ ಬರಬೇಕೆಂದರೆ ಜೀವನವಿಡೀ ಅನನ್ಯಭಕ್ತಿಯಿಂದ ಆತನನ್ನು ಭಜಿಸಬೇಕೆಂದರ್ಥ. ಒಟ್ಟಿನಲ್ಲಿ ಧರ್ಮಮಾರ್ಗದಲ್ಲಿ ಜೀವನವನ್ನು ಜೀವಿಸುತ್ತಾ, ಸತ್ಪ್ರವೃತ್ತಿಯಲ್ಲೇ ಜೀವನವಿಡೀ ನಡೆಸಿಕೊಂಡು ಹೋಗಬೇಕೆಂಬುದು ತಾತ್ಪರ್ಯ. ಅನ್ಯಥಾ ಯಾವುದೋ ಹೀನಯೋನಿಯಲ್ಲಿ ಜನ್ಮವನ್ನು ಪಡೆದುಕೊಳ್ಳಬೇಕಾಗುತ್ತದೆ.

15. ನಮ್ಮ ಇವತ್ತಿನ ಸ್ಥಿತಿಗೆ ನಮ್ಮ ಕರ್ಮಗಳೇ ಕಾರಣ. ಹಾಗೆಂದಮಾತ್ರಕ್ಕೆ ಎಲ್ಲವೂ ಹಣೆಬರಹ ಎಂದರ್ಥವಲ್ಲ, ಈಗ ನಾವು ಅನುಭವಿಸುತ್ತಿರುವ ಸುಖ-ದುಃಖಗಳಿಗೆ ಕರ್ಮ ಕಾರಣ ಎಂಬುದರಲ್ಲಿ ಸಂಶಯವಿಲ್ಲ, ಆದರೆ ಹೊಸದಾದ ಕರ್ಮವನ್ನು ಕೂಡ ಮಾಡುತ್ತಿರುತ್ತೇವೆ. ಅದು ನಮ್ಮ ಕೈಯಲ್ಲೇ ಇದೆ. ಪ್ರಯತ್ನಪೂರ್ವಕವಾಗಿ ನಾವು ಒಳ್ಳೆಯ ಕರ್ಮವನ್ನು ಆಚರಿಸುವ ಮೂಲಕ ನಮ್ಮ ಅಂತಃಕರಣದಲ್ಲಿರುವ ವಾಸನೆಗಳನ್ನು ಹಾಗೂ ನಮ್ಮ ಸಂಚಿತಕರ್ಮಗಳನ್ನು ಬದಲಾಯಿಸಿಕೊಳ್ಳಲು ಸಾಧ್ಯವಿದೆ. ಅದನ್ನು ಪುರುಷಪ್ರಯತ್ನ ಎನ್ನಲಾಗುತ್ತದೆ. ನಮ್ಮಲ್ಲಿ ಪುರುಷಪ್ರಯತ್ನಕ್ಕೆ ಹೆಚ್ಚಿನ ಮಹತ್ವವನ್ನು ಕೊಡಲಾಗಿದೆ. ಆದರೆ ಅದು ದೀರ್ಘವಾದ ಹಾಗೂ ನಿರಂತರವಾದ ಅಭ್ಯಾಸಮಾತ್ರದಿಂದಲೇ ಸಾಧ್ಯ.

ಹೀಗೆನಲವತ್ತಕ್ಕೂ ಹೆಚ್ಚು ಅಂಕಣಗಳಲ್ಲಿ ಪ್ರಸಾರವಾದ ಈ ಹುಟ್ಟು-ಸಾವಿನ ಪ್ರಕ್ರಿಯೆಗೆ ಸಂಬಂಧಿಸಿದ ಸರಣಿಯು ಇಲ್ಲಿಗೆ ಪೂರ್ಣಗೊಳ್ಳುತ್ತದೆ.

ಎಂದೆಂದಿಗೂ ಸುಖವೆಂಬುದು ಮರೀಚಿಕೆ

ಅಜ್ಞಾನವಲಿತೋ ಬಾಲ್ಯೇ ಮದಮೂಢಶ್ಚ ಯೌವನೇ।
ವಾರ್ಧಕೇ ವಿಕ್ಲವಾಂಗಶ್ಚ ಕದಾ ಸುಖಭಾಕ್ ಜನಃ ॥ - ಮಹಾಸುಭಾಷಿತ ಸಂಗ್ರಹ

ಬಾಲ್ಯದಲ್ಲಿ ಅಜ್ಞಾನ ತುಂಬಿರುತ್ತದೆ. ಯೌವನ ಅಹಂಕಾರ ಮೌಢ್ಯಗಳಿಂದ ಕೂಡಿರುತ್ತದೆ. ಮುದಿತನದಲ್ಲಿ ನಿಶ್ಶಕ್ತವಾದ ಶರೀರವುಳ್ಳವನು ಆಗಿರುತ್ತಾನೆ. ಮನುಷ್ಯನು ತನ್ನ ಜೀವಮಾನದಲ್ಲಿ ಎಂದೆಂದೂ ಸುಖಿಯಾಗಿ ಇರುತ್ತಾನೆಂದು ಹೇಳಲಾಗುವುದಿಲ್ಲ - ಎಂಬುದು ಶ್ಲೋಕಾರ್ಥ.

ಯಾರೂ ಪೂರ್ಣ ಸುಖಿಗಳು ಎನ್ನುವಂತಿಲ್ಲ, ಸುಖದುಃಖಗಳು ಯಾರನ್ನೂ ಬಿಟ್ಟಿಲ್ಲ, ಬಿಡುವುದೂ ಇಲ್ಲ. ಏಕೆಂದರೆ 'ಸುಖಮಧ್ಯೇ ಸ್ಥಿತಂ ದುಃಖಂ, ದುಃಖಮಧ್ಯೇ ಸ್ಥಿತಂ ಸುಖಮ್' ಸುಖದ ಮಧ್ಯದಲ್ಲಿ ದುಃಖವಿದೆ ದುಃಖದ ಮಧ್ಯೆ ಸುಖವಿದೆ ಎಂಬುದು ಇದರ ಅರ್ಥ. ಸುಖವನ್ನು ಕಳೆದುಕೊಂಡರೆ ದುಃಖ ಬರುತ್ತದೆ. ದುಃಖವನ್ನು ಕೊಡೆದು ಹಾಕಿದರೆ ಸುಖ ಸಿಗುತ್ತದೆ. ಒಟ್ಟಿನಲ್ಲಿ ಜೀವಮಾನದಲ್ಲಿ ಎಂದೆಂದಿಗೂ ಸುಖವಿರುತ್ತದೆ ಎನ್ನುವಂತಿಲ್ಲ. ಒಟ್ಟಿನಲ್ಲಿ ಸುಖ

ಶ್ಲೋಕ ಸಾಗರ
ಡಾ. ಗೋವಿಂದಾ ಭಾಸ್ಕರ ಭಟ್



ದುಃಖಗಳ ವಿಶೇಷತೆಯೇ ಇದು 'ಸುಖಸ್ಯ ದುಃಖಸ್ಯ ನ ಕೋಽಪಿ ದಾತಾ' ಸುಖ-ದುಃಖಗಳನ್ನು ಕೊಡುವವರು ಯಾರೂ ಇಲ್ಲ. ಇನ್ನೊಬ್ಬರಿಂದ ಸುಖ-ದುಃಖ ಉಂಟಾಗಿದೆ ಎಂಬುದು ಅವಿವೇಕದ ಮಾತು. ನಾವು ಮಾಡಿದ ಪುಣ್ಯ ಪಾಪಕರ್ಮಗಳ ಪರಿಣಾಮರೂಪವಾಗಿ ಅನುಭವಿಸಲೇಬೇಕು. ನಿರಂತರ ಸುಖ ಬೇಕೆಂದು ಬಯಸುವುದಾದರೆ ಮಾನಸಿಕವಾಗಿ ಪೂರಕವಾಗಿ ನಡೆದುಕೊಳ್ಳಬೇಕು. ಸುಖದ ಮೂಲವೇ ಧರ್ಮವಾದುದರಿಂದ ಧರ್ಮಮಾರ್ಗವನ್ನು ಅನುಸರಿಸಬೇಕು. ಇದನ್ನೇ 'ಸುಖಸ್ಯ ಮೂಲಂ ಧರ್ಮಃ' ಎಂಬ ಸೂಕ್ತಿ ತಿಳಿಸಿದೆ.

ಪ್ರಸ್ತುತ ಶ್ಲೋಕದಲ್ಲಿ ಕವಿಯು ಮನುಷ್ಯನು ಎಂದೆಂದೂ ಸುಖವಾಗಿರುತ್ತಾನೆ ಎನ್ನುವಂತಿಲ್ಲ ಎಂಬ ಹೇಳಿಕೆಯನ್ನು ನೀಡಿ ಪೂರಕ ಸನ್ನಿವೇಶದೊಂದಿಗೆ ಸಮರ್ಥಿಸುತ್ತಾನೆ. ಬಾಲ್ಯದಲ್ಲಿ ಸುಖ-ದುಃಖಗಳ ಕಲ್ಪನೆಯೇ ಇರುವುದಿಲ್ಲ. ಬಾಲ್ಯದಲ್ಲಿ ಅಜ್ಞಾನವೇ ತುಂಬಿರುವುದರಿಂದ ಇದು ಸಹಜ. ಒಂದು ದೃಷ್ಟಿಯಲ್ಲಿ ನೋಡಿದರೆ ಬಾಲ್ಯವೇ ಸುಖವೆನ್ನಬಹುದು. ಯಾವ ಅರಿವೂ ಇಲ್ಲದಿರುವುದರಿಂದ, ಮುಗ್ಧ ಸ್ವಭಾವ ಅವರದಾದುದರಿಂದ ದುಃಖದ ಕಲ್ಪನೆಯೇ ಬರದು. ಬಾಲಭಾವ ಅವರದ್ದಾದುದರಿಂದ ಸುಖ ದುಃಖಗಳ ಕಲ್ಪನೆ ಇರುವುದಿಲ್ಲ, ಮತ್ತು ಅವು ಅವರನ್ನು ಬಾಧಿಸುವುದಿಲ್ಲ.

ಯೌವನಾವಸ್ಥೆಯಲ್ಲೂ ಸುಖವಿಲ್ಲ. ಸುಖಮಯ ಜೀವನದ ಕಲ್ಪನೆಯನ್ನು ಕಟ್ಟಿಕೊಳ್ಳಬೇಕಾದ ಕಾಲಘಟ್ಟದಲ್ಲಿ ಮೌಢ್ಯವೇ ತುಂಬಿರುತ್ತದೆ. ಹುಚ್ಚು ಕಲ್ಪನೆಯಲ್ಲಿ, ಐಹಿಕ ವಿಷಯದಲ್ಲಿ ಮನಸ್ಸು ಸಾಗುವುದರಿಂದ ಸುಖದ ಕಾಲವೇ ಕಳೆದುಹೋಗುತ್ತದೆ. ಜೀವನಪೂರ್ತಿ ಒದ್ದಾಡಿ ಬದುಕುವ ಸ್ಥಿತಿ ಎದುರಾದರೆ ಸುಖ ಎಲ್ಲಿಂದ ಸಿಗುತ್ತದೆ?

ಇನ್ನು ವಯಸ್ಸಾದ ಮೇಲೆ ಸುಖವೆಂಬುದು ಮರೀಚಿಕೆ. ಆಹಾರ ಅನುಭವವಿರಬಹುದು, ಗಳಿಕೆಯೂ ಸಾಕಷ್ಟಿರಬಹುದು. ಬಯಸಿದ್ದನ್ನು ತಿನ್ನುವ, ಎಣಿಸಿದ್ದನ್ನು ಮಾಡುವ ಶಕ್ತಿಯೇ ಉಡುಗಿ ಹೋಗುತ್ತದೆ. 'ಹಲ್ಲಿರುವಾಗ ಕಡ್ಲೆಯಿಲ್ಲ, ಕಡ್ಲೆಯಿರುವಾಗ ಹಲ್ಲಿಲ್ಲ' ಎನ್ನುವ ಸ್ಥಿತಿ. ಜರ್ಜರಿತವಾದ ದೇಹ, ಆವರಿಸಿದ ರೋಗ, ಜೀರ್ಣಶಕ್ತಿಯ ಅಭಾವ ಸುಖದಿಂದ ವಂಚಿತರನ್ನಾಗಿ ಮಾಡುತ್ತದೆ.

ಒಟ್ಟಿನಲ್ಲಿ ಜೀವನಪೂರ್ತಿ ಸುಖಿಯಾಗಿರುವ ಭರವಸೆಯಿಲ್ಲ, ಸುಖ ನಮ್ಮಲ್ಲೇ ಇದೆ. ಅದನ್ನು ಕಂಡುಕೊಳ್ಳುವ ಪ್ರಯತ್ನ ಮಾಡಬೇಕು. ಇದನ್ನು ಸಾಧಿಸಿದರೆ ಮಾತ್ರ ಮಾನವ ಸುಖಿಯಾಗಿರುತ್ತಾನೆ.

ಸುದೀರ್ಘಾವಧಿಯ ಪ್ರಧಾನಿಗೆ ಸೈನಿಕನೊಬ್ಬನ ಸೆಲ್ಯೂಟ್!

• ಕ್ಯಾಪ್ಟನ್ ಬ್ರಿಜೇಶ್ ಚೌಟ

ಅದು 2013. ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿದ ನಂತರ ನಾನು ಊರಿಗೆ ಮರಳಿದ್ದೆ. ನನ್ನ ಪೀಳಿಗೆಯ ಅನೇಕ ಯುವಕರಂತೆ, ನಾನೂ ಜೀವನದ ಮಹತ್ವದ ತಿರುವಿನಲ್ಲಿದ್ದೆ. ರಾಷ್ಟ್ರ ಸೇವೆ ಮುಂದುವರಿಸಬೇಕೆಂಬ ದೃಢ ಸಂಕಲ್ಪ ನನ್ನಲ್ಲಿದ್ದರೂ, ಕಂಡುಕೊಳ್ಳಬೇಕಾದ ಹಾದಿಯ ಶೋಧನೆಯಲ್ಲಿದ್ದೆ. ಆಗ ದೇಶವೂ ಒಂದು ಮಹತ್ವದ ತಿರುವಿನಲ್ಲಿತ್ತು.

ಭಾರತಕ್ಕೆ ಇನ್ನೂ ಹೆಚ್ಚಿನ ಸಾಧನೆ ಮಾಡುವ ಸಾಮರ್ಥ್ಯವಿದೆ ಎಂಬ ಭಾವನೆ ಜನರಲ್ಲಿ ಗಟ್ಟಿಯಾಗುತ್ತಿತ್ತು ಮತ್ತು ಹಳ್ಳಿ, ಪಟ್ಟಣ, ನಗರಗಳ ಜನರಲ್ಲಿ ಹೊಸ ಚೈತನ್ಯ ರೂಪುಗೊಳ್ಳತೊಡಗಿತ್ತು. ಜನ ತಮ್ಮ ಆಶಯ, ಆತ್ಮವಿಶ್ವಾಸ ಮತ್ತು ಭವಿಷ್ಯದ ನಾಯಕತ್ವದ ಬಗ್ಗೆ ಚರ್ಚಿಸುತ್ತಿದ್ದರು. ಆಗ ಜನ-ಸಂವಾದದ ಕೇಂದ್ರಬಿಂದುವಾಗಿದ್ದವರು ಗುಜರಾತಿನ ಆಗಿನ ಮುಖ್ಯಮಂತ್ರಿ ನರೇಂದ್ರ ಮೋದಿ ಅವರು. ಬಲಿಷ್ಠ ಭಾರತವನ್ನು ಕಾಣಲು ಬಯಸಿದ್ದ ಕೋಟ್ಯಂತರ ಭಾರತೀಯರ ಮನಸ್ಸನ್ನು ಅವರು ಆದಾಗಲೇ ತಲುಪಿದ್ದರು.



2013ರ ಜೂನ್ ತಿಂಗಳಲ್ಲಿ, ದಕ್ಷಿಣ ಕನ್ನಡ ಜಿಲ್ಲಾ ಬಿಜೆಪಿಯ ವರ್ಚುವಲ್ ಮೋರ್ಚಾದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜವಾಬ್ದಾರಿ ನನ್ನ ಹೆಗಲೇರಿತು. ನಾನು ಧರಿಸುವ ಸಮವಸ್ತ್ರ ಬದಲಾಗಿದ್ದರೂ, ರಾಷ್ಟ್ರ ಮೊದಲು ಎಂಬ ಧ್ಯೇಯ ಮಾತ್ರ ಬದಲಾಗಿರಲಿಲ್ಲ. ನಾವೆಂದು ಕೇವಲ ರಾಜಕೀಯ ಪಕ್ಷದ ಪ್ರಚಾರ ಮಾಡಿರಲಿಲ್ಲ; ಮಹಾನ್ ಕಲ್ಪನೆಯ ಪರ ಪ್ರಚಾರ ಮಾಡಿದ್ದೆವು. ಭಾರತ ಇನ್ನಷ್ಟು ಬಲಿಷ್ಠವಾಗಬಹುದು, ಆತ್ಮವಿಶ್ವಾಸದಿಂದ ಕೂಡಿರಬಹುದು, ಮತ್ತಷ್ಟು ಸ್ವಾವಲಂಬಿಯಾಗಬಹುದು ಮತ್ತು ಜಾಗತಿಕ ಮಟ್ಟದಲ್ಲಿ ತನ್ನ ಗೌರವ-ಘನತೆ ಹೆಚ್ಚಿಸಿಕೊಳ್ಳಬಹುದು ಎಂಬ ಕಲ್ಪನೆಯ ಸಾಕಾರಕ್ಕಾಗಿ ಧ್ವನಿ ಎತ್ತಿದ್ದೆವು.

ಅದಾಗಿ ದಶಕದ ಬಳಿಕ (2024) ಲಕ್ಷಾಂತರ ಯುವ ಭಾರತೀಯರಲ್ಲಿ ದೊಡ್ಡ ಕನಸು ಕಾಣುವಂತೆ ಪ್ರೇರೇಪಿಸಿದ ಅದೇ ನಾಯಕನ ನೇತೃತ್ವದ ತಂಡದಲ್ಲಿ ಸಂಸತ್ ಸದಸ್ಯನಾಗಿ ಪ್ರಮಾಣವಚನ ಸ್ವೀಕರಿಸುವ ಸೌಭಾಗ್ಯ ನನಗೆ ದೊರೆಯಿತು. ನರೇಂದ್ರ ಮೋದಿ ಅವರು ಭಾರತದಲ್ಲಿ ಅತಿ ದೀರ್ಘಾವಧಿಗೆ ಸೇವೆ ಸಲ್ಲಿಸಿದ ಪ್ರಧಾನಮಂತ್ರಿಯಾಗಿರುವ ಈ ಸಂದರ್ಭದಲ್ಲಿ, ಕೇವಲ ರಾಷ್ಟ್ರದ ಪರಿವರ್ತನೆಯನ್ನಷ್ಟೇ ಅಲ್ಲ, ಈ ಅವಧಿಯು ನನ್ನಂತಹ ಸಾಮಾನ್ಯ ಭಾರತೀಯರಿಗೆ ಸೃಷ್ಟಿಸಿರುವ ಅಸಾಧಾರಣ ಅವಕಾಶಗಳನ್ನೂ ನೆನಪಿಸಿಕೊಳ್ಳುತ್ತಿದ್ದೇನೆ.

ಭಾರತದ ಸ್ವಾಭಿಮಾನದ ಚಿತ್ರಣ

ಕಳೆದೆರಡು ವರ್ಷಗಳು ಜಾಗತಿಕ ಇತಿಹಾಸದಲ್ಲೇ ಅತ್ಯಂತ ಸವಾಲಿನ ವರ್ಷಗಳು. ಭೌಗೋಳಿಕ-ರಾಜಕೀಯ ಸಂಘರ್ಷ, ಇಂಧನ ಭದ್ರತೆಯ ಕುರಿತ ಆತಂಕ, ಆರ್ಥಿಕ ಅನಿಶ್ಚಿತತೆ ಮತ್ತು ಭಯೋತ್ಪಾದನೆಯ ಬೆದರಿಕೆಗಳ ಮುಂದುವರಿಕೆ...ಹೀಗೆ ಇವುಗಳ ವಿರುದ್ಧ ಜಗತ್ತು ಈಗಲೂ ಹೋರಾಡುತ್ತಿದೆ. ಸಂಸತ್ ಸದಸ್ಯನಾಗಿ ನಾನು ಇಂಧನ ಮತ್ತು ರಕ್ಷಣಾ ಕ್ಷೇತ್ರಗಳಿಗೆ ಸಂಬಂಧಿಸಿದ ಚರ್ಚೆಗಳಲ್ಲಿ ಪಾಲ್ಗೊಂಡದ್ದರಿಂದ ಈ ಕ್ಷೇತ್ರದ ಬೆಳವಣಿಗೆಗಳನ್ನು ಸಮೀಪದಿಂದ ಗಮನಿಸಿದ್ದೇನೆ. ಅದರೂ, ಸಂಸದನಾಗಿ ಮೊದಲ ಅವಧಿಯಲ್ಲೇ ನನಗೆ ನೀಡಲಾದ ಎರಡು ಅಂತಾರಾಷ್ಟ್ರೀಯ ಜವಾಬ್ದಾರಿಗಳು ಜಾಗತಿಕವಾಗಿ ಭಾರತದ ಸ್ವಾಭಿಮಾನದ ಬಗ್ಗೆ ನನ್ನಲ್ಲಿ ಆಳವಾದ ಅರಿವು ಮೂಡಿಸಿದವು ಎಂದು ಹೆಮ್ಮೆಯಿಂದ ಹೇಳುತ್ತೇನೆ. ಪಾಕ್ ವಿರುದ್ಧ ಆಪರೇಷನ್ ಸಿಂದೂರ್ ಕಾರ್ಯಾಚರಣೆ ನಂತರ 2025ರ ಮೇ ತಿಂಗಳಲ್ಲಿ, ಭಯೋತ್ಪಾದನೆ ವಿರುದ್ಧದ ಭಾರತದ ಶೂನ್ಯ ಸಹಿಷ್ಣುತೆಯ ಸಂದೇಶವನ್ನು ವಿಶ್ವಕ್ಕೆ ತಲುಪಿಸುವ ಜವಾಬ್ದಾರಿ ಹೊಂದಿದ್ದ ಸಂಸತ್ತಿನ ಸರ್ವಪಕ್ಷಗಳ ನಿಯೋಗದ ಸದಸ್ಯನಾಗಿ ನನ್ನನ್ನು ಕೂಡ ಆಯ್ಕೆ ಮಾಡಲಾಗಿತ್ತು. ಈ ನಿಯೋಗ ಮಾಸ್ಕೋ, ಮ್ಯಾಡ್ರಿಡ್, ಅಥೆನ್ಸ್, ಲ್ಯುಬ್ಲಿಯಾನಾ ಮತ್ತು ಲಾಟ್ವಿಯಾ ದೇಶದ ರಿಗಾ ನಗರಗಳಿಗೆ ತೆರಳಿತ್ತು. ಓರ್ವ ಸೈನಿಕನಾಗಿ ನೋಡಿದರೆ, ಈ ಜವಾಬ್ದಾರಿ ನನ್ನ ಹೃದಯಕ್ಕೆ ಹತ್ತಿರವಾಗಿತ್ತು. ದಶಕಗಳಿಂದ ಭಾರತ ಎದುರಿಸುತ್ತಿದ್ದ ಉಗ್ರವಾದದ ವಾಸ್ತವಿಕತೆಯನ್ನು ನಾವು ಜಗತ್ತಿಗೆ ವಿವರಿಸಬೇಕಿತ್ತು. ವಿದೇಶಗಳಲ್ಲಿ ನಡೆದ ನಮ್ಮ ಸಂವಾದಗಳ ಸಂದರ್ಭದಲ್ಲಿ, ನಾನು ಒಂದು ವಿಭಿನ್ನ ವಾಸ್ತವಿಕತೆಗೆ ಸಾಕ್ಷಿಯಾಗಿದ್ದೆ. ಭಾರತದ ಧ್ವನಿಗೆ ಜಾಗತಿಕ ಮಟ್ಟದಲ್ಲಿ ಮಹತ್ವವಿತ್ತು ಮತ್ತು ಭಯೋತ್ಪಾದನೆ ವಿರುದ್ಧದ ನಮ್ಮ ಶೂನ್ಯ ಸಹಿಷ್ಣುತೆಯ ನಿಲುವಿಗೆ ಬೆಂಬಲ-ಮಾನ್ಯತೆ ದೊರೆಯುತ್ತಿತ್ತು. ಎಲ್ಲಕ್ಕಿಂತ ಮುಖ್ಯವಾಗಿ, ಸರ್ವಪಕ್ಷಗಳ ನಿಯೋಗದ ಮೂಲಕ ಭಾರತ ತನ್ನ ಶಕ್ತಿಯನ್ನು ಮತ್ತೊಮ್ಮೆ ಜಗತ್ತಿನ ಮುಂದೆ ಪ್ರದರ್ಶಿಸಿತ್ತು. ಭಾರತದ ಪ್ರಜಾಪ್ರಭುತ್ವದ ಚೌಕಟ್ಟಿನೊಳಗೆ ಭಿನ್ನಾಭಿಪ್ರಾಯಗಳಿರಬಹುದು. ಆದರೆ ಭಯೋತ್ಪಾದನೆ, ರಾಷ್ಟ್ರೀಯ ಭದ್ರತೆ ಮತ್ತು ನಾಗರಿಕರ ರಕ್ಷಣೆಯ ವಿಚಾರ ಬಂದಾಗ, ಭಾರತ ಒಂದೇ ಧ್ವನಿಯಲ್ಲಿ ಮಾತನಾಡುತ್ತದೆ ಎಂಬ ಸ್ಪಷ್ಟ ಸಂದೇಶ ರವಾನಿಸಿದ್ದೆವು. ವೈಯಕ್ತಿಕವಾಗಿ ಈ ಜವಾಬ್ದಾರಿ ನನಗೆ ಇನ್ನಷ್ಟು ವಿಶೇಷವಾಗಿತ್ತು. ಏಕೆಂದರೆ ಯೋಧನಾಗಿದ್ದಾಗಿನ ನನ್ನ ಆರಂಭಿಕ ದಿನಗಳನ್ನು ಅದು ನೆನಪಿಸಿತ್ತು. ಭಾರತೀಯ ಸೇನೆಯ 8 ಗೋರ್ಖಾ ರೈಫಲ್ಸ್‌ನಲ್ಲಿ ನಾನು ಯುವ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದ ಎರಡನೇ ವರ್ಷದಲ್ಲೇ ಮಣಿಪುರದಲ್ಲಿ ನಡೆದ ಭಯೋತ್ಪಾದನಾ ವಿರೋಧಿ ಕಾರ್ಯಾಚರಣೆಗಳ ವೇಳೆ ಕಮಾಂಡಿಂಗ್ ಆಫೀಸರ್ ಅವರು ಘಾತಕ್ ಪ್ಲಾಟೂನ್ ಟ್ರೂಪ್ ನಾಯಕತ್ವದ ಜವಾಬ್ದಾರಿಯನ್ನು ನನ್ನ ಹೆಗಲಿಗೇರಿಸಿದ್ದರು. ಅದೇ ರೀತಿ, ಮೊದಲ ಬಾರಿಗೆ ಸಂಸದನಾಗಿದ್ದ ನನ್ನನ್ನು ಪ್ರಧಾನಿ ಮೋದಿ ಅವರು ಈ ಸರ್ವಪಕ್ಷ ನಿಯೋಗದ ಸದಸ್ಯನಾಗಿ ಆಯ್ಕೆ ಮಾಡಿದಾಗ, ಅದೇ ನಂಬಿಕೆ ಮತ್ತು ಜವಾಬ್ದಾರಿಯ ಭಾವನೆ ನನ್ನಲ್ಲಿ ಮತ್ತೆ ಮೂಡಿತು.

ಬದಲಾಯಿತು ನೋಡುವ ಬಗೆ

ಕೆಲ ತಿಂಗಳುಗಳ ಬಳಿಕ ನನ್ನ ಮುಂದೆ ಎರಡನೇ ಅಂತಾರಾಷ್ಟ್ರೀಯ ಜವಾಬ್ದಾರಿಯಿತ್ತು. 2025ರ ಅಕ್ಟೋಬರ್‌ನಲ್ಲಿ ವಿಶ್ವಸಂಸ್ಥೆಯ 80ನೇ ಸಾಮಾನ್ಯ ಸಭೆಯಲ್ಲಿ ಭಾರತದ ಸಂಸದೀಯ ನಿಯೋಗ ಪಾಲ್ಗೊಂಡಿತ್ತು. ಈ ನಿಯೋಗದ ಸದಸ್ಯನಾಗಿ ನಾನೂ ನ್ಯೂಯಾರ್ಕ್‌ಗೆ ತೆರಳಿ ಸಭೆಯಲ್ಲಿ ಭಾಗವಹಿಸಿದ್ದೆ. ಭಾರತದ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಪ್ರತಿನಿಧಿಸಲು, ವಿವಿಧ ದೇಶಗಳ ಜನಪ್ರತಿನಿಧಿಗಳು ಮತ್ತು ನೀತಿ ನಿರೂಪಕರೊಂದಿಗೆ ಸಂವಾದ ನಡೆಸಲು, ರಾಜತಾಂತ್ರಿಕ ಸಂಬಂಧಗಳನ್ನು ಬಲಪಡಿಸಲು ಹಾಗೂ ದೇಶದ ಧ್ವನಿಯನ್ನು ವಿಶ್ವಸಂಸ್ಥೆಯ ಮುಂದಿಡಲು ಈ ನಿಯೋಗ ರಚಿಸಲಾಗಿತ್ತು. 2014ರ ನಂತರವಷ್ಟೇ ಮೊದಲ ವಿದೇಶ ಪ್ರವಾಸ ಮಾಡಿದ್ದ ನನ್ನಲ್ಲಿ ಈ ಪ್ರವಾಸ ಆಳವಾದ ಪ್ರಭಾವ ಬೀರಿತು. ಅಲ್ಲಿನ ಚರ್ಚೆ-ಭಾಷಣಗಳು ಕಳೆದೊಂದು ದಶಕದಲ್ಲಿ ಲಕ್ಷಾಂತರ ಭಾರತೀಯರಲ್ಲಿ ಮೂಡಿದ್ದ ಸಾಧ್ಯತೆಗಳ ವಿಶ್ವಾಸದ ಪ್ರತಿಬಿಂಬವಾಗಿದ್ದವು. ಜಗತ್ತು ಭಾರತವನ್ನು ನೋಡುವ ಮತ್ತು ಚರ್ಚಿಸುವ ವಿಧಾನ ನನ್ನನ್ನು ಬಹುವಾಗಿ ಆಕರ್ಷಿಸಿತ್ತು. ನಾವು ಅಲ್ಲಿ ಭೇಟಿ ಮಾಡುತ್ತಿದ್ದ ಅನಿವಾಸಿ ಭಾರತೀಯರೆಲ್ಲರೂ ಭಾರತದ ನಾಯಕತ್ವ ಹಾಗೂ ಜಾಗತಿಕ ಸ್ವಾಭಿಮಾನದ ಬಗ್ಗೆ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು. ಉದ್ಯಮಿಗಳು, ವಿದ್ಯಾರ್ಥಿಗಳು, ವೃತ್ತಿಪರರು, ವೈದ್ಯರು, ಇಂಜಿನಿಯರ್‌ಗಳು ಹಾಗೂ ವಿವಿಧ ಸಮುದಾಯದ ನಾಯಕರು ಕೂಡ ವಿಶ್ವದಲ್ಲಿ ಭಾರತದ ಹೆಚ್ಚುತ್ತಿರುವ ಪ್ರಭಾವವನ್ನು ಮರೆಯದೆ ಉಲ್ಲೇಖಿಸುತ್ತಿದ್ದರು.

ನಮ್ಮ ಯೋಜನೆಗೆ ಸ್ಫೂರ್ತಿ

ಭಾರತವನ್ನು ಪರಿವರ್ತಿಸುವ ಮೊದಲು ಪ್ರಧಾನಿ ಮೋದಿ ಅವರು ಗುಜರಾತ್‌ನ್ನು ಪರಿವರ್ತಿಸಿದ್ದರು. ದೂರದೃಷ್ಟಿಯೊಂದಿಗೆ ಜೋಡಿಸಿಕೊಂಡ ನಾಯಕತ್ವವು ರಾಜ್ಯದಲ್ಲಿ ಏನನ್ನು ಸಾಧಿಸಬಹುದು ಎಂಬುದನ್ನು ಅವರು ತೋರಿಸಿಕೊಟ್ಟರು. ನಮ್ಮ ಆಲೋಚನೆ, ಬದ್ಧತೆಯನ್ನು ನಮ್ಮದೇ ಜನ ಮತ್ತು ಪ್ರದೇಶದ ಅಭಿವೃದ್ಧಿಗೆ ಸಮರ್ಪಿಸುವುದರಿಂದ ಬದಲಾವಣೆ ಸಾಧ್ಯ ಎನ್ನುವುದನ್ನು ಗುಜರಾತ್ ಸಾಬೀತುಪಡಿಸಿತು. ಅದು ನನ್ನ ಚಿಂತನೆಗಳ ಮೇಲೂ ಆಳವಾದ ಪ್ರಭಾವ ಬೀರಿತು.

ಮಂಗಳೂರಿನಲ್ಲಿ ನಾವು ಆರಂಭಿಸಿರುವ ಬ್ಯಾಕ್ ಟು ಊರು (Back-ToOoru) ಯೋಜನೆ ಹಿಂದಿರುವ ಸ್ಫೂರ್ತಿಯೂ ಇದೇ. ಈ ಯೋಜನೆ ಪ್ರತಿಭಾವಂತ ಯುವಕರು ತಮ್ಮ ಊರಿನಲ್ಲಿಯೇ ಅವಕಾಶಗಳನ್ನು ಮರುಶೋಧಿಸಲು ಪ್ರೋತ್ಸಾಹಿಸುತ್ತಿದೆ. ಅದೇ ರೀತಿ ಬೊಲ್ಪು (Bolpu) ಯೋಜನೆಯು ಸ್ಥಳೀಯ ಉದ್ಯಮಶೀಲತೆ ಮತ್ತು ಸಮುದಾಯ ಆಧಾರಿತ ಅಭಿವೃದ್ಧಿಯನ್ನು ಉತ್ತೇಜಿಸುವ ಉದ್ದೇಶ ಹೊಂದಿದೆ. ಈ ಎರಡೂ ಯೋಜನೆಗಳ ಹಿಂದಿನ ನಂಬಿಕೆ ಏನೆಂದರೆ; ನಮ್ಮನ್ನು ರೂಪಿಸಿದ ನೆಲ ಮತ್ತು ಸಮುದಾಯಗಳಿಗೆ ನಾವು ಮರಳಿ ಕೊಡುಗೆ ನೀಡಿದಾಗ ಮಾತ್ರ ಶಾಶ್ವತ ಬದಲಾವಣೆ ಸಾಧ್ಯ ಎನ್ನುವುದು.

ನಾಯಕತ್ವದಿಂದ ಆತ್ಮವಿಶ್ವಾಸ

12 ವರ್ಷಗಳ ಹಿಂದೆ ಪ್ರಧಾನಮಂತ್ರಿಯಾಗಿ ಜವಾಬ್ದಾರಿ ವಹಿಸಿಕೊಂಡಾಗ, ಮೋದಿ ಅವರು ಲಕ್ಷಾಂತರ ಭಾರತೀಯರಿಗೆ ದೊಡ್ಡ ಕನಸು ಕಾಣಲು ಪ್ರೇರಣೆ ನೀಡಿದರು. ಲಕ್ಷಾಂತರ ಜನರು ಆ ಕನಸು ಕಂಡರು. ನನ್ನ ಕಥೆ ಅವುಗಳಲ್ಲಿ ಕೇವಲ ಒಂದಷ್ಟೇ. ಫಿರಂಗಿಪೇಟೆಯಿಂದ ಸಂಸತ್ತಿನವರೆಗೆ, ಸೇನೆಯಿಂದ ಸಾರ್ವಜನಿಕ ಜೀವನದವರೆಗೆ, ದಕ್ಷಿಣ ಕನ್ನಡವನ್ನು ಪ್ರತಿನಿಧಿಸುವುದರಿಂದ ವಿದೇಶಗಳಲ್ಲಿ ಭಾರತವನ್ನು ಪ್ರತಿನಿಧಿಸುವವರೆಗೆ ಸಾಗಿದ ನನ್ನ ಪಯಣದತ್ತ ದೃಷ್ಟಿ ಹಾಯಿಸಿದಾಗ, ಸಾಮಾನ್ಯ ನಾಗರಿಕರಲ್ಲಿ ಹಾಗೂ ಒಂದು ದೇಶವಾಗಿ ಭಾರತದ ಆತ್ಮವಿಶ್ವಾಸ ದೊಡ್ಡ ಮಟ್ಟಿಗೆ ವೃದ್ಧಿಯಾಗಿದೆ ಎಂಬ ದೃಢ ನಂಬಿಕೆ ನನ್ನಲ್ಲಿ ಮೂಡಿದೆ. ಪ್ರಧಾನಿಯವರ ನಾಯಕತ್ವ ರೂಪಿಸಿದ ಆತ್ಮವಿಶ್ವಾಸ ಈ ದೇಶವನ್ನು ಕಲ್ಪನೆಗೂ ಮೀರಿದ ಮಟ್ಟಿಗೆ ಮುನ್ನಡೆಸಿದೆ. ಆ ಕಾರಣಕ್ಕಾಗಿ ಹಾಗೂ ಭಾರತವನ್ನು ಜಗತ್ತಿಗೆ ಮತ್ತು ನಮಗೆ ಮರುಪರಿಚಯ ಮಾಡಿಕೊಟ್ಟದ್ದಕ್ಕಾಗಿ ಪ್ರಧಾನ ಸೇವಕ ನರೇಂದ್ರ ಮೋದಿ ಅವರಿಗೆ ಓರ್ವ ಸೈನಿಕನಾಗಿ ನನ್ನ ಹೃದಯಪೂರ್ವಕ ಸೆಲ್ಯೂಟ್.

• ಲೇಖಕರು - ಸಂಸದರು, ದಕ್ಷಿಣ ಕನ್ನಡ ಲೋಕಸಭೆ ಕ್ಷೇತ್ರ

ಪತ್ರ ಮಿತ್ರ

ಅರ್ಗಲಾ ಸ್ತೋತ್ರ ವಿಶೇಷ

ತಮಿಳುನಾಡಿನ ಮುಖ್ಯಮಂತ್ರಿ ಜೋಸೆಫ್ ವಿಜಯ್ ಕೊಲ್ಲೂರು ಮೂಕಾಂಬಿಕೆಯ ದರ್ಶನ ಮಾಡಿ 1.6 ಕೆಜಿ ತೂಕದ ಬೆಳ್ಳಿಯ ಖಡ್ಗವನ್ನು ದೇವಿಗೆ ಸಮರ್ಪಿಸಿದರೆಂದು, ಈ ಸಂದರ್ಭದಲ್ಲಿ ಅರ್ಚಕರು ಅರ್ಗಲಾ ಸ್ತೋತ್ರವನ್ನು ಪಠಿಸಿ ಮುಖ್ಯಮಂತ್ರಿಯ ಕೈಗೆ ರಕ್ಷಾ ದಾರವನ್ನು ಕಟ್ಟಿದರೆಂದು ವರದಿಯಾಗಿದೆ. ಅರ್ಗಲವೆಂದರೆ 'ಕವಾಟ ಬಂಧ ಕಾಷ್ಠ ವಿಶೇಷ' ಎಂದು ಅಮರಕೋಶ ತಿಳಿಸುತ್ತದೆ. ಬಾಗಿಲನ್ನು ಬಂಧಿಸುವ ಮರದ ಸಾಧನವೇ ಅರ್ಗಲ. ಕನ್ನಡದಲ್ಲಿ 'ಅಗಳಿ' ಎಂದರ್ಥ.

ದುರ್ಗೆಯ ಅನುಗ್ರಹಕ್ಕಾಗಿ ಸಪ್ತಶತೀ ಪಾರಾಯಣ, ಚಂಡೀ ಹವನಗಳನ್ನು ಮಾಡುವ ಸಂಪ್ರದಾಯ ನಮ್ಮಲ್ಲಿದೆ. ಏಳುನೂರು ಶ್ಲೋಕಗಳ ಹದಿಮೂರು ಅಧ್ಯಾಯಗಳ ಪಾರಾಯಣದ ಮೊದಲು ಕವಚ-ಅರ್ಗಲ-ಕೀಲಕ ಸ್ತೋತ್ರಗಳನ್ನು ಪಠಿಸಬೇಕು.

ಅರ್ಗಲಂ ದುರಿತಂ ಹಂತಿ ಕೀಲಕಂ ಫಲದಂ ತಥಾ।
ಕವಚಂ ರಕ್ಷತೇ ನಿತ್ಯಂ ಚಂಡಿಕಾ ತ್ರಿತಯಂ ವಿದೇತ್॥
ಅರ್ಗಲಂ ಹೃದಯೇಯಸ್ಯ ಸ ಚಾನರ್ಗಲವಾಕ್ ಸದಾ।
ಕೀಲಕಂ ಹೃದಯೇ ಯಸ್ಯ ಪಾಕೀಲಿತ ಮಾನಸಃ॥
ಕವಚಂ ಹೃದಯೇ ಯಸ್ಯ ಸ ವಜ್ರ ಹೃದಯಃ ಖಲು॥

ಅರ್ಗಲ ಪಾರಾಯಣವು ದುರಿತಗಳನ್ನು ದೂರ ಮಾಡುತ್ತದೆ. ಕೀಲಕವು ಸತ್ಫಲಗಳನ್ನು ನೀಡುತ್ತದೆ. ಕವಚವು ಸದಾ ರಕ್ಷಣೆ ಮಾಡುತ್ತದೆ. ಈ ಮೂರನ್ನೂ ತಾಯಿ ದುರ್ಗೆ ಅನುಗ್ರಹಿಸುತ್ತಾಳೆ. ಅರ್ಗಲವನ್ನು ಹೃದಯದಲ್ಲಿ ಧ್ಯಾನಿಸಿದರೆ ನಿರರ್ಗಳ ಮಾತನಾಡುವ ಶಕ್ತಿಯೂ, ಕೀಲಕ ಧ್ಯಾನದಿಂದ ಮನೋನಿಗ್ರಹವೂ, ಕವಚ ಧ್ಯಾನದಿಂದ ವಜ್ರ ಹೃದಯವೂ ಸಿದ್ಧಿಸುತ್ತದೆ.

ಅರ್ಗಲಾ ಸ್ತೋತ್ರದಲ್ಲಿ ಇಪ್ಪತ್ತೈದು ಶ್ಲೋಕಗಳಿವೆ. ಇವುಗಳಲ್ಲಿ ಇಪ್ಪತ್ತೊಂದು ಶ್ಲೋಕಗಳ ಉತ್ತರಾರ್ಧದಲ್ಲಿ 'ರೂಪಂ ದೇಹಿ ಜಯಂ ದೇಹಿ ಯಶೋದೇಹಿ ದ್ವಿಷೋ ಜಹಿ' ಎಂಬ ಸ್ತುತಿಯಿದೆ. 'ರೂಪವನ್ನೂ, ಜಯವನ್ನೂ, ಯಶಸ್ಸನ್ನೂ ನೀಡಿ ಶತ್ರುಗಳನ್ನು ನಾಶ ಮಾಡು' ಎಂಬ ಪ್ರಾರ್ಥನೆ ಇದೆ.

ಜೋಸೆಫ್ ವಿಜಯರ ಕೊಲ್ಲೂರು ದರ್ಶನದ ಪರಿಣಾಮವಾಗಿ ಇನ್ನಷ್ಟು ತಮಿಳರು ಅಲ್ಲಿಗೆ ಲಗ್ಗೆ ಇಡಲಿದ್ದಾರೆ. ಹಿಂದೆಲ್ಲ ಎಂಜಿಆರ್ ಸಮರ್ಪಿಸಿದ 'ತಂಗವಾಳ'ನ್ನು ನೋಡಿ ಕೃತಾರ್ಥರಾದ ತಮಿಳರು ಇನ್ನು ಮುಂದೆ 'ಬೆಳ್ಳಿವಾಳ'ನ್ನು ನೋಡಿ ಧನ್ಯರಾಗಲಿದ್ದಾರೆ.

-ಎಂ. ಸುಬ್ರಹ್ಮಣ್ಯ ಮುಡಿಪು

ವಿಪರ್ಯಾಸ

ತಮಿಳುನಾಡಿನ ಮುಖ್ಯಮಂತ್ರಿ ವಿಜಯ್ ತಮ್ಮ 'ಮರ್ಸಲ್' ಚಿತ್ರದಲ್ಲಿ 'ದೇವಸ್ಥಾನ ಕಟ್ಟಿಸುವುದಕ್ಕಿಂತ... ಆಸ್ಪತ್ರೆ ಕಟ್ಟಿಸಬೇಕು' ಅಂತ ಡೈಲಾಗ್ ಹೊಡೆದಿದ್ದ ಹೊಡೆದಿದ್ದು!

ಇದೀಗ ಕೊಲ್ಲೂರು ಮೂಕಾಂಬಿಕಾ ದೇವಸ್ಥಾನಕ್ಕೆ ಭೇಟಿ ನೀಡಿ ಭಕ್ತಿಯ ಪರಾಕಾಷ್ಠೆ ತೋರಿ 1 ಕೆಜಿ 600 ಗ್ರಾಂ ತೂಕದ ಬೆಳ್ಳಿ ಖಡ್ಗ ಕೊಟ್ಟದ್ದು ಮಾತ್ರ ವಿಪರ್ಯಾಸ!!

- ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ಎಷ್ಟು ಖರ್ಚು !

ತಮಿಳ್ನಾಡು ಮುಖ್ಯಮಂತ್ರಿ ವಿಜಯ್ ಕೊಲ್ಲೂರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಅವರ ಬೆಂಗಾವಲು ವಾಹನಗಳು ಸಾಕಷ್ಟಿದ್ದವು. ಭದ್ರತಾ ವಾಹನಗಳೂ ಬಹಳಷ್ಟಿದ್ದವು. ಇವೆಲ್ಲವೂ ತಮಿಳ್ನಾಡಿನಿಂದಲೇ ಬಂದಿರುವಂತೆ ತೋರುತ್ತಿತ್ತು. ಪೆಟ್ರೋಲ್ ಕಡಿಮೆ ಬಳಸಬೇಕಾದ ಈ ಹೊತ್ತಿನಲ್ಲಿ ಇಷ್ಟೊಂದು ವೆಚ್ಚವೇ?!

-ಚಿದಂಬರ ರಾವ್, ಕುಂದಾಪುರ

ಟ್ರಂಪ್‌ಗೆ 'ಲಕ್ಷ್ಮಣ ರೇಖೆ!'

ಕೊನೆಗೂ ಇರಾನ್ ಜತೆಗಿನ ಸಮರ ಕೊನೆಗೊಂಡಿದೆಯೆಂದು ಡೊನಾಲ್ಡ್ ಟ್ರಂಪ್ ಘೋಷಿಸಿದ್ದಾರೆ. ದಿನಕ್ಕೆ ನೂರು ಬಾರಿ ವೈರುಧ್ಯದ ಹೇಳಿಕೆಯನ್ನು ನೀಡುವ ಅವರ ಚಾಳಿಯನ್ನು ಕಳೆದ ಕೆಲವು ತಿಂಗಳುಗಳಿಂದ ನಿರಂತರ ಕಂಡವರಿಗೆ ಅವರ ಈ ಯುದ್ಧಾಂತ್ಯದ ಮಾತು ಕೂಡಾ ನಂಬುವುದು ಕಷ್ಟವಾಗುತ್ತಿದೆ. ಒಪ್ಪಂದ ಪೂರ್ಣಗೊಂಡಿದೆಯೆಂದು ಈ ಹಿಂದೆಯೂ ಅವರು ಎಷ್ಟು ಬಾರಿ ಹೇಳಿದ್ದರೆಂದು ನೆನಪಾಗುತ್ತಿಲ್ಲ. ಮತ್ತೆ ಯಾವಾಗ ಅವರು ಇರಾನ್ ಮೇಲೆ ಬಾಂಬು ಸುರಿಸುವರೆಂದೂ ಹೇಳಲಾಗುವುದಿಲ್ಲ. ತಮ್ಮ ಮಾತಿಗೆ ಕೋಪವಾಗಲಿಲ್ಲ ಅವರು ಯುದ್ಧ ಪುನರಾರಂಭಿಸಿಯಾರು.

ಒಂದೊಂದು ಕಾಲದಲ್ಲಿ ಒಬ್ಬೊಬ್ಬರು ಆಡಳಿತಗಾರರು ವಿಶ್ವ ಶಾಂತಿಯನ್ನು ಕಲಕುತ್ತಾರೆ. ಮುಸೋಲಿನಿ, ಬಿಸ್ಮಾರ್ಕ್, ಹಿಟ್ಲರ್, ಸ್ಟಾಲಿನ್ ಮೊದಲಾದವರು ಈ ರೀತಿ ಜಾಗತಿಕ ಶಾಂತಿ ಕದಡಿದವರು. ಪ್ರಸ್ತುತ ಕಾಲಮಾನಕ್ಕೆ ಬರುವಾಗ ಡೊನಾಲ್ಡ್ ಟ್ರಂಪ್ ಇದೇ ಗುಂಪಿಗೆ ಸೇರುವವರಂತೆ ಕಾಣುತ್ತಾರೆ. ಪುಟ್ಟ ಪುಟ್ಟ ರಾಷ್ಟ್ರಗಳನ್ನೆಲ್ಲ ಅಮೆರಿಕದ ವಶಕ್ಕೆ ತೆಗೆದುಕೊಳ್ಳುವ ಮಹತ್ವಾಕಾಂಕ್ಷೆಯನ್ನು ಅವರು ಪ್ರದರ್ಶಿಸುತ್ತಿದ್ದಾರೆ. ಇದು ಮುಂದಿನ ದಿನಗಳಲ್ಲಿ ದೊಡ್ಡ ಮಟ್ಟದ ಸಂಘರ್ಷವೊಂದನ್ನು ಹುಟ್ಟು ಹಾಕಿ ಮೂರನೇ ಜಾಗತಿಕ ಸಮರಕ್ಕೆ ಹೇತುವಾದರೂ ಆಶ್ಚರ್ಯಪಡಬೇಕಾಗಿಲ್ಲ.

ಜಗತ್ತಿನ ಎಲ್ಲಾ ದೇಶಗಳ ಮುಖಂಡರನ್ನೂ ಟ್ರಂಪ್ ಎದುರು ಹಾಕಿಕೊಂಡಿದ್ದಾರೆ. ತಮ್ಮ ಮಿತ್ರರೆನಿಸಿಕೊಂಡವರನ್ನೂ ದೂರ ಮಾಡಿಕೊಂಡಿದ್ದಾರೆ. ಇನ್ನಾದರೂ ಈ ಮುಖಂಡರೆಲ್ಲರೂ ಜತೆಗೂಡಿ ಡೊನಾಲ್ಡ್ ಟ್ರಂಪ್‌ಗೊಂದು ಲಕ್ಷ್ಮಣ ರೇಖೆ ಎಳೆಯಬೇಕಾಗಿದೆ.

-ಎಚ್.ಗಂಗಾಧರ ಗೌಡ, ಸುಳ್ಯ

ಅತಂತ್ರ ಭವಿಷ್ಯ

ಸರ್ಕಾರಿ ಆಂಗ್ಲ ಮಾಧ್ಯಮ ಶಾಲೆಗಳ 40,000 ಬಡ ವಿದ್ಯಾರ್ಥಿಗಳ ಭವಿಷ್ಯವನ್ನು ಸರ್ಕಾರ ಅತಂತ್ರಗೊಳಿಸಿದೆ. 7ನೇ ತರಗತಿಯವರೆಗೆ ಇಂಗ್ಲಿಷ್ ಕಲಿಸಿ ಈಗ 8ನೇ ತರಗತಿಗೆ ವಿಸ್ತರಿಸದೆ ಕೈಬಿಟ್ಟಿರುವುದು ಕಣ್ಣಿಲ್ಲದ ಆಡಳಿತಕ್ಕೆ ಸಾಕ್ಷಿ. ಜೂನ್ ಮುಗಿಯುತ್ತಿದ್ದರೂ ಯಾವುದೇ ಮಾಹಿತಿ ನೀಡದ ಶಿಕ್ಷಣ ಇಲಾಖೆಯ ನಡೆ ವಂಚನಾತ್ಮಕವಾಗಿದೆ.

ಕೆಪಿಎಸ್ ಶಾಲೆಗಳಿಗೆ 3700 ಕೋಟಿ ರೂ. ಸುರಿಯುವ ಸರ್ಕಾರಕ್ಕೆ ಈ 40,000 ಮಕ್ಕಳ ಕಣ್ಣೀರು ಕಾಣುತ್ತಿಲ್ಲವೇ? ಖಾಸಗಿ ಶಾಲೆಗಳ ದುಬಾರಿ ಶುಲ್ಕ ಕಟ್ಟಲಾಗದ ನಿರ್ಗತಿಕ ಪೋಷಕರ ಆಶಯಗಳಿಗೆ ಬೆಂಕಿ ಇಟ್ಟಂತಾಗಿದೆ. ಇದು ಕೇವಲ ನಿರ್ಲಕ್ಷ್ಯವಲ್ಲ ಬಡ ಮಕ್ಕಳ ಭವಿಷ್ಯದ ಕೊಲೆ. ಅಧಿಕಾರಿಗಳ ಮತ್ತು ರಾಜಕಾರಣಿಗಳ ಈ ಕುಂಭಕರ್ಣ ನಿದ್ರೆಯಿಂದಾಗಿ ಸಾವಿರಾರು ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಸರ್ಕಾರವು ಈ ಮಕ್ಕಳ ಅತಂತ್ರ ಸ್ಥಿತಿಯನ್ನು ತಕ್ಷಣ ನಿವಾರಿಸಬೇಕು.

-ಡಾ. ವಿಜಯಕುಮಾರ್, ದಾವಣಗೆರೆ

ಕಿರುಸುದ್ದಿ

ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

• **ದೇವನಹಳ್ಳಿ:** ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಮತ್ಸ್ಯಸಂಪದ ಯೋಜನೆಯಡಿ ಫಲಾನುಭವಿ ಆಧಾರಿತ ಯೋಜನೆಗಳ ಅನುಷ್ಠಾನ ಮಾಡಲು ಸಹಾಯಧನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಜಿಲ್ಲೆಯ ಆಸಕ್ತರು ಸಹಾಯಧನ ಪಡೆಯಲು ಆಯಾ ತಾಲೂಕು ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಅರ್ಜಿ ನಮೂನೆಗಳನ್ನು ಪಡೆದು, ಭರ್ತಿ ಮಾಡಿದ ಅರ್ಜಿಗಳನ್ನು ಜೂ. 30ರ ರೊಳಗೆ ಸಲ್ಲಿಸಬಹುದು. ಮತ್ಸ್ಯಸಂಪದ ಯೋಜನೆಯ ಫಲಾನುಭವಿ ಆಧಾರಿತ ಯೋಜನೆಗಳಡಿ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಅಲಂಕಾರಿಕ ಮೀನು/ಮೀನುಗಳ ಕಿಯೋಸ್ಕ್ ಘಟಕ ಸ್ಥಾಪನೆಗೆ ಹಾಗೂ ಶಾಖನಿರೋಧಕ ವಾಹನ ಖರೀದಿಗೆ ಸಹಾಯಧನ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಬೆಂ.ಗ್ರಾ.ಜಿಲ್ಲೆಯ ಮೀನುಗಾರಿಕೆ ಉಪನಿರ್ದೇಶಕರು ದೂ. ಸಂಖ್ಯೆ: 9880609384, 080-23362555, ದೇವನಹಳ್ಳಿ 9845180161, ದೊಡ್ಡಬಳ್ಳಾಪುರ 8747012127, ಹೊಸಕೋಟೆ 9845180161, ನೆಲಮಂಗಲದ ಉಪನಿರ್ದೇಶಕರ 8747012127 ಯನ್ನು ಸಂಪರ್ಕಿಸಲು ಮೀನುಗಾರಿಕೆ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೌಶಲಾಭಿವೃದ್ಧಿ ತರಬೇತಿಗೆ ಅರ್ಜಿ ಆಹ್ವಾನ

• **ದೇವನಹಳ್ಳಿ:** ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಪ್ರವಾಸೋದ್ಯಮ/ಆತಿಥ್ಯ ಕ್ಷೇತ್ರದಲ್ಲಿ ಕೌಶಲಾಭಿವೃದ್ಧಿ ತರಬೇತಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಪ್ರವಾಸೋದ್ಯಮ ಇಲಾಖೆಯ ವತಿಯಿಂದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರದ Food Craft Institute (FCI) Institute of Hotel Management (IHM) ಬೆಂಗಳೂರುರವರ ಮೂಲಕ ವಸತಿ ಸಹಿತ ತರಬೇತಿಯನ್ನು ನೀಡಲಾಗುತ್ತದೆ. ಆಸಕ್ತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಅರ್ಜಿಗಳನ್ನು ಜೂನ್ 30ರೊಳಗೆ ಸಹಾಯಕ ನಿರ್ದೇಶಕರ ಕಚೇರಿ, ಪ್ರವಾಸೋದ್ಯಮ ಇಲಾಖೆ, ನಂ.09, ನೆಲಮಹಡಿ, ಜಿಲ್ಲಾಡಳಿತ ಭವನ, ಬೀರಸಂದ್ರ ಗ್ರಾಮ, ದೇವನಹಳ್ಳಿ ತಾಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ಕಚೇರಿ ಸಮಯದಲ್ಲಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೂ.ಸಂ.080-22040633 ಗೆ ಕಚೇರಿಯ ಸಮಯದಲ್ಲಿ ಸಂಪರ್ಕಿಸಲು ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿಪ್ಲೊಮಾ ಪ್ರವೇಶಕ್ಕೆ ಅರ್ಜಿ ಆಹ್ವಾನ



• **ದೇವನಹಳ್ಳಿ:** ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ-ಆಪರೇಟಿವ್ ಮ್ಯಾನೇಜ್ ಮೆಂಟ್, ಸಹಕಾರ ತರಬೇತಿ ಸಂಸ್ಥೆಯು ಜುಲೈ 01 ರಿಂದ 6 ತಿಂಗಳ ಅವಧಿಯ ಡಿಪ್ಲೊಮಾ ಇನ್ ಕೋ ಆಪರೇಟಿವ್ ಮ್ಯಾನೇಜ್‌ಮೆಂಟ್ ತರಬೇತಿಯನ್ನು ಪ್ರಾರಂಭಿಸಿದೆ. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ, ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಗಳ ಖಾಸಗಿ ಅಭ್ಯರ್ಥಿಗಳಿಂದ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನಿರುದ್ಯೋಗಿ ಅಭ್ಯರ್ಥಿಗಳಿಂದ ಮತ್ತು ಎಲ್ಲಾ ವಿವಿಧ ಸಹಕಾರ ಸಂಘ/ಬ್ಯಾಂಕ್‌ಗಳ ಉದ್ಯೋಗಿಗಳು ಅರ್ಜಿ ಸಲ್ಲಿಸಬಹುದು. ತರಬೇತಿ ಪಡೆಯಲು ಕನಿಷ್ಠ ವಿದ್ಯಾರ್ಹತೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಖಾಸಗಿ ಅಭ್ಯರ್ಥಿಗಳಿಗೂ ಸಹ ಪ್ರವೇಶ ಪಡೆಯಲು ಅವಕಾಶವಿರುತ್ತದೆ. ವಯೋಮಿತಿ 16 ವರ್ಷ ದಾಟಿದವರಾಗಿರಬೇಕು. ಅರ್ಜಿಯನ್ನು ಜೂನ್ 30ರ ಒಳಗಾಗಿ ಸಲ್ಲಿಸಬೇಕು. ತರಬೇತಿ ಪಡೆಯುವ ಎಲ್ಲಾ ಅಭ್ಯರ್ಥಿಗಳಿಗೆ ಮಾಸಿಕ ರೂ. 500 ಶಿಷ್ಯವೇತನ ನೀಡಲಾಗುವುದು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನಿರುದ್ಯೋಗಿ ಅಭ್ಯರ್ಥಿಗಳಿಗೆ ಮಾಸಿಕ ರೂ. 600 ಶಿಷ್ಯವೇತನ ನೀಡಲಾಗುವುದು. ಹೆಚ್ಚಿನ ವಿವರಗಳಿಗೆ ದೂ.080-35541407 ಅಥವಾ ಮೊ.90362 59781 ಸಂಪರ್ಕಿಸಬಹುದು ಅಥವಾ ಸಂಸ್ಥೆಯ ಕಚೇರಿ ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ ಆಪರೇಟಿವ್ ಮ್ಯಾನೇಜ್ ಮೆಂಟ್, ಸಹಕಾರ ಭವನ, 1/3, 2ನೇ ಮಹಡಿ, 3ನೇ ಮುಖ್ಯರಸ್ತೆ, ಕನ್ನಡ ಸಾಹಿತ್ಯ ಪರಿಷತ್ ಹಿಂಭಾಗ, ಚಾಮರಾಜಪೇಟೆ, ಬೆಂಗಳೂರು-18 ಇಲ್ಲಿಗೆ ಖುದ್ದಾಗಿ ಭೇಟಿ ನೀಡಬಹುದು ಎಂದು ಪ್ರಾಚಾರ್ಯರಾದ ಶೈಲಾ ಬಿ.ವಿ. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಮಗಾರಿ ಭೂಮಿಪೂಜೆ ವೇಳೆ ಶಾಸಕ ಬಿ.ಶಿವಣ್ಣ ಭರವಸೆ | ನಾಗರಿಕರ ಸಮಸ್ಯೆಗೆ ಸ್ಪಂದನೆ

ಜನರ ಸಮಸ್ಯೆ ಪರಿಹಾರಕ್ಕೆ ವೇದಿಕೆ

• **ಆನೇಕಲ್:** ಆನೇಕಲ್ ವಿಧಾನಸಭಾ ಕ್ಷೇತ್ರದಲ್ಲಿ ಮುಂದಿನ ದಿನಗಳಲ್ಲಿ 'ಶಾಸಕರ ನಡಿಗೆ ಜನರ ಕಡೆಗೆ' ಕಾರ್ಯಕ್ರಮ ರೂಪಿಸುವ ಮೂಲಕ ಸಮಸ್ಯೆಗಳ ಪರಿಹಾರಕ್ಕೆ ವೇದಿಕೆ ಕಲ್ಪಿಸಲಾಗುವುದು ಎಂದು ಶಾಸಕ ಬಿ.ಶಿವಣ್ಣ ತಿಳಿಸಿದರು.

ತಾಲೂಕಿನ ಬೊಮ್ಮಸಂದ್ರ ಪುರಸಭೆ ವ್ಯಾಪ್ತಿಯ ವಿವಿಧ ವಾರ್ಡ್‌ಗಳಲ್ಲಿ ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆಯಡಿಯಲ್ಲಿ 180 ಲಕ್ಷ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಮತ್ತು ಚರಂಡಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಬೊಮ್ಮಸಂದ್ರ ಪುರಸಭೆ ಮುಖ್ಯಾಧಿಕಾರಿ ವೆಂಕಟೇಶ್ ಮಾತನಾಡಿ, ಬೊಮ್ಮಸಂದ್ರ ಪುರಸಭೆಯ ವಾರ್ಡ್ ನಂ.10, 16 ಮತ್ತು 23ರಲ್ಲಿ ಸಿಮೆಂಟ್ ರಸ್ತೆ, ಚರಂಡಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಲಾಯಿತು.

ಕಾರ್ಯಕ್ರಮದಲ್ಲಿ ಶಾಸಕರಿಗೆ ಸ್ಥಳೀಯರು ತಮ್ಮ ವ್ಯಾಪ್ತಿಯ ಸಮಸ್ಯೆಗಳ ಬಗ್ಗೆ ತಿಳಿಸಿದರು. ಪುರಸಭೆ ವ್ಯಾಪ್ತಿಯಲ್ಲಿ ನೀರಿನ ಸಮಸ್ಯೆ, ಸ್ಮಶಾನಕ್ಕೆ ತಡೆಗೋಡೆ ನಿರ್ಮಾಣ ಸೇರಿದಂತೆ ಅನೇಕ ಸಮಸ್ಯೆಗಳ ಬಗ್ಗೆ ಶಾಸಕರಿಗೆ ತಿಳಿಸಿದರು. ಈ ಎಲ್ಲಾ ಸಮಸ್ಯೆಗಳ ಕುರಿತು ಕ್ರಮವಹಿಸಲಾಗುವುದು ಎಂದು ಅವರು ಭರವಸೆ ನೀಡಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಲಿಂಗಣ್ಣ ಮಾತನಾಡಿ, ಆನೇಕಲ್ ತಾಲೂಕಿನ ರಸ್ತೆಗಳ ಅಭಿವೃದ್ಧಿಗೆ ಸರ್ಕಾರ 150 ಕೋಟಿ ಹಣ ಮಂಜೂರು ಮಾಡಿಸಲು ಶಾಸಕರು ಕ್ರಮವಹಿಸಿದ್ದಾರೆ. ಹಾಗಾಗಿ ಮುಂದಿನ ದಿನಗಳಲ್ಲಿ ಗ್ರಾಮೀಣ ಭಾಗದ ರಸ್ತೆಗಳ ಅಭಿವೃದ್ಧಿಪಡಿಸಲಾಗುವುದರ ಜತೆ ಬೊಮ್ಮಸಂದ್ರ ಪುರಸಭೆ ವ್ಯಾಪ್ತಿಯ ಎಲ್ಲಾ ವಾರ್ಡ್‌ಗಳಿಗೆ ಮೂಲ ಸೌಲಭ್ಯಗಳನ್ನು ಒದಗಿಸಲು ಕ್ರಮವಹಿಸಲಾಗಿದೆ ಎಂದರು. ಮುಖಂಡರಾದ ಗೋಪಾಲ್, ಬಗಹಳ್ಳಿ ಅಪ್ಪಿ, ಕಿತ್ತಗಾನಹಳ್ಳಿ ಆನಂದ್ ಬಾಬು, ರಾಮಚಂದ್ರ, ಸಂಪತ್, ಶ್ರೀನಿವಾಸ್, ಪುರಸಭಾ ಮುಖ್ಯಾಧಿಕಾರಿ ವೆಂಕಟೇಶ್, ಎಂಜಿನಿಯರ್ ಚಂದ್ರಶೇಖರ್ ಹಾಗೂ ಸಿಬ್ಬಂದಿ ಹಾಜರಿದ್ದರು.



ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ಕ್ರಮ

ಬೊಮ್ಮಸಂದ್ರ ಪುರಸಭೆ ವ್ಯಾಪ್ತಿಯ ವಾರ್ಡ್‌ಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಕ್ರಮ ವಹಿಸಬೇಕು. ಪುರಸಭೆಗಳು ನಿಯಮಿತವಾಗಿ ವಾರ್ಡ್ ಸಭೆಗಳನ್ನು ನಡೆಸಬೇಕು. ಇದರಿಂದ ಪ್ರತಿ ವಾರ್ಡ್‌ಗಳಲ್ಲಿನ ಸಮಸ್ಯೆಗಳ ಬಗ್ಗೆ ಮಾಹಿತಿ ಸಂಗ್ರಹಿಸಬಹುದು. ತಾಲೂಕಿನ ಹೆಬ್ಬಗೋಡಿ ನಗರಸಭೆ ಮತ್ತು ಚಂದಾಪುರ, ಬೊಮ್ಮಸಂದ್ರ ಪುರಸಭೆಗಳಲ್ಲಿ ಒಳಚರಂಡಿ ಕಾಮಗಾರಿ ಪ್ರಗತಿಯಲ್ಲಿದ್ದು, ಶೀಘ್ರದಲ್ಲಿ ಕಾಮಗಾರಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ. ತಾಲೂಕಿನ ರಸ್ತೆಗಳ ಗುಂಡಿ ಮುಚ್ಚಿಸಲು ಕ್ರಮ ವಹಿಸಲಾಗಿದೆ ಎಂದರು.



ಹೊಸಕೋಟೆ ತಾಲೂಕು ನಂದಗುಡಿ ಗ್ರಾಮದ ಪ್ರಸಿದ್ಧ ಶ್ರೀ ಕಾಡು ಮಲ್ಲೇಶ್ವರ ಸ್ವಾಮಿಗೆ ಅಧಿಕಮಾಸದ ಅಮಾವಾಸ್ಯೆ ಪ್ರಯುಕ್ತ ವಿಶೇಷ ಪೂಜೆ ಸಲ್ಲಿಸಲಾಯಿತು. ವಿವಿಧ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಯಿತು. ನಂದಗುಡಿ ಮತ್ತು ಸುತ್ತಮುತ್ತಲಿನ ಗ್ರಾಮಸ್ಥರು ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



ಹೊಸಕೋಟೆ ತಾಲೂಕು ನಂದಗುಡಿಯ ಗ್ರಾಮದೇವತೆ ಶ್ರೀ ಮುತ್ಯಾಲಮ್ಮ ದೇವಿಗೆ ಅಧಿಕಮಾಸದ ಅಮಾವಾಸ್ಯೆಯಾದ ಮಂಗಳವಾರ ಅಲಂಕಾರ ಮಾಡಿ ವಿಶೇಷ ಪೂಜೆ ಸಲ್ಲಿಸಲಾಯಿತು. ಮಹಾಮಂಗಳಾರತಿ, ತೀರ್ಥಪ್ರಸಾದ, ಅನ್ನದಾಸೋಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಪೂಜಾ ಕಾರ್ಯಕ್ರಮದಲ್ಲಿ ನಂದಗುಡಿ ಮತ್ತು ಸುತ್ತಮುತ್ತಲಿನ ಗ್ರಾಮಸ್ಥರು ಭಾಗವಹಿಸಿದ್ದರು.

ಅಭಿವೃದ್ಧಿ ಕಾರ್ಯ ಪರಿಶೀಲನೆ



• **ದೊಡ್ಡಬಳ್ಳಾಪುರ:** ತಾಲೂಕಿನ ಹಾಡೋನಹಳ್ಳಿ ಗ್ರಾಮ ಪಂಚಾಯಿತಿಗೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಸಿಇಒ ಡಾ.ವಾಸಂತಿ ಅಮರ್ ಬಿ.ವಿ. ಅವರು ಮಂಗಳವಾರ ಧಿಡೀರ್ ಭೇಟಿ ನೀಡಿ ವಿವಿಧ ಅಭಿವೃದ್ಧಿ ಕಾಮಗಾರಿಗಳು ಹಾಗೂ ಆಡಳಿತಾತ್ಮಕ ಕಾರ್ಯಗಳ ಪರಿಶೀಲನೆ ನಡೆಸಿದರು.

ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ನರೇಗಾ)ಗೆ ಸಂಬಂಧಿಸಿದ ಕಡತಗಳನ್ನು ಪರಿಶೀಲಿಸಿದ ಅವರು, ಯೋಜನೆಯ ಮಾರ್ಗಸೂಚಿಗಳು ಹಾಗೂ ಚೆಕ್ ಲಿಸ್ಟ್ ಪ್ರಕಾರ ದಾಖಲೆಗಳನ್ನು ನಿರ್ವಹಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಬಳಿಕ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನರೇಗಾ ಕಾಮಗಾರಿಗಳ ಸ್ಥಳ ಪರಿಶೀಲನೆ ನಡೆಸಿ, ಕಾಮಗಾರಿಗಳನ್ನು ನಿಯಮಾನುಸಾರ ಅನುಷ್ಠಾನಗೊಳಿಸಿ ಗುಣಮಟ್ಟ ಕಾಪಾಡಿಕೊಳ್ಳುವಂತೆ ನಿರ್ದೇಶನ ನೀಡಿದರು. ಇದೇ ವೇಳೆ ಗ್ರಾಮ ಪಂಚಾಯಿತಿಯಲ್ಲಿ ಕಂದಾಯ ವಸೂಲಾತಿ ಪ್ರಗತಿ ಕುರಿತು ಮಾಹಿತಿ ಪಡೆದ ಸಿಇಒ ಅವರು, ಸಿಬ್ಬಂದಿ ಹಾಜರಾತಿಯನ್ನು ಪರಿಶೀಲಿಸಿದರು. ಪಿಡಿಒ ಹಾಗೂ ಸಿಬ್ಬಂದಿ ಸರಿಯಾದ ಸಮಯಕ್ಕೆ ಕರ್ತವ್ಯಕ್ಕೆ ಹಾಜರಾಗಿ ಸಾರ್ವಜನಿಕರೊಂದಿಗೆ ಉತ್ತಮ ಒಡನಾಟ ಹೊಂದಿರಬೇಕು. ಸಾರ್ವಜನಿಕರಿಗೆ ಯಾವುದೇ ತೊಂದರೆ ಆಗದಂತೆ ಜವಾಬ್ದಾರಿಯುತವಾಗಿ ಕರ್ತವ್ಯ ನಿರ್ವಹಿಸಬೇಕು ಎಂದು ತಿಳಿಸಿದರು.

ಗ್ರಾಮ ಪಂಚಾಯಿತಿಯ ಆಡಳಿತ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ನಡೆಸುವಂತೆ ಅಧಿಕಾರಿಗಳಿಗೆ ಸಿಇಒ ಸೂಚನೆ ನೀಡಿದರು.

» ಹಾಡೋನಹಳ್ಳಿ ಗ್ರಾಪಂಗೆ ಇಒ ದಿಢೀರ್ ಭೇಟಿ

ಸಮಸ್ಯೆ ಆಲಿಸಿದ ಇಒ

ಅಧಿಕಾರಿಗಳು ಗ್ರಾಮಸ್ಥರಿಂದ ಕುಡಿಯುವ ನೀರು, ರಸ್ತೆ, ವಸತಿ ಯೋಜನೆ, ಪಿಂಚಣಿ, ಉದ್ಯೋಗ ಖಾತ್ರಿ ಹಾಗೂ ಮೂಲಸೌಕರ್ಯಗಳಿಗೆ ಸಂಬಂಧಿಸಿದ ಅರ್ಜಿಗಳನ್ನು ಸ್ವೀಕರಿಸಿ, ಪರಿಶೀಲನೆ ನಡೆಸಿದರು. ಸ್ಥಳದಲ್ಲೇ ಅನೇಕ ಸಮಸ್ಯೆಗಳನ್ನು ಆಲಿಸಿದ ನಂತರ, ಸಂಬಂಧಪಟ್ಟ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಮತ್ತು ಸಿಬ್ಬಂದಿಗೆ ತ್ವರಿತವಾಗಿ ಕ್ರಮ ಕೈಗೊಳ್ಳುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಪರಿವರ್ತನಾ ಕಲಾ ಸಂಸ್ಥೆ ಸಂಸ್ಥಾಪಕ ದೇವನಹಳ್ಳಿ ದೇವರಾಜ್ ಹೇಳಿಕೆ

ದುಡಿಮೆಗೆ ದೂಡಿ ಮಕ್ಕಳ ಕನಸು ಚಿವುಟಬೇಡಿ

• **ದೇವನಹಳ್ಳಿ:** ಮಕ್ಕಳು ಆಟವಾಡುತ್ತಾ ಪಾಠವನ್ನು ಕಲಿತು ಮುಂದಿನ ಭವಿಷ್ಯವನ್ನು ರೂಪಿಸಿಕೊಳ್ಳಲು ಶಿಕ್ಷಣ ಬಹು ಮುಖ್ಯ ಸಾಧನ, ಆದರೆ ಬಡತನ ಮತ್ತು ಬಲವಂತದಿಂದ ಪೋಷಕರು ಮಕ್ಕಳನ್ನು ದುಡಿಮೆಗೆ ದೂಡಿ ಅವರ ಹಕ್ಕುಗಳನ್ನು ಕಸಿದು ಅವರನ್ನು ಮೂಲೆಗುಂಪು ಮಾಡುವ ಹೀನ ಸಂಸ್ಕೃತಿ ನಮ್ಮ ಸಮಾಜದಲ್ಲಿ ಹಾಸುಹೊಕ್ಕಾಗಿದೆ ಈ ಪದ್ಧತಿಯನ್ನು ನಿರ್ಮೂಲನೆ ಮಾಡಲು ಎಲ್ಲರೂ ಕೈಜೋಡಿಸಬೇಕು ಎಂದು ಪರಿವರ್ತನಾ ಕಲಾ ಸಂಸ್ಥೆ ಸಂಸ್ಥಾಪಕ ಅಧ್ಯಕ್ಷ ನಟ ಮತ್ತು ನಿರ್ದೇಶಕರಾದ ಡಾ.ದೇವನಹಳ್ಳಿ ದೇವರಾಜ್ ತಿಳಿಸಿದರು.

ದೇವನಹಳ್ಳಿ ತಾಲೂಕು ಕಾನೂನು ಸೇವಾ ಸಮಿತಿ ಮತ್ತು ಮತ್ತು ಪರಿವರ್ತನಾ ಕಲಾ ಸಂಸ್ಥೆ ಟಿ.ಅಗ್ರಹಾರದೇವನಹಳ್ಳಿ ಸಹಯೋಗದಲ್ಲಿ ಚನ್ನರಾಯಪಟ್ಟಣ ಸರ್ಕಾರಿ ಪ್ರೌಢಶಾಲೆಯಲ್ಲಿ ಹಮ್ಮಿಕೊಂಡಿದ್ದ ಬಾಲಕಾರ್ಮಿಕ ವಿರೋಧಿ ದಿನಾಚರಣೆ ಅಂಗವಾಗಿ ಮಕ್ಕಳಿಗಾಗಿ ಏರ್ಪಡಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಮಕ್ಕಳ ಮನಸ್ಸು ಹೂವಿನ ತರ ಧನಾತ್ಮಕವಾಗಿ ಶಿಕ್ಷಣದಿಂದ ಪರಿಣಾಮ ಬೀರಿದರೆ ಮುಂದೊಂದು ದಿನ ದೇಶದ ರೂವಾರಿಗಳಾಗಿ ಉಜ್ವಲ ಭವಿಷ್ಯವನ್ನು ರೂಪಿಸಿಕೊಂಡು ದೇಶಕ್ಕೆ ಉತ್ತಮ ಪ್ರಜೆಯಾಗಿ ಹೊರಹೊಮ್ಮುತ್ತಾರೆ ಹಾಗಾಗಿ ಮಕ್ಕಳನ್ನು ದುಡಿಮೆಗೆ ದೂಡದೆ ಅವರ ಕನಸುಗಳನ್ನು ಚಿವುಟದೆ, ಶಿಕ್ಷಣದ ಮೂಲಕ ಸಾಕ್ಷರರನ್ನಾಗಿ ಮಾಡಲು ಎಲ್ಲರೂ ಕೈಜೋಡಿಸಬೇಕೆಂದು ಕರೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮುಖ್ಯಶಿಕ್ಷಕ ಮುನಿರಾಜು ಮಾತನಾಡಿ, ಬಾಲಕಾರ್ಮಿಕ ರಕ್ಷಣೆ ನಮ್ಮೆಲ್ಲರ ಹೊಣೆ ಕೇವಲ ಸರ್ಕಾರ, ಸಂಘ ಸಂಸ್ಥೆಗಳಿಗೆ ಸೀಮಿತವಲ್ಲ ಹಾಗಾಗಿ ಈ ಅನಿಷ್ಟ ಪದ್ಧತಿಗಳು ನಿಲ್ಲಲು ಮಕ್ಕಳ ಸರ್ವತೋಮುಖ ಅಭಿವೃದ್ಧಿ ಹೊಂದಲು ಶಿಕ್ಷಣದ ಮೂಲಕ ಪ್ರೋತ್ಸಾಹಿಸಬೇಕಾಗಿದೆ ಎಂದರು.



ಮಕ್ಕಳ ಹಕ್ಕುಗಳ ರಕ್ಷಣೆಗೆ ಸಹಾಯವಾಣಿ

ಮಕ್ಕಳ ಹಕ್ಕುಗಳ ರಕ್ಷಣೆಗೆ ಸರ್ಕಾರದ 1098 ಸಹಾಯವಾಣಿಗೆ ಕರೆ ಮಾಡಿ ಯಾವುದೇ ಕ್ಷೇತ್ರದಲ್ಲಿ ಮಕ್ಕಳು ದುಡಿಮೆ ಮಾಡುತ್ತಿರುವುದು ಕಂಡು ಬಂದರೆ ತಕ್ಷಣ ಸಹಾಯವಾಣಿಗೆ ಕರೆ ಮಾಡಿ ಮಕ್ಕಳ ಹಕ್ಕುಗಳ ರಕ್ಷಣೆ ಮಾಡಲು ಮುಂದಾಗಿ ದುಡಿಮೆಗೆ ದೂಡಲ್ಪಟ್ಟವರಿಗೆ ಕನಿಷ್ಠ ಆರು ತಿಂಗಳು ಜೈಲು ಶಿಕ್ಷೆ 10,000 ರೂ.ಗಳ ದಂಡ ಮೊದಲ ಬಾರಿಗೆ ವಿಧಿಸಲಾಗುತ್ತದೆ. ನಂತರದಲ್ಲಿ ಕಠಿಣ ಕಾನೂನು ಕ್ರಮವನ್ನು ಜರುಗಿಸಲಾಗುತ್ತದೆ. ಈ ನಿಟ್ಟಿನಲ್ಲಿ ವಿಶ್ವ ಬಾಲಕಾರ್ಮಿಕ ವಿರೋಧಿ ದಿನಾಚರಣೆ ಬಗ್ಗೆ ಮಾಹಿತಿಗಳನ್ನು ನೀಡಿ ಅರಿವು ಮೂಡಿಸುವುದರ ಮುಖಾಂತರ ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ ಎಂದರು.

ರಕ್ತದಾನಕ್ಕೆ ವೈದ್ಯರ ಸಲಹೆ ಅಗತ್ಯ

• **ನೆಲಮಂಗಲ:** ಟ್ಯಾಟೂ ಹಾಕಿಸಿಕೊಂಡವರು, ಇತ್ತೀಚೆಗೆ ಅನಾರೋಗ್ಯ ಹೊಂದಿದವರು ರಕ್ತದಾನ ಮಾಡಲು ವೈದ್ಯಕೀಯ ಸಲಹೆ ಹಾಗೂ ರಕ್ತಕೇಂದ್ರದ ಮಾರ್ಗಸೂಚಿಗಳನ್ನು ಪಾಲಿಸುವುದು ಅತ್ಯಂತ ಮುಖ್ಯ ಎಂದು ಬಿಜಿಎಸ್ ಎಂಸಿಹೆಚ್ ಆಸ್ಪತ್ರೆಯ ಮುಖ್ಯಸ್ಥ ಡಾ.ಕೃಷ್ಣಮೂರ್ತಿ ತಿಳಿಸಿದರು.

ನಗರದ ಅರಿಶಿನಕುಂಟೆಯ ನಾಗಲಿಂಗ ಬಿಜಿಎಸ್ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯ ಇಮ್ಯುನೋಹೆಮಟಾಲಜಿ ಮತ್ತು ರಕ್ತಸಂಚರಣೆ ವಿಭಾಗದ ವತಿಯಿಂದ ಆಯೋಜಿಸಲಾಗಿದ್ದ ವಿಶ್ವ ರಕ್ತದಾನಿಗಳ ದಿನಾಚರಣೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ರಕ್ತದಾನದ ಮಹತ್ವದ ಜೊತೆಗೆ ರಕ್ತದಾನಕ್ಕೆ ಸಂಬಂಧಿಸಿದ ಆರೋಗ್ಯ ಮಾರ್ಗಸೂಚಿಗಳನ್ನು ಎಲ್ಲರೂ ತಿಳಿದುಕೊಳ್ಳಬೇಕು. ಟ್ಯಾಟೂ ಹಾಕಿಸಿಕೊಂಡವರು, ಇತ್ತೀಚೆಗೆ ಅನಾರೋಗ್ಯ ಹೊಂದಿದವರು ಅಥವಾ ಕೆಲವು ಔಷಧಿಗಳನ್ನು ಸೇವಿಸುವವರು ರಕ್ತದಾನ ಮಾಡುವ ಮೊದಲು ವೈದ್ಯಕೀಯ ಸಲಹೆ ಹಾಗೂ ರಕ್ತಕೇಂದ್ರದ ಮಾರ್ಗಸೂಚಿಗಳನ್ನು ಪಾಲಿಸುವುದು ಅತ್ಯಂತ ಮುಖ್ಯ. ಸುರಕ್ಷಿತ ರಕ್ತದಾನದಿಂದ ರಕ್ತದಾನಿಯ ಆರೋಗ್ಯ ಕಾಪಾಡುವ ಜತೆ ರಕ್ತ ಸ್ವೀಕರಿಸುವ ರೋಗಿಗಳ ಸುರಕ್ಷತೆಯೂ ಖಚಿತವಾಗುತ್ತದೆ ಎಂದರು.



ಬಿಜಿಎಸ್ ಎಂಸಿಹೆಚ್ ಆಸ್ಪತ್ರೆ ಪ್ರಾಂಶುಪಾಲ ಡಾ.ಗಂಗಾಧರ್ ಮಾತನಾಡಿ, ನೆಲಮಂಗಲ ಸುತ್ತಮುತ್ತಲ ಭಾಗದ ಜನರಿಗೆ ರಕ್ತದಾನ, ರಕ್ತಘಟಕಗಳ ಸೇವೆ, ಸುರಕ್ಷಿತ ರಕ್ತಸಂಚರಣೆ ಹಾಗೂ ರೋಗಿಗಳಿಗೆ ಗುಣಮಟ್ಟದ ಸೇವೆಯನ್ನು ಒದಗಿಸಲು ಬಿಜಿಎಸ್ ರಕ್ತನಿಧಿ ಕೇಂದ್ರ ಸಹಕಾರಿಯಾಗಿದ್ದು ಬೆಂಗಳೂರಿನಲ್ಲಿ ಇಮ್ಯುನೋಹೆಮಟಾಲಜಿ ಮತ್ತು ರಕ್ತಸಂಚರಣೆ ವಿಭಾಗವನ್ನು ಆರಂಭಿಸಿದ ಮೊದಲ ಕಾಲೇಜು ಬಿಜಿಎಸ್ ಎಂಸಿಹೆಚ್ ಆಗಿದ್ದು ಗ್ರಾಮೀಣ ಜನರಿಗೆ ಬಹಳಷ್ಟು ಸಹಕಾರಿಯಾಗಲಿದೆ ಎಂದು ಹೇಳಿದರು.

ಕಾನೂನು ತಜ್ಞರ ಅಭಿಪ್ರಾಯ ಸಂಗ್ರಹ: ಆಯುಕ್ತ

• **ಬೆಂಗಳೂರು:** ನಗರದ ಏಳು ಮಂದಿಯನ್ನು ರೌಡಿ ಪಟ್ಟಿಯಿಂದ ಕೈಬಿಡಲಾಗಿರುವ ಬಗ್ಗೆ ಕಾನೂನು ತಜ್ಞರ ಅಭಿಪ್ರಾಯ ಪಡೆಯಲಾಗುವುದು ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ತಿಳಿಸಿದರು.

ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಗ್ಗೆ ರಾಜ್ಯದ ಪೊಲೀಸ್ ಮಹಾನಿರ್ದೇಶಕರೊಂದಿಗೆ ಸಮಾಲೋಚನೆ ನಡೆಸಲಾಗುವುದು. ಏಳು ರೌಡಿ ಶೀಟರ್‌ಗಳನ್ನು ಯಾವ ಕಾರಣಕ್ಕೆ ಕೈಬಿಡಲಾಗಿದೆ ಎಂಬುದರ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ. ಈ ಪ್ರಕ್ರಿಯೆಯಲ್ಲಿ ಪೊಲೀಸ್ ಇಲಾಖೆಯಿಂದ ಕರ್ತವ್ಯಲೋಪ ಆಗಿದೆಯೇ ಎಂಬುದನ್ನು ತನಿಖೆ ನಡೆಸಲಾಗುವುದು ಎಂದು ಹೇಳಿದರು. ರೌಡಿ ಶೀಟರ್‌ಗಳ ಹೆಸರನ್ನು ಪಟ್ಟಿಯಿಂದ ಕೈಬಿಟ್ಟಿರುವ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸುವ ಕುರಿತು ಚರ್ಚೆ ನಡೆಯುತ್ತಿದೆ. ನಗರದ ರೌಡಿಗಳ ಚಟುವಟಿಕೆಗಳು ನಿಯಂತ್ರಣದಲ್ಲಿವೆ. ರೌಡಿಗಳು ಬಾಲ ಬಿಚ್ಚದಂತೆ ಕಠಿಣ ಕ್ರಮ ಕೈಗೊಳ್ಳಲಾಗಿದೆ. ಅವರ ಮೇಲೆ ಸದಾ ಹದ್ದಿನ ಕಣ್ಣಿಡಲಾಗಿದೆ ಎಂದು ತಿಳಿಸಿದರು. ಮಾದಕ ವಸ್ತು ಸಾಗಣೆ ಹಾಗೂ ಮಾರಾಟದ ಮೇಲೆ ನಿಗಾ ವಹಿಸಲಾಗಿದೆ. ಅವುಗಳ ವಿರುದ್ಧ ನಿರಂತರ ಕಾರ್ಯಾಚರಣೆ ನಡೆಯುತ್ತಿದೆ ಎಂದರು. ಕಾಡುಗೋಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ ಬಾಲಕಿ ಕೊಲೆ ಪ್ರಕರಣ ಸೂಕ್ಷ್ಮ ವಿಚಾರವಾಗಿದೆ. ಬೇರೆ ವಿಭಾಗದ ಎಸಿಪಿ ನೇತೃತ್ವದಲ್ಲಿ ತನಿಖೆ ನಡೆಯುತ್ತಿದೆ. ವರದಿ ಬಂದ ನಂತರ ಇನ್ನಷ್ಟು ಮಾಹಿತಿಗಳು ಲಭ್ಯವಾಗಲಿವೆ ಎಂದು ತಿಳಿಸಿದರು.

ಅಷ್ಟಾಂಗ ಯೋಗ ಗುರು ರವಿ ಗುರೂಜಿ ಅಭಿಮತ

ಉನ್ನತ ವ್ಯಕ್ತಿಗಳಾಗಲು ಶಿಕ್ಷಣ ಸಹಕಾರಿ

• **ತಾವರೆಕೆರೆ:** ಸಾಮಾಜಿಕ, ಆರ್ಥಿಕ ಪರಿಸ್ಥಿತಿಗೆ ಹೆದರದೆ ಕಠಿಣ ಪರಿಶ್ರಮದಿಂದ ಓದಿದರೆ ಮುಂದೊಂದು ದಿನ ಸಮಾಜದ ಉನ್ನತ ವ್ಯಕ್ತಿಗಳಾಗಿ ರೂಪುಗೊಳ್ಳಬಹುದು ಎಂದು ಅಷ್ಟಾಂಗ ಯೋಗ ಗುರು ರವಿ ಗುರೂಜಿಯವರು ಹೇಳಿದರು.

ನಂದುಗುಡಿ ಸಮೀಪವಿರುವ ಚೀಮಂಗಲ ಗ್ರಾಮದ ಸರ್ಕಾರಿ ಕುವೆಂಪು ಪ್ರೌಢಶಾಲೆಯಲ್ಲಿ ಪ್ರಧಾನ ಅರ್ಚಕರಾದ ಸಿದ್ಧ ಬಸವರಾಜಯ್ಯನವರ ಹುಟ್ಟುಹಬ್ಬದ ಅಂಗವಾಗಿ ನಿವೃತ್ತ ಶಿಕ್ಷಕರಿಗೆ ಸನ್ಮಾನ, ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಸುಮಾರು 500 ಮಕ್ಕಳಿಗೆ ನೋಟ್ ಬುಕ್ ಮತ್ತು ಕಲಿಕಾ ಸಾಮಗ್ರಿಗಳ ವಿತರಣೆ, ಶಾಲೆಯ ಅಡುಗೆ ಮಹಿಳೆಯರಿಗೆ ಗೌರವ ಸಮರ್ಪಣೆ ಮತ್ತು ಧನ ಸಹಾಯ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಸರ್ಕಾರಿ ಶಾಲೆಗಳಿಗೆ ಮೂಲ ಸೌಕರ್ಯಗಳ ಜೊತೆಯಲ್ಲಿ ವಿದ್ಯಾರ್ಥಿಗಳಿಗೆ ಅವಶ್ಯವಿರುವ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳ ಕಲಿಕೋಪಕರಣಗಳು ಅತ್ಯವಶ್ಯಕವಾಗಿದ್ದು, ಇದಕ್ಕೆ ದಾನಿಗಳ ನೆರವು ಸಹ ಅಗತ್ಯವಾಗಿದ್ದು, ಸಮಾಜದಲ್ಲಿ ಉಳ್ಳವರು ಹಲವಾರು ಮಂದು ವೆಚ್ಚಗಳಿಗೆ ಹಣ ವ್ಯಯ ಮಾಡುತ್ತಾರೆ. ಆದರೆ ಅದೇ ಹಣವನ್ನು ಸರ್ಕಾರಿ ಶಾಲೆಯ ಮಕ್ಕಳ ಶೈಕ್ಷಣಿಕ ಚಟುವಟಿಕೆಗಳಿಗೆ ಬಳಕೆಯಾದರೆ ಬಹಳ ಉಪಯೋಗವಾಗುತ್ತದೆ ಎಂದರು. ನಿವೃತ್ತ ಶಿಕ್ಷಕರಾದ ನಾಗರಾಜಪ್ಪ ಮತ್ತು ಕಮಲಾರವರಿಗೆ ಗುರುವಂದನೆ ಸಲ್ಲಿಸಿ ಸನ್ಮಾನಿಸಲಾಯಿತು. ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಪಡೆದ ಐವರು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ನೆನಪಿನ ಕಾಣಿಕೆ ನೀಡಲಾಯಿತು. ಅಡುಗೆ ಮಹಿಳೆಯರಿಗೆ ಗೌರವ ಸಮರ್ಪಣೆ ಪ್ರೋತ್ಸಾಹಧನ ಮತ್ತು 500 ಮಕ್ಕಳಿಗೆ ನೋಟ್ ಬುಕ್, ಕಲಿಕಾ ಸಾಮಗ್ರಿಗಳನ್ನು ವಿತರಣೆ ಮಾಡಲಾಯಿತು.

ಪ್ರಧಾನ ಅರ್ಚಕ ಸಿದ್ದಬಸವರಾಜಯ್ಯ, ಅರ್ಚಕರಾದ ಸಿ.ಎಸ್.ಆದರ್ಶಕುಮಾರ್, ಅಭಿಲಾಷ್, ತಾಪಂ ಮಾಜಿ ಸದಸ್ಯ ಜಿ.ಮುನಿರಾಜ್, ಗ್ರಾಪಂ ಮಾಜಿ ಸದಸ್ಯ ಮಂಜುನಾಥ್ ಆಸ್ವಾಲಯ್ಯಪ್ಪ, ಎಸ್‌ಡಿಎಂಸಿ ಅಧ್ಯಕ್ಷ ಮುನಿಕೃಷ್ಣಪ್ಪ, ಸದಸ್ಯ ಉಮೇಶ್, ಮುಖ್ಯಶಿಕ್ಷಕ ವೆಂಕಟೇಶ್, ನವೀನ್‌ಕುಮಾರ್, ಸಹ ಶಿಕ್ಷಕರು, ಗ್ರಾಮಸ್ಥರು ಭಾಗವಹಿಸಿದ್ದರು.



ಖಾಸಗಿ ಅಪಾರ್ಟ್‌ಮೆಂಟ್‌ಗೆ ನೀರು ಸರಬರಾಜು: ಖಂಡನೆ

ಗ್ರಾಮಸ್ಥರಿಂದ ಹೋರಾಟದ ಎಚ್ಚರಿಕೆ

• **ದೊಡ್ಡಬಳ್ಳಾಪುರ:** ನಮ್ಮ ಗ್ರಾಮದ ನೀರಿನ ಟ್ಯಾಂಕಿನಿಂದ ಖಾಸಗಿ ಅಪಾರ್ಟ್‌ಮೆಂಟ್‌ಗೆ ನೀರಿನ ಸಂಪರ್ಕ ಕೊಡಲು ಸ್ಥಳೀಯ ಜನಪ್ರತಿನಿಧಿ ಹಾಗೂ ಬಾಶೆಟ್ಟಿಹಳ್ಳಿ ಪಟ್ಟಣ ಪಂಚಾಯಿತಿ ಮುಂದಾಗಿದೆ. ಈ ಪ್ರಯತ್ನ ಇಲ್ಲಿಗೆ ಕೈಬಿಡದೇ ಇದ್ದಲ್ಲಿ ಗ್ರಾಮಸ್ಥರು ಹೋರಾಟಕ್ಕೆ ಮುಂದಾಗಬೇಕಾಗುತ್ತದೆ ಎಂದು ಎಳ್ಳುಪುರ ಗ್ರಾಮದ ನಿವಾಸಿ ಮಧುಚಂದ್ರ ತಿಳಿಸಿದರು.

ಸ್ಥಳೀಯ ಸಮಸ್ಯೆ ಕುರಿತು ಎಳ್ಳುಪುರ ಕ್ರಾಸ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಈಗಾಗಲೇ ಎಳ್ಳುಪುರ ಗ್ರಾಮದಲ್ಲಿ ನೀರಿನ ಸಮಸ್ಯೆಗಳು ಹೆಚ್ಚಾಗಿದ್ದು ಗ್ರಾಮದಲ್ಲಿ ಬೋರ್‌ವೆಲ್ ಕೊರೆಸಿದರೆ ರಾಸಾಯನಿಕ ಮಿಶ್ರಿತ ನೀರು ಸಿಗುತ್ತಿದೆ. ಆದಕಾರಣ ಪಕ್ಕದ ದೇವನಹಳ್ಳಿ ತಾಲೂಕಿನ ಬುಳ್ಳಹಳ್ಳಿ ಗ್ರಾಮದಿಂದ ನಮ್ಮ ಗ್ರಾಮಕ್ಕೆ ನೀರಿನ ಸಂಪರ್ಕ ಕಲ್ಪಿಸಿಕೊಂಡಿದ್ದೇವೆ, ಈಗ ಲಭ್ಯವಾಗುತ್ತಿರುವ ನೀರು ನಮ್ಮ ಗ್ರಾಮಕ್ಕೆ ಸಾಕಾಗುತ್ತಿಲ್ಲ, ಸದ್ಯದ ಪರಿಸ್ಥಿತಿಯಲ್ಲಿ ಎರಡು ದಿನಗಳಿಗೊಮ್ಮೆ ನೀರು ಸರಬರಾಜು ಮಾಡುತ್ತಿದ್ದು ಗ್ರಾಮದಲ್ಲಿ ದಿನದಿಂದ ದಿನಕ್ಕೆ ಮನೆಗಳು ಹೆಚ್ಚಾಗುತ್ತಿದ್ದು ಜನಸಂಖ್ಯೆಯು ಹೆಚ್ಚುತ್ತಿದೆ. ನಮಗೆ ನೀರು ಸಾಕಾಗುತ್ತಿಲ್ಲ, ಇದರ ಹೊರತಾಗಿ ಪಟ್ಟಣ ಪಂಚಾಯಿತಿ ವತಿಯಿಂದ ಖಾಸಗಿ ಅಪಾರ್ಟ್‌ಮೆಂಟ್‌ಗಳಿಗೆ ನೀರಿನ ಸಂಪರ್ಕ ಕಲ್ಪಿಸುವುದು ಎಷ್ಟು ಸರಿ. ಮುಂಬರುವ ದಿನಗಳಲ್ಲಿ ಗ್ರಾಮಸ್ಥರು ನೀರಿನ ಅಭಾವದಿಂದಾಗಿ ತುಂಬಾ ತೊಂದರೆ ಎದುರಿಸಬೇಕಾದ ಪರಿಸ್ಥಿತಿ ಬರಲಿದೆ ಈ ಕುರಿತು ಪಟ್ಟಣ ಪಂಚಾಯಿತಿ ಗಮನ ಹರಿಸಬೇಕು ಎಂದರು.

ಸ್ಥಳೀಯ ನಿವಾಸಿ ಮುರಳಿ ಮಾತನಾಡಿ, ನಮ್ಮ ಗ್ರಾಮಕ್ಕೆ ನೀಡಬೇಕಿರುವ ನೀರನ್ನು ಖಾಸಗಿ ಅಪಾರ್ಟ್‌ಮೆಂಟ್‌ಗೆ ನೀಡಲು ಸ್ಥಳೀಯ ಜನಪ್ರತಿನಿಧಿ ಹಾಗೂ ಪಟ್ಟಣ ಪಂಚಾಯಿತಿ ಅಧಿಕಾರಿಗಳು ಮುಂದಾಗಿದ್ದಾರೆ. ನಮ್ಮ ಗ್ರಾಮಕ್ಕೆ ಹೆಚ್ಚಿನ ನೀರು ಹರಿಸಲು ಯೋಜನೆ ರೂಪಿಸಬೇಕು ಎಂದು ತಿಳಿಸಿದರು.

ಈ ವೇಳೆ ಚನ್ನೇಗೌಡ, ವಿನೋದ್, ಮಧುಚಂದ್ರ, ಮುರಳೀಗೌಡ ಸೇರಿದಂತೆ ಹಲವು ಪ್ರಮುಖರು ಮತ್ತು ಎಳ್ಳುಪುರ ಗ್ರಾಮಸ್ಥರು ಹಾಜರಿದ್ದರು.



ಪ.ಪಂ. ಎದುರು ಧರಣಿ

ನಮ್ಮ ಸಮಸ್ಯೆಯನ್ನು ಈಗಾಗಲೇ ಪಂಚಾಯಿತಿ ಗಮನಕ್ಕೆ ತಂದಿದ್ದೇವೆ, ಈ ಕುರಿತು ಎಳ್ಳುಪುರ ಗ್ರಾಮಸ್ಥರು ಮನವಿ ಕೂಡ ಸಲ್ಲಿಸಿದ್ದೇವೆ, ನಮ್ಮ ಮನವಿಗೆ ಬೆಲೆ ಕೊಡದೆ ಪಂಚಾಯಿತಿ ವತಿಯಿಂದ ಖಾಸಗಿ ಅಪಾರ್ಟ್‌ಮೆಂಟ್‌ಗೆ ನೀರಿನ ಸಂಪರ್ಕ ಕಲ್ಪಿಸಿದರೆ ಗ್ರಾಮಸ್ಥರು ಪಟ್ಟಣ ಪಂಚಾಯಿತಿ ಮುಂದೆ ಧರಣಿ ಕೂರುತ್ತೇವೆ ಎಂದು ಮಧುಚಂದ್ರ ಎಚ್ಚರಿಸಿದರು.

ಕಿರುಸುದ್ದಿ

ವೃದ್ಧೆ ಬೆದರಿಸಿ ಓಲೆ ಕಿತ್ತುಕೊಂಡ ಕಳ್ಳರು

• **ಹಲಗೂರು:** ಹೊಲದಲ್ಲಿ ಕೂಲಿ ಕೆಲಸ ಮಾಡುತ್ತಿದ್ದ ಮಹಿಳೆಯನ್ನು ಚಾಕುವಿನಿಂದ ಬೆದರಿಸಿ ಓಲೆ ಕಿತ್ತುಕೊಂಡ ಕಳ್ಳರನ್ನು ಸಾಗ್ಯ ಮತ್ತು ಅಂಕನಹಳ್ಳಿ ಗ್ರಾಮಸ್ಥರು ಹಿಡಿದು ಪೊಲೀಸರಿಗೊಪ್ಪಿಸಿದ ಘಟನೆ ನಡೆದಿದೆ. ಸಾಗ್ಯ ಗ್ರಾಮದ ವಾಸಿ ಕೃಷ್ಣಪ್ಪ ಎಂಬುವರ ಪತ್ನಿ ಶಾಂತಮ್ಮ ಎಂಬುವರಿಂದ ಓಲೆ ಕಾಡುಕೊಂಡಿದ್ದ ಕಳ್ಳರು. ಕೆಂಪೇಗೌಡ ಎಂಬುವರ ಜಮೀನಿನಲ್ಲಿ ಕೆಲಸ ಬಳಿಕ ಬದುವಿನಲ್ಲಿ ತಿಂಡಿ ತಿನ್ನುತ್ತಿದ್ದ ಸಂದರ್ಭದಲ್ಲಿ ಕಳ್ಳರು ಚಾಕು ತೋರಿಸಿ ಆಭರಣ ಕಳವಿಗೆ ಯತ್ನಿಸಿದ್ದಾರೆ.



ಕೆರೆಗೋಡು ಸಮೀಪದಲ್ಲಿರುವ ಶಿವಾರ ಗ್ರಾಮದ ಹೊಂಬಾಳಯ್ಯ, ಅಪ್ರಾಪ್ತ ಬಾಲಕ ಇಬ್ಬರೂ ಬಿಬ್ಬರು ಕೃತ್ಯದಲ್ಲಿ ಭಾಗಿಯಾಗಿ ಧೃಢಪಟ್ಟಲಾಗಿದೆ. ಶಾಂತಮ್ಮನಿಗೆ ಚಾಕು ತೋರಿಸಿ ಹೆದರಿಸಿ ಅವರ ಎರಡು ಕಿವಿಗಳಲ್ಲಿದ್ದ ಓಲೆಯನ್ನು ಕಿತ್ತುಕೊಂಡು ಪರಾರಿಯಾಗುತ್ತಿದ್ದರು. ಈ ಸಂದರ್ಭದಲ್ಲಿ ಅಕ್ಕಪಕ್ಕದ ಜಮೀನಿನವರು ಶಾಂತಮ್ಮ ಕೂಗಿದ್ದನ್ನು ಕೇಳಿಸಿಕೊಂಡು ತಕ್ಷಣ ಅಂಕನಹಳ್ಳಿ ಗ್ರಾಮಸ್ಥರಿಗೆ ದೂರವಾಣಿ ಮುಖಾಂತರ ವಿಷಯ ತಿಳಿಸಿದರು. ತಕ್ಷಣವೇ ಅಂಕನಹಳ್ಳಿ ಗ್ರಾಮಸ್ಥರು ಮತ್ತು ಸಾಗ್ಯ ಗ್ರಾಮಸ್ಥರು ಸೇರಿ ಕಳ್ಳರನ್ನು ಹಿಡಿದು ಪೊಲೀಸರಿಗೆ ವಿಷಯ ತಿಳಿಸಿದ ಮೇರೆಗೆ ಸ್ಥಳಕ್ಕೆ ಬಂದ ಸಬ್ ಇನ್ಸ್‌ಪೆಕ್ಟರ್ ಲೋಕೇಶ್ ಆರೋಪಿಗಳನ್ನು ವಶಕ್ಕೆ ಪಡೆದುಕೊಂಡರು. ಅವರ ಬಳಿ ಇದ್ದ ಓಲೆ, ಚಾಕು, ಸ್ಕೂಟರ್ ವಶಪಡಿಸಿಕೊಂಡರು. ಎಸ್ಪಿ ಶೋಭಾರಾಣಿ, ಡಿವೈಎಸ್ಪಿ ಯಶ್ವಂತ್, ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀಧರ್ ಭೇಟಿ ನೀಡಿ ಸ್ಥಳ ಪರಿಶೀಲಿಸಿ ತನಿಖೆ ಕೈಗೊಂಡಿದ್ದಾರೆ.

ಬಿತ್ತನೆ ಕಾರ್ಯದ ಸಿದ್ಧತೆಗೆ ತೀವ್ರ ಹಿನ್ನಡೆ: ಜೂನ್ ಕಳೆಯುತ್ತಿದ್ದರೂ ಬಿರುಸಾಗದ ಕೃಷಿ ಚಟುವಟಿಕೆ

ರೈತರಿಗೆ ಕೈಕೊಟ್ಟ ಪೂರ್ವ ಮುಂಗಾರು

▸ ಎನ್.ಕೃಷ್ಣೇಗೌಡ ಪಾಂಡವಪುರ

• **ಪಾಂಡವಪುರ:** ಮಂಡ್ಯ ಜಿಲ್ಲೆ ಪಾಂಡವಪುರ ತಾಲೂಕಿನಲ್ಲಿ ಪೂರ್ವ ಮುಂಗಾರು ಮಳೆಯ ಕೊರತೆಯಿಂದಾಗಿ ಬಿತ್ತನೆ ಕಾರ್ಯಕ್ಕೆ ತೀವ್ರ ಹಿನ್ನಡೆಯಾಗಿದೆ. ವಾಡಿಕೆಯಂತೆ ಏಪ್ರಿಲ್, ಮೇ ಜೂನ್ ತಿಂಗಳಲ್ಲಿ ಬಿರುಸುಗೊಳ್ಳಬೇಕಿದ್ದ ಕೃಷಿ ಚಟುವಟಿಕೆಗಳು ಮಳೆಯ ಕೊರತೆಯಿಂದಾಗಿ ಕುಂಠಿತಗೊಂಡಿದ್ದು, ರೈತರಲ್ಲಿ ಆತಂಕ ಮನೆ ಮಾಡಿದೆ.

ಅಂತರ್ಜಾಲದ ಕೊರತೆ ನಡುವೆಯೂ ತಾಲೂಕಿನಲ್ಲಿ ಕಳೆದ ಐದು ತಿಂಗಳಲ್ಲಿ ವಾಡಿಕೆಯಷ್ಟು ಮಳೆಯಾಗದೇ ಶೇ.16ರಷ್ಟು ಮಳೆ ಕೊರತೆಯಾಗಿದೆ. ಕೃಷಿ ಚಟುವಟಿಕೆಯ ಮೇಲೆ ಭಾರಿ ದುಷ್ಪರಿಣಾಮ ಬೀರಿದೆ.

ತಾಲೂಕಿನಲ್ಲಿ ಬಹುತೇಕ ರೈತರು ನೀರಾವರಿ ಭೂಮಿ ಹೊಂದಿದ್ದು, ಮೇಲುಕೋಟೆ ಹಾಗೂ ಚಿನಕುರಳಿ ಹೋಬಳಿ ರೈತರು ಮಳೆಯನ್ನೇ ಆಶ್ರಯಿಸಿ ಕೃಷಿ ಮಾಡುತ್ತಾರೆ. ಕೆಲವರು ವರ್ಷಕ್ಕೆ 2 ಬೆಳೆಯನ್ನು ಬೆಳೆದರೆ, ಇನ್ನು ಕೆಲವರು ಒಂದೇ ಫಸಲನ್ನು ನಂಬಿಕೊಂಡಿದ್ದಾರೆ. ಕಬ್ಬು, ಭತ್ತ, ರಾಗಿ, ಅಲಸಂದೆ, ಹುರಳಿ ಹಾಗೂ ಇನ್ನಿತರ ಮಳೆಯಾಶ್ರಿತ ಬೆಳೆಯನ್ನು ಹೆಚ್ಚಾಗಿ ಬೆಳೆಯುತ್ತಾರೆ. ಆದರೆ, ಇದೀಗ ತಾಲೂಕಿನಲ್ಲಿ ಪೂರ್ವ ಮುಂಗಾರು ಕೊರತೆಯ ಪರಿಣಾಮ ಬಿತ್ತನೆಯ ನಿರೀಕ್ಷೆಯಲ್ಲಿದ್ದ ಅನ್ನದಾತರಿಗೆ ಭಾರಿ ನಿರಾಸೆಯಾಗಿದೆ.

ಮುಂಗಾರು ವೈಫಲ್ಯ, ಬಿತ್ತನೆ ಕಾರ್ಯ ಕುಸಿತ: ತಾಲೂಕಿನಲ್ಲಿ ಪೂರ್ವ ಮುಂಗಾರು ಅವಧಿಯಲ್ಲಿ ವಾಡಿಕೆ 2200 ಹೆಕ್ಟೇರ್ ಬಿತ್ತನೆ ಗುರಿ ಹೊಂದಲಾಗಿತ್ತು. ಆದರೆ ಇದುವರೆಗೂ ತಾಲೂಕಿನಲ್ಲಿ ಕೇವಲ 1200 ಹೆಕ್ಟೇರ್‌ನಷ್ಟು ಮಾತ್ರ ಬಿತ್ತನೆಯಾಗಿದೆ. ಸುಮಾರು 1000 ಹೆಕ್ಟೇರ್ ನಷ್ಟು ಬಿತ್ತನೆಯಾಗಿರುವುದಿಲ್ಲ.

ತಿಂಗಳಾಂತ್ಯದೊಳಗೆ ಭತ್ತ ಬಿತ್ತನೆ ಮಾಡಲು ಸಾಧ್ಯವಾಗದಿದ್ದರೆ ರೈತರು ಪರ್ಯಾಯ ಬೆಳೆ ಬೆಳೆಯಬೇಕಾದ ಅನಿವಾರ್ಯತೆ ಸೃಷ್ಟಿಯಾಗಲಿದೆ. ಮಳೆ ವೈಫಲ್ಯ ಹಿನ್ನೆಲೆಯಲ್ಲಿ ಪೂರ್ವ ಮುಂಗಾರು ಬೆಳೆ ಅಲಸಂದೆ, ಹೆಸರು, ಉದ್ದು, ಎಳ್ಳು ಬಿತ್ತನೆ ಕುಂಠಿತವಾಗಿದೆ. ವಾಡಿಕೆ 200 ಹೆಕ್ಟೇರ್ ಬಿತ್ತನೆ ಆಗಬೇಕಿತ್ತು. 100 ಹೆಕ್ಟೇರ್ ಕಡಿಮೆ ಬಿತ್ತನೆಯಾಗಿದೆ. ತಾಲೂಕಿನಲ್ಲಿ ವಾಣಿಜ್ಯ ಬೆಳೆಯಾದ ಕಬ್ಬು ಬೆಳೆಯನ್ನು ರೈತರು ಹೆಚ್ಚಾಗಿ ಬೆಳೆಯುತ್ತಾರೆ. ಆದರೆ, ಈ ಬಾರಿ ಮಳೆ ಕೊರತೆಯಿಂದ ನೀರಿಲ್ಲದೆ ಕಬ್ಬು ಒಣಗುತ್ತಿದೆ.



ದಿಗಂತ ವಿಶೇಷ

ಪೂರ್ವ ಮುಂಗಾರು ಅವಧಿಯಲ್ಲಿ ದ್ವಿದಳ ಹಾಗೂ ಏಕದಳ ಧಾನ್ಯಗಳಾದ ಉದ್ದು, ಹೆಸರು, ಅಲಸಂದೆ, ತೊಗರಿ ಬೆಳೆಯಲಾಗುತ್ತಿದ್ದು ಇವುಗಳ ಮೇಲೂ ಮಳೆ ಕೊರತೆ ಪರಿಣಾಮ ಬೀರಿದೆ. ಒಟ್ಟಾರೆ ಪೂರ್ವ ಮುಂಗಾರು ಅವಧಿಯಲ್ಲಿ ತಾಲೂಕಿನ ಒಟ್ಟು ಬಿತ್ತನೆ ಗುರಿಯು ನಿರೀಕ್ಷಿತ ಹಂತ ತಲುಪಲು ಸಾಧ್ಯವಾಗಿಲ್ಲ.

ಪೂರ್ವ ಮುಂಗಾರು ಪ್ರಾರಂಭವಾಗಿ ತಾಲೂಕಿನಲ್ಲಿ ಕೃಷಿ ಚಟುವಟಿಕೆ ಈ ವೇಳೆಗಾಗಲೇ ಗರಿಗೆದರಬೇಕಿತ್ತು. ಮಳೆ ಕೈಕೊಟ್ಟಿರುವ ಕಾರಣ ಬಿತ್ತನೆ ಕಾರ್ಯ ಕುಂಟುತ್ತಾ ಸಾಗುತ್ತಿದೆ. ಇನ್ನೊಂದೆಡೆ ಕೆಆರ್ ಎಸ್ ಜಲಾಶಯದಲ್ಲೂ ನೀರು ಕೂಡ ದಿನೇ ದಿನೇ ತಳಮಟ್ಟ ತಲುಪುತ್ತಿರುವುದು ರೈತರಲ್ಲಿ ಆತಂಕದ ಛಾಯೆ ಮೂಡಿದೆ. ಇದು ಹೀಗೆಯೇ ಮುಂದುವರೆದರೆ ಈ ವರ್ಷ ಬರದ ಛಾಯೆ ಆವರಿಸುವ ಎಲ್ಲಾ ಲಕ್ಷಣಗಳು ಗೋಚರಿಸುತ್ತಿವೆ.

> ಮುಂಗಾರು ಪ್ರಾರಂಭವಾಗಿ ಇಷ್ಟರಲ್ಲಿ ಕೃಷಿ ಚಟುವಟಿಕೆ ಚುರುಕುಗೊಳ್ಳಬೇಕಾಗಿತ್ತು. ಮಳೆ ಕೈಕೊಟ್ಟಿರುವ ಕಾರಣ ಬಿತ್ತನೆ ಕಾರ್ಯ ಕುಂಟುತ್ತಾ ಸಾಗುತ್ತಿದೆ. ಕೆಆರ್ ಎಸ್ ಜಲಾಶಯದ ನೀರು ಕೂಡ ದಿನೇ ದಿನೇ ತಳಮಟ್ಟ ತಲುಪುತ್ತಿರುವುದು ರೈತರಲ್ಲಿ ಆತಂಕ ಮೂಡಿದೆ. ಈ ವರ್ಷ ಬರದ ಛಾಯೆ ಆವರಿಸುವ ಎಲ್ಲಾ ಲಕ್ಷಣಗಳು ಗೋಚರಿಸುತ್ತಿವೆ. ಸರ್ಕಾರ ರೈತರಿಗೆ ಪೂರ್ವ ಮುಂಗಾರು ವೈಫಲ್ಯ ಹಿನ್ನೆಲೆಯಲ್ಲಿ ಸಂಕಷ್ಟಕ್ಕೊಳಗಾಗಿರುವ ರೈತರಿಗೆ ಪರಿಹಾರ ಘೋಷಿಸಬೇಕು.
>
> ■ ವೈ.ಪಿ.ಮಂಜುನಾಥ್ ರೈತಸಂಘದ ತಾಲೂಕು ಅಧ್ಯಕ್ಷ



ಬಿತ್ತನೆ ಬೀಜ ವಿವರ

ಪಾಂಡವಪುರ ತಾಲೂಕಿನಲ್ಲಿ ಅಲಸಂದೆ ಬಿತ್ತನೆ ಬೀಜ 15 ಕ್ವಿಂಟಾಲ್ ದಾಸ್ತಾನಿದ್ದು, 10.8ಕ್ವಿಂಟಾಲ್ ಮಾರಾಟವಾಗಿ 4.2 ಕ್ವಿಂಟಾಲ್ ದಾಸ್ತಾನು ಬಾಕಿ ಇದೆ. ರಾಗಿ 7.6ಕ್ವಿಂಟಾಲ್ ದಾಸ್ತಾನಿದ್ದು, 0.8ಕ್ವಿಂಟಾಲ್ ಮಾರಾಟವಾಗಿ 6.4 ಕ್ವಿಂಟಾಲ್ ದಾಸ್ತಾನು ಬಾಕಿ ಇದೆ. ಮುಸುಕಿನ ಜೋಳ 7ಕ್ವಿಂಟಾಲ್ ದಾಸ್ತಾನಿದ್ದು, 0.90 ಕ್ವಿಂಟಾಲ್ ಮಾರಾಟವಾಗಿ 6.10 ಕ್ವಿಂಟಾಲ್ ದಾಸ್ತಾನು ಬಾಕಿ ಇದೆ.

> ಮುಂಗಾರು ಹಂಗಾಮಿಗಾಗಿ 31,053 ಮೆಟ್ರಿಕ್ ಟನ್ ರಸಗೊಬ್ಬರ ದಾಸ್ತಾನು ಮಾಡಲಾಗಿದ್ದು, ಜಿಲ್ಲೆಯಲ್ಲಿ ಇನ್ನೂ ಬಿತ್ತನೆ ಕಾರ್ಯ ಆರಂಭವಾಗದ ಕಾರಣ ಈ ಬಾರಿ ರಸಗೊಬ್ಬರಕ್ಕೆ ಕೊರತೆ ಎದುರಾಗುವುದಿಲ್ಲ. ಜುಲೈ 15ರ ನಂತರ ರಸಗೊಬ್ಬರ ಬಳಕೆಯಾಗಲಿದೆ.
>
> ■ ವಿ.ಎಸ್.ಅಶೋಕ್ ಜಂಟಿ ಕೃಷಿ ನಿರ್ದೇಶಕ

ಶೇ. 16ರಷ್ಟು ಮಳೆ ಕೊರತೆ: ಹವಾಮಾನ ಇಲಾಖೆಯ ಅಂಕಿ ಅಂಶಗಳನ್ನು ಗಮನಿಸಿದರೆ ತಾಲೂಕಿನಲ್ಲಿ ಜ.1ರಿಂದ ಜೂ.4ರವರೆಗೆ ಸರಾಸರಿ 207.2 ಮಿ.ಮೀ ವಾಡಿಕೆ ಮಳೆ ಸುರಿಯಬೇಕಿತ್ತು. ಆದರೆ ಈ ವರ್ಷ ಶೇ.174.4 ಮಿ.ಮೀ ಸುರಿದಿದ್ದು ಶೇ.16ರಷ್ಟು ಕೊರತೆ ಉಂಟಾಗಿದೆ. ಜೂನ್ ಮಾಹೆಯಲ್ಲಿ (ಜೂ.1ರಿಂದ 8ರವರೆಗಿನ ಅಂಕಿ ಅಂಶ) ಇಡೀ ಜಿಲ್ಲೆಯಲ್ಲಿ ಶೇ.6ರಷ್ಟು ಮಳೆ ಕೊರತೆಯಾಗಿದ್ದರೆ, ಪಾಂಡವಪುರ ತಾಲೂಕಿನಲ್ಲಿ ಶೇ.56ರಷ್ಟು ಹೆಚ್ಚುವರಿ ಮಳೆಯಾಗಿದೆ. ಆದರೆ ಕಸಬಾ ಹೋಬಳಿಯಲ್ಲಿ ಮಳೆ ಕೊರತೆಯಾಗಿದೆ ಎಂದು ಕೃಷಿ ಅಧಿಕಾರಿಗಳು ತಿಳಿಸಿದ್ದಾರೆ.

ರೈತರಿಗೆ ಚಿತ್ರನಮನ ಕಲಾಶಿಬಿರ: ಸುನಿತಾ ಪುಟ್ಟಣ್ಣಯ್ಯ ವಿಷಾದ

ಪುಸ್ತಕ ರೂಪದಲ್ಲಿ ಬಾರದ ರೈತ ಹೋರಾಟ

• **ಮೇಲುಕೋಟೆ:** ರೈತ ಚಳುವಳಿ ಮತ್ತು ಹೋರಾಟಗಾರರ ಜೀವನ ಚಿತ್ರಣವನ್ನು ಚಿತ್ರಕಲೆಯ ಮೂಲಕ ದಾಖಲಿಸುತ್ತಿರುವುದು ಶ್ಲಾಘನೀಯ ಕಾರ್ಯವಾಗಿದೆ ಎಂದು ರೈತನಾಯಕಿ ಸುನಿತಾ ಪುಟ್ಟಣ್ಣಯ್ಯ ತಿಳಿಸಿದರು.

ಅವರು ಮೇಲುಕೋಟೆಯಲ್ಲಿ ಕರ್ನಾಟಕ ಲಲಿತ ಕಲಾ ಅಕಾಡೆಮಿ ಕರ್ನಾಟಕರಾಜ್ಯ ರೈತಸಂಘದ ಪಾಂಡವಪುರ ತಾಲೂಕು ಘಟಕ ಮತ್ತು ಕರ್ನಾಟಕ ಸಂಸ್ಕೃತಿಪಿ ಸಹಯೋಗದಲ್ಲಿ ಹಮ್ಮಿಕೊಂಡಿರುವ ರೈತರ ಬದುಕು ಹೋರಾಟ ಚಳುವಳಿಯ ಚಿತ್ರದಾಖಲೆಯ ರೈತರಿಗೆ ಚಿತ್ರನಮನ ಕಲಾಶಿಬಿರ ಉದ್ಘಾಟಿಸಿ ಮಾತನಾಡಿ, ರಾಜ್ಯಸರ್ಕಾರ, ಕೇಂದ್ರ ಸರ್ಕಾರವಾಗಲಿ ರೈತಹೋರಾಟವನ್ನು ದಾಖಲೀಕರಣ ಮಾಡಿಲ್ಲ. ರೈತರಿಗೆ ಜಾಗೃತಿಮೂಡಿಸುತ್ತಿಲ್ಲ. ರೈತರ ಬದುಕಿನ ಉನ್ನತಿಗೆ ಹೆಚ್ಚಿನ ಕಾಳಜಿವಹಿಸಿಲ್ಲ. ರೈತರ ಬದುಕನ್ನು ಯಾರೂ ನೆನಪಿಸಿಕೊಳ್ಳುವುದಿಲ್ಲ. ಆದರೆ ಕರ್ನಾಟಕ ಲಲಿತಕಲಾ ಅಕಾಡೆಮಿ ರೈತರ ಚಳುವಳಿ ಹೋರಾಟದ ಬದುಕಿನ ಚಿತ್ರ ದಾಖಲೆಮಾಡುತ್ತಿರುವುದು ರೈತಕುಟುಂಬಕ್ಕೆ ನೀಡಿದ ಗೌರವ ಎಂದೇ ಭಾವಿಸುತ್ತೇನೆ ಎಂದರು.

ರೈತನಾಯಕ ಗೋವಿಂದೇಗೌಡ ಮಾತನಾಡಿ, ಪರಿಸರ ಸಂರಕ್ಷಣೆಯನ್ನು ಪ್ರಧಾನವಾಗಿಟ್ಟುಕೊಂಡು ಹೋರಾಟ ಮಾಡಿದೆ ಅರಣ್ಯ ಇಲಾಖೆ ಯಾರಿಗೂ ಲಾಭಮಾಡಿಕೊಡುವ ಸಲುವಾಗಿ ಎಲ್ಲಾ ಹಳ್ಳಿಗಳಲ್ಲೂ ನೀಲಗಿರಿ ಮರವನ್ನು ನೆಟ್ಟು ಪರಿಸರ ನಾಶಮಾಡಿತು ಇಂತಹ ಸಂದರ್ಭದಲ್ಲಿ ಇದರ ವಿರುದ್ಧ ದನಿಎತ್ತಿ ಪರಿಸರ ಉಳಿಸಲು ರೈತಸಂಘ ಹೋರಾಟ ಮಾಡಿದೆಂದರು.

ಅಂತಹದಿಗಳ ಭ್ರಷ್ಟಾಚಾರದ ವಿರುದ್ಧ ರೈತಸಂಘ ಹೋರಾಟ ಮಾಡಿದೆ. ರೈತ ದೇಶದ ಬೆನ್ನೆಲುಬು ಎಂದು ಹೇಳುತ್ತಾ ರಾದರೂ ಯಾವುದೇ ಸರ್ಕಾರ ರೈತರ ಬದುಕನ್ನು ಹಸನು ಮಾಡುವ ಕಾರ್ಯಕ್ರಮ ರೂಪಿಸಿಲ್ಲ. ರೈತಬೆಳೆದ ಬೆಳೆಗಳಿಗೆ ಸೂಕ್ತವಾದ ಬೆಂಬಲ ಬೆಲೆಸಿಗದ ಕಾರಣ ರೈತರು ಇಂದಿಗೂ ತಮ್ಮ ಉತ್ಪನ್ನ ಮಾರಾಟಮಾಡಲು ದಳ್ಳಾಳಿಗಳನ್ನೇ ಅವಲಂಬಿಸಬೇಕಾಗಿದೆ ಅದಕ್ಕಾಗಿಯೇ ಕಾಲಕಾಲಕ್ಕೆ ರೈತಸಂಘ ರೈತರ ಪರವಾಗಿ ಕೆಲಸಮಾಡುತ್ತಾ ಬಂದಿದೆ ಎಂದರು.



ರೈತ ಸಂಘದ ಜಿಲ್ಲಾಧ್ಯಕ್ಷ ಕೆಂಪೂಗೌಡ ಮಾತನಾಡಿ ರೈತ ಸಂಘ ಸಕ್ರಿಯವಾಗಿ ದೊಡ್ಡ ದೊಡ್ಡ ಚಳುವಳಿಮಾಡಿದೆ ಉಗಿಯುವ ಚಳುವಳಿ, ನಗುವಚಳುವಳಿ, ಪಂಜಿನ ಮೆರವಣಿಗೆ ಬೃಹತ್ ಪಾದಯಾತ್ರೆ ಸೇರಿದಂತೆ ಎಲ್ಲಾ ರೀತಿಯ ದೊಡ್ಡಮಟ್ಟದ ಹೋರಾಟಮಾಡಿದ್ದೇವೆ. ಆದರೆ, ಯಾವುದೇ ಹೋರಾಟಗಳೂ ದಾಖಲೀಕರಣ ಮಾಡಲಾಗಿಲ್ಲ. ಮೇಲುಕೋಟೆಯಲ್ಲಿ ಚಿತ್ರಕಲೆಯಮೂಲಕ ಚಳುವಳಿ ಬದುಕು ಹೋರಾಟ ಪ್ರಥಮಭಾರಿಗೆ ದಾಖಲೀಕರಣ ವಾಗುತ್ತಿದೆಂದರು. ಕೆ.ಎಸ್.ಪುಟ್ಟಣ್ಣಯ್ಯ ನಾಯಕತ್ವದಲ್ಲಿ ಹೋರಾಟದ ಮುಂಚೂಣಿಯಲ್ಲಿದ್ದ ಗೋವಿಂದೇಗೌಡರು ಮತ್ತು ನಾವು ಬದುಕಿದ್ದೇವೆ 80ರಿಂದ ಈವರೆಗಿನ ಎಲ್ಲಾ ಹಂತ ವನ್ನು ಸಮಗ್ರವಾಗಿ ದಾಖಲೀಕರಣಮಾಡಿ ಪುಸ್ತಕ ಹೊರತರು ತ್ತೇವೆಂದರು.

ಸಮಾರಂಭದ ಅಧ್ಯಕ್ಷತೆವಹಿಸಿದ್ದ ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಚಿಕ್ಕಂದಿನಿಂದ ನಮ್ಮ ತಂದೆಯವರು ದ್ಯಾಗಿನಿಂದಲೂ ರೈತ ಸಂಘದ ಹೋರಾಟ ಗೊತ್ತಿದೆ. ರೈತ ಸಂಘದ ಕೆಲಸ ಅದೊಂದು ತ್ಯಾಗಜೀವನವಾಗಿದೆ ರೈತ ಹೋರಾಟಗಾರರು ಇಡೀ ಜೀವನ ಬಿಟ್ಟು ತಿಂಗಳುಗಟ್ಟಲೆ ಮನೆಯಿಂದ ಹೊರಗೆ ಉಳಿದು ರೈತರ ಬದುಕು ಹಸನು ಮಾಡಲು ಶ್ರಮಿಸಿದ್ದಾರೆ. ರೈತಸಂಘ ಹೋರಾಟಕ್ಕೆ ಮಾತ್ರ ಸೀಮಿತವಾಗಬಾರದೆಂದರು.

ವೇದಿಕೆಯಲ್ಲಿ ರೈತನಾಯಕ ಕೆ.ಎಸ್.ಪುಟ್ಟಣ್ಣಯ್ಯ ಪ್ರತಿಮೆಯಿಟ್ಟು ಅವರ ಹೋರಾಟದ ಬದುಕು ಜೀವನಶೈಲಿ ಅನುಭವಿಸಿದ ಜೀವನಚಿತ್ರಣವನ್ನು ಸ್ಮರಿಸಲಾಯಿತು ಇದೇ ವೇಳೆ ರೈತಹೋರಾಟಗಾರರಾದ ನಂಜುಂಡಸ್ವಾಮಿ ಇತರ ನಾಯಕರ ಭಾವಚಿತ್ರಗಳನ್ನು ಪ್ರದರ್ಶಿಸಲಾಗಿತ್ತು.

ಯುವಪೀಳಿಗೆಯಲ್ಲಿ ನಾಯಕತ್ವ ಗುಣ ಬೆಳೆಯಲಿ: ಪರಮೇಶ್

• **ಮಳವಳ್ಳಿ:** ದಾರಿ ತಪ್ಪುತ್ತಿರುವ ಯುವಕರ ಸಬಲೀಕರಣಗೊಳಿಸುವುದರ ಜತೆಗೆ ನಾಯಕತ್ವದ ಗುಣ ಬೆಳೆಸುವಲ್ಲಿ ಯುವ ಪರಿಷತ್ ಸಹಕಾರಿಯಾಗಿದೆ ಎಂದು ಜಿಲ್ಲಾ ಪರಿಷತ್ ಜಿಲ್ಲಾಧ್ಯಕ್ಷ ಎಸ್.ಪರಮೇಶ್ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಯುವ ಪರಿಷತ್ ತಾಲೂಕು ಮಟ್ಟದ ಯುವ ಪದಾಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಯುವಕರಲ್ಲಿ ಆತ್ಮವಿಶ್ವಾಸ ಹೆಚ್ಚಿಸುವುದು ಭವಿಷ್ಯದ ಸಮಾಜದ ಜವಾಬ್ದಾರಿಯುತ ನಾಯಕರನ್ನು ರೂಪಿಸುವ ಉದ್ದೇಶದಿಂದ ತಾಲೂಕು ಮಟ್ಟದ ಯುವ ಪರಿಷತ್ ಘಟಕವನ್ನು ಆರಂಭಿಸಲಾಗುತ್ತಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಯುವಕರು ಸದಸ್ಯರಾಗುವುದರ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿ ಉತ್ತಮ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕೆಂದು ಹೇಳಿದರು.



ಉಪಾಧ್ಯಕ್ಷ ಎಸ್.ಎಂ.ಕುಮಾರ್ ಮಾತನಾಡಿ, ಯುವಕರ ಕೌಶಲ್ಯಗಳನ್ನು ಹೆಚ್ಚಿಸಲು ತರಬೇತಿ ಕಾರ್ಯಾಗಾರ, ಕೌಶಲ್ಯ ಅಭಿವೃದ್ಧಿಯ ಜೊತೆಗೆ ಶಿಕ್ಷಣ, ಆರೋಗ್ಯ, ಕೃಷಿ ಸೇರಿದಂತೆ ಇತರೆ ವಿಷಯಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು, ಸರ್ಕಾರದ ಯೋಜನೆಗಳನ್ನು ಜನರಿಗೆ ತಿಳಿಸುವ ಪ್ರಯತ್ನ ಸೇರಿದಂತೆ ಸಾಮಾಜಿಕ ಕಾರ್ಯಗಳನ್ನು ಯುವ ಪರಿಷತ್ ಮುಂದುವರೆಸಿಕೊಂಡು ಬರುತ್ತಿದ್ದು, ಮುಂದಿನ ದಿನಗಳಲ್ಲಿ ಯುವಕರಿಗೆ ಜವಾಬ್ದಾರಿಯನ್ನು ಹೆಚ್ಚಿಸುವ ರೀತಿಯಲ್ಲಿ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತದೆ ಎಂದರು.

ಪದಾಧಿಕಾರಿಗಳ ಆಯ್ಕೆ: ಯುವ ಪರಿಷತ್ ತಾಲೂಕು ಅಧ್ಯಕ್ಷರಾಗಿ ರಮೇಶ್, ಉಪಾಧ್ಯಕ್ಷರಾಗಿ ಸಿದ್ದರಾಜು, ಕಾರ್ಯದರ್ಶಿ ದೊಡ್ಡಮಹದೇವ್, ಸಹಕಾರ್ಯದರ್ಶಿ ರಾಜೇಶ್, ಸಂಘಟನಾ ಕಾರ್ಯದರ್ಶಿ ಸಿದ್ದಾರ್ಥ್, ಕ್ರೀಡಾ ಕಾರ್ಯದರ್ಶಿ ಮನೋಜ್‌ಕುಮಾರ್, ನಿರ್ದೇಶಕರಾಗಿ ಪವನ್, ಸಂತೋಷ್ ಅವರನ್ನು ಆಯ್ಕೆ ಮಾಡಲಾಯಿತು.

PUBLIC NOTICE

Our client, **Mr. R.M. PALANIAPPAN**, R/at No.39, 17th Main, Vijayanagar, Bangalore-560 040, represents that, he had lost the 1. Original sale deed dated 03-12-1977, registered in Book No.1, Vol.No.513, pages 25, as document No.3052/1977-78, at the SRO, Srirampuram, Bangalore, 2. Original sale deed dated 31-05-1978, registered in Book No.1, Vol.No. 575, pages 116-117, as document No.762/1978-79, at the SRO, Srirampuram, Bangalore.

Notice is hereby given to all the general public that whoever find the above mentioned original documents, may kindly inform/ contact the undersigned within **7 days** of publication of this notice. After the said period, my client will treat the above original documents as lost permanently and will take further steps in accordance with law as he deems fit.

Note: This Publication is given in accordance with the Police Complaint dated 16-06-2026. Lost Report No. 2256982 filed before the Karnataka Police, Bangalore City.

ADDRESS: **N.M. BHAT & ASSOCIATES**
Advocates
No.64, 71st Cross, 5th Block, Rajajinagara, Bangalore-10. Phone No. 9448129256
Place : Bangalore Date : 16.06.2026

IN THE COURT OF THE PRINCIPAL CIVIL JUDGE AND JMFC AT ANEKAL

C.MIS. No. 935/2026

BETWEEN : 1. SRI. RAMASWAMY REDDY S/o Late Chowda Reddy Aged about 86 years, **2. SMT. NANJAMMA** D/o Late Chowda Reddy Aged about 79 years, **3. SMT. KANTHAMMA** D/o Late Chowda Reddy Aged about 74 years, **4. SMT. INDRAMMA** D/o Late Chowda Reddy Aged about 70 years Petitioners all are R/at No. 39, Nekkundi Village, Sarjapura Hobli, Anekal Taluk, Bangalore District 562087. ...PETITIONERS

AND : THE THAHASILDAR, Anekal Town and Taluk Bangalore District. ...RESPONDENT

PUBLIC NOTICE

Whereas, the Petitioners have instituted the above petition for seeking death certificate of their elder sister namely **Late Sharadamma D/o Late Chowda Reddy was died on dated: 02.09.1997** in Petitioners home at No. 39, Nekkundi Village, Sarjapura Hobli, Anekal Taluk, Bangalore District.

You are hereby informed to appear before this Hon'ble court, in person or by pleader duly instructed and able to answer material question relating to suit or you shall be accompanied by person to answer all such questions **on 17th day of July 2026 at 11-00 A.M** in the said case at Principal Civil Judge and JMFC at Anekal.

Take notice in default of your appearance on the date before mentioned the suit will be heard and determined in your absence.

Given under my hand and seal of the court this 15th day of June 2026 at Anekal.

By Order of the Court, Sheristedar, Civil Judge (Jr.Dn), and JMFC, Anekal
L.N. RAJU, Advocate
No. 7, Advaita Law Firm, Uma Complex, Near MW Tyres Anekal Town, Bangalore - 562106.

ಜಾಹೀರಾತಿಗಾಗಿ ಸಂಪರ್ಕಿಸಿ:
9845438807,9611755391

ಕರ್ನಾಟಕ ಸರ್ಕಾರ

ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ

ಉರ್ವಾಸ್ಟೋರ್ಸ್, ಅಶೋಕನಗರ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ

ಸಂಖ್ಯೆ: ಮನಪ್ರಾ/ಕಾಂತ್ರಿ/ಟೆಂ(32):2026-27 ದಿನಾಂಕ: 16-06-2026

ಟೆಂಡರು ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ http://kppp.karnataka.gov.in ನಲ್ಲಿ ಆಯುಕ್ತರು, ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು ಇವರು ಅರ್ಹ ಗುತ್ತಿಗೆದಾರರಿಂದ Standard Tender Document KW-1 & 2 ರ ಪ್ರಕಾರ ಆಹ್ವಾನಿಸಲಾಗುತ್ತದೆ. ಟೆಂಡರುದಾರರು ಟೆಂಡರ್ ನಿಯಮಾವಳಿಯಂತೆ ಕನಿಷ್ಠ ಅರ್ಹತೆಯನ್ನು ಪಡೆದಿರಬೇಕು ಎಂಬುದನ್ನು ಗಮನಿಸಲು ಸೂಚಿಸಲಾಗಿದೆ. ಟೆಂಡರುದಾರರು ಕರ್ನಾಟಕ ಸರಕಾರದ ಕೆಪಿಪಿ ಪೋರ್ಟಲ್ ಅಂತರ್ಜಾಲದ ಮುಖಾಂತರ ಟೆಂಡರು ದಾಖಲೆಗಳನ್ನು ಪಡೆಯಬಹುದಾಗಿರುತ್ತದೆ. ಟೆಂಡರುದಾರರು ಕಾಮಗಾರಿಗೆ ನಿಗದಿಪಡಿಸಿದ ಇ.ಎಂ.ಡಿ. ಯನ್ನು ಕೆಪಿಪಿ ಪೋರ್ಟಲ್‌ನಲ್ಲಿ ಸೂಚಿಸಿರುವಂತೆ ಯಾವುದಾದರೂ ಒಂದು ರೀತಿಯಲ್ಲಿ ಸಲ್ಲಿಸಬೇಕಾಗುತ್ತದೆ. ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 01-07-2026 ಅಪರಾಹ್ನ 4.00 ಗಂಟೆ (16-00 ಗಂಟೆ) ಒಳಗೆ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಕ್ಯಾಲೆಂಡರ್ ಅನ್ನು ಮುಂದೂಡುವುದು (ಯಾವುದಾದರೂ ಇದ್ದರೆ) ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಅಧಿಸೂಚಿಸಲಾಗುವುದು ಮತ್ತು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/- ಆಯುಕ್ತರು,
ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು

DIPR/DK/KSMCA/360/26-27 dt. 16.06.2026

ಹೌಸ್ ಆಫ್ ಕಿರಾಯ ಲಿಮಿಟೆಡ್

CIN: U31000KA2012PLC063617

ನೋಂದಣಿ ಕಛೇರಿ: 2, 3 ಮತ್ತು 4ನೇ ಮಹಡಿ, ಕೃಷ್ಣ ಆರ್ಕೆಡ್, ಸರ್ವೆ ನಂ. 8/12,9/183, [illegible] ಬೆಂಗಳೂರು, ಕರ್ನಾಟಕ, ಭಾರತ-560068. ದೂರವಾಣಿ: 080-46467373
ಇ-ಮೇಲ್: customercare@furlenco.com. Website: www.furlenco.com

ವಿಡಿಯೊ ಕಾನ್ಫರೆನ್ಸ್ (ವಿಸಿ)/ ಇತರ ದೃಶ್ಯ ಶ್ರವ್ಯ ಮಾಧ್ಯಮ (ಒಎವಿಎಂ) ಮೂಲಕ ನಡೆಯುವ ಹೌಸ್ ಆಫ್ ಕಿರಾಯ ಲಿಮಿಟೆಡ್‌ನ (ಈ ಮೊದಲು ಹೌಸ್ ಆಫ್ ಕಿರಾಯ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲ್ಪಡುತ್ತಿತ್ತು) ಸದಸ್ಯರ 14ನೇ ಸರ್ವ ಸದಸ್ಯರ ಸಭೆಯ ಸಾರ್ವಜನಿಕ ನೋಟಿಸ್

[illegible]

ಇ-ಮತದಾನ ಕುರಿತು

[illegible]

ನೋಟಿಸ್ ರವಾನೆ ಪೂರ್ಣಗೊಂಡಿರುವ ದಿನಾಂಕ	ಮಂಗಳವಾರ, ಜೂನ್ 16, 2026
ಇ-ಮತದಾನ ಆರಂಭದ ಸಮಯ	ಮಂಗಳವಾರ, ಜುಲೈ 07, 2026ರ ಬೆಳಗ್ಗೆ 9.00 (ಐಎಸ್‌ಟಿ)
ರಿಮೋಟ್ ಇ-ಮತದಾನ ಮುಕ್ತಾಯ	ಗುರುವಾರ, ಜುಲೈ 09, 2026 ಸಂಜೆ 5.00 (ಐಎಸ್‌ಟಿ)
ಇ-ಮತದಾನಕ್ಕೆ ಕಟಾಫ್ ದಿನಾಂಕ	ಶುಕ್ರವಾರ, ಜುಲೈ 03, 2026

[illegible]

ಹೌಸ್ ಆಫ್ ಕಿರಾಯ ಲಿಮಿಟೆಡ್
ದಿನಾಂಕ: 17.06.2026
ಸ್ಥಳ: ಬೆಂಗಳೂರು

ನೋಂದಣಿ ಕಛೇರಿ: 2, 3 ಮತ್ತು 4ನೇ ಮಹಡಿ, ಕೃಷ್ಣ ಆರ್ಕೆಡ್, ಸರ್ವೆ ನಂ. 8/12,9/183, [illegible] ಬೆಂಗಳೂರು, ಕರ್ನಾಟಕ, ಭಾರತ-560068.

CHANGE OF NAME

I, **YASHASWINI .T**, D/o. T. Nagaraj, residing at No. 304, Siri Lakshmi Sai Residency, 1st Cross, 3rd Main, Behind Vasanthpura Bus Stop, Maruthi Layout, Bengaluru-560061, do hereby declare that I have changed my name from **YAKSHITHA .T** to **YASHASWINI .T,** vide affidavit dated 16.06.2026, sworn to before Sumithra .N, Advocate & Notary, Govt. of India, Bengaluru.

AFFIDAVIT

We, 1) **VALLIKUMAR ARUMUGHAM PILLAI**, S/o. Arumugham Pillai, aged about 49 years and 2) **SUMATHI ARUMUGAM**, W/o. Vallikumar Arumugham Pillai, aged about 47 years, both reside at No. 34, 1st Main, 1st Cross, B. Chokkanna Layout, Maheshwari Nagar, Mahadevapura, Bengaluru North, Bengaluru-560048, do hereby declare that in our daughter **LAKSHANYA VALLIKUMAR's** 8th Marks Card my name i.e. father's name has been mentioned as **VALLIKUMAR ARUMUGAM PILLAI** i.e. in father name column of our daughter's 8th Marks card instead of **VALLIKUMAR ARUMUGHAM PILLAI** i.e. ("H" was left out in Arumugam). My name is correctly mentioned in my Aadhar card and my wife's Aadhar card and also in our daughter's Aadhar Card, vide affidavit dated 12.06.2026, sworn to before XXXVIII Addl. Chief Judicial Magistrate, Bengaluru City.

CHANGE OF NAME

I. MANJUNATH S S, aged about 44 years, S/o.Sreeramulu S H. Residing at 1750, 1st Floor East End A Main road, 9th Block Jayanagar, Bangalore - 560069, I declare that have changed my father's name from **SREERAMULU** to **SREERAMULU S H,** vide affidavit dated 15/6/2026 sworn to before H S Dharma Prasad Advocate and Notary Bangalore.

CHANGE OF NAME

I, Bhargavi Keeker R/at. # 143, P & K Heights, Flat No.2, 1st Floor, 3rd Cross, HMT Layout, 2nd Block, 13th Main Vidyaranyapura, Bengaluru - 560097, have changed my name from **Bhargavi Keeker K** to **Bhargavi Keeker,** vide affidavit dated 10/6/2026 sworn to before Varija C J Advocate and Notary Bangalore.

IN THE COURT OF THE IV ADDITIONAL DISTRICT & SESSIONS JUDGE COURT OF MADHUGIRI

P & SC No. 5005/2026

BETWEEN: Sri. Niranjan .T.R ...PETITIONER

AND: NIL...RESPONDENT

PUBLIC NOTICE

WHEREAS, the above-named petitioner has filed a petition under section 276 of Indian Succession Act, praying for grant of Probate Certificate in respect of the Will dated 03.08.2011 executed by Late Chikkarangamma who expired on 19.09.2016.

Any person having their objection/s for issue of Probate Certificate in respect of the schedule in favour of the Petitioner and any person having interest may cause the same by appearing before the court in person or through their Advocate on **18-07-2026** at 11:00 AM failing which the matter will be heard and disposed off in accordance with law.

SCHEDULE PROPERTY

All the piece and parcel of the land bearing Sy No.15/1, measuring to an extent of 5 acre 17 guntas, situated to Borenethimmanahalli Village, Dodderi Hobli, Madhugiri Taluk and bounded on the: East by: Land belongs to Kotappa-Rangashamanna's, West by: Kere Angala and Road, North by : Land belongs to Dasappa-Rangappa's, South by: Kere.

Given under my hand and the seal of the Hon'ble court on 11-06-2026.

By order of the court, Chief Ministerial Officer, 4th ADDL district and Sessions Judge Court, Madhugiri.

Advocate for Petitioner:
T.R. NAGABHUSHANA,
No.29, 3rd Cross, Subedarpalya, Yeshwanthapura, Bangalore-560022.

PUBLIC NOTICE

Our clients intend purchasing the Schedule Property from Sri. S. Lal Chand Jain S/o. Sri. S. Suganchand Jain. Any person/s having any claim/s over the Schedule Property or any objection/s for the purchase of the Schedule Property by our clients may lodge his/her/their claim/s and objection/s to the undersigned with documentary proof within 7 days from today, failing which, it will be deemed that there are no claim/s or objection/s and/or claim/s if any, has/have been given up and our clients will proceed with the transaction of purchasing the Schedule Property as being free from any or all claim/s, right/s, encumbrance/s etc.

SCHEDULE PROPERTY

All that piece and parcel of immovable property being vacant Site No.672, situated at Gubbalalu Village, Vajramuni Nagara of Gubbalalu, Turahalli Layout, II Stage, formed by the Jayanagara Co-operative Housing Society Limited in Sy.Nos.1/1, 1/38, 6/1, 6/2, 7, 9, 50/1 to 50/9, 56 and 63 of Gubbalalu Village and Sy.Nos.43/1, 44/1, 45/1, 46/1, 46/2 and 47/1 of Turahalli Village, Uttarahalli Hobli, Bangalore South Taluk, presently within the jurisdiction of BBMP limits, Ward No.184 - Uttarahalli, bearing EPID No.6108633778, measuring on the East to West: 60 feet and North to South: 40 feet, totally measuring 2,400 square feet, together with all rights, appurtenances whatsoever underneath or above the surface, with all civic amenities thereon and bounded on the: **East by:** Site No.649, **West by:** Road, **North by:** Site No.671, **South by:** Site No.673.

SIDDHARTHA .D.K, Advocate
M/S. DHVANI LAW
No.70, 1st Floor, 'Srinidhi Apartments', Vanivilas Road, Basavanagudi, Bengaluru- 560 004. Mob: 9916800411
Date: 16.06.2026

IN THE COURT OF THE PRINCIPAL CIVIL JUDGE AND JMFC AT HOSKOTE

C. Mis No. 266/2026

Between: 1. Smt. Sarojamma, D/o Late. Sri Narayanappa (Smt Late Motamma Mother) Age 68 years, R/at, No.222, Near Govt School Paparedy Pallya, Nagarbhavi 2nd Stage, Banglore -560072.
2. Smt. Kamalamma, D/o late Sri Narayanappa (Smt Late Motamma Mother) Age 68 years, R/at,NO.76-2, Renuka Nagar, Sarjapura, Anekal, B'lore-562125.
3. Sri Madesh, S/o late Sri Narayanappa (Smt Late Motamma Mother) Aged about 65 years, R/at, No.238, Devanagondi Village, Anugondanahalli Hobli, Hosakote Taluk, Bangalore Rural District.
4. Smt Shanthamma, D/o late Sri Narayanappa (Smt Late Motamma Mother) Age 60 years, R/at, No. 72/1,60th cross, Vidhyanagara, Near Sub-Register Office, Sarjapura, Anekal, Bangalore-562125.
5. Smt Jayamma, D/o late Sri Narayanappa (Smt Late Motamma Mother) Aged about 56years, R/at, No.513, Sarjapura, Karnataka-562125.
6.Smt Nagamma, D/o late Sri Narayanappa (Smt Late Motamma Mother) Aged about 52years, R/at, No.5, New 25, Byamma Layout, Paparedy Pallya, Nagar Bhavi 2nd stage, Bangalore North -560072
7. Savitri D.N, D/o late Sri Narayanappa (Smt Late Motamma Mother) Age 44years R/at, No.238, Devanagondi Village, Anugondanahalli Hobli, Hosakote Taluk, Bangalore Rural Dist ...Petitioners
AND : Tahasildar Hosakote Bangalore Rural District. ...Respondent

Whereas the petitioners above named has filed the above petition U/Sec 13(3) of Registration of Births and Deaths Act 1969 seeking direction to the Respondent to enter the date of death of Father of Petitioners No. 1 to 7 by name Sri. Late Narayanappa S Late Muniyappa in the register of death who died on 02-08-1970 at Devanagondi Village, Anugondanahalli Hobli, Hosakote Taluk, Bangalore Rural District, the above matter is posted for appearance of interested parties before the court at 11-00 A.M on 21/07/2026.

Therefore interested parties are hereby required to appear before the court on the above said date and time either in person or through Advocate duly instructed, failing which the matter will be disposed of as Ex-parte.

Given under my hand and the seal of this court this the day of 11/06/2026.

BY ORDER OF THE COURT
Sheristedar, Civil Judge & J.MFC. Hosakote.

ಮೂಲ ದಾವೆ ಸಂಖ್ಯೆ: 494/2023

[illegible]

IN THE HIGH COURT OF KARNATAKA AT BENGALURU
NOTICE TO THE RESPONDENT NO.7 VIDE COURT ORDER DATED 10.06.2026
WRIT PETITION NO.10198/2023 (GM-DRT)

PETITIONER: SRI DEBASISH GAYEN S/O SRI LAKSHMINDAR GAYEN, AGED ABOUT 40 YEARS, R/AT NO.304, 3RD FLOOR, E-BLOCK, SOWPARNIKA THARANGINI, BENGALURU-562 125.

RESPONDENTS: UNION OF INDIA, REP. BY ITS SECRETARY, MINISTRY OF FINANCE, NORTH BLOCK, NEW DELHI-110 001. & ANOTHER

To, **RESPONDENT No.7: M/S. GVG INFRASTRUCTURE PRIVATE LIMITED**, NO.589, 3RD FLOOR, C BLOCK, AECS LAYOUT, BENGALURU-560 001 (DEVELOPER), REP. BY ITS MANAGING DIRECTOR

Whereas the above named petitioner praying this Court to and also on petition filed under Articles 226 & 227 of the Constitution of India, praying to:

a. Issue a Writ of Mandamus restraining the Respondent No.6, State Bank India from taking any coercive action against the Petitioner for recovering any amount comprised in the arrangement letter vide Annexure-F and Tripartite Agreement vide Annexure-G.

b. Issue a Writ of Mandamus directing the Respondent Nos.3, 4, 5 and 6 i.e., Reserve Bank of India, National Housing Bank, Trans union CIBIL limited, State Bank of India, to process petitioner claim for reframing the CIBIL scores and for issuing NO DUE CERTIFICATE.

C. Issue a Writ of Mandamus to the Respondent No.7 to repay and settle the loan.

Notice is hereby given to you to appear in this Court either in person or through counsel duly instructed or through someone authorised by law, to act for you in the above Writ Petition on **08-07-2026** at 10.30 A.M. in case you intend to contest the Writ Petition. If you fail to appear, the same will be dealt with, heard and decided in your absence.

Issued under my hand and the seal of this court, on 16-06-2026

By order of the court, Assistant Registrar, High Court of Karnataka, Bangalore

---

IN THE COURT OF HON'BLE II-ADDL CIVIL JUDGE & JMFC AT K.G.F.

C.M.C. No: 109/2026

Petitioner:- 1. **PRASATH.V** S/o. Late. Venkataswamy, Aged about 48 years R/at: #14, N.T.Block Oorgaum Post, K.G.F. 563120. **2. SMT. MUPPARAPU JANAKI** D/o. Late. Venkataswamy W/o. Mupparapu Abraham Aged about 55 years R/at: #14, N.T.Block Oorgaum Post, K.G.F. 563120. **3. SMT. JAYA** D/o. Late. Venkataswamy Aged about 40 years, R/at: #14, N.T.Block Oorgaum Post, K.G.F. 563120

-V/S-

Respondent: THE COMMISSIONER Robertsonpet City Municipal K.G.F.

PUBLIC NOTICE

WHEREAS, the petitioners has filed a Petition Under Section 13(3) of Registration of Birth & Death Act 1969, for obtaining the Death Certificate of the petitioner No.1 MOTHER SMT. MARIYAMMA D/o RAJAIAH & SMT. RAJAMMA was died on 03-11-2009 at Home # 14, N.T.Block, Oorgaum Post, K.G.F. 563120.

The hearing date of the case if posted on 1st July 2026. If any persons having any claim or objection has to appear before this Hon'ble Court in persons or by pleader in the above said hearing date at about 11.00 am to answer the same, failing which the petitioners will be disposed off as Ex-Parte.

Given under my hand and seal of this Court on this 4th June 2026

By the Order of this Court
Chief Ministerial Officer,
PRL CIVIL JUDGE AND JMFC COURT KOLAR GOLD FIELDS

Advocate for Petitioners
KUM.BANU.B, B.Com., LL.B.,
SRI.RICHARD DANIEL, B.Com., LL.B
Advocates, K.G.F.

IN THE COURT OF HON'BLE II-ADDL K.G.F.

C.M.C. No: 153/2026

Petitioner:- RAMESH KUMAR.K, S/o. R.Kodhanda Pani @Prabhakar, Aged About 60 Years, R/At: #247, 1PO Block,Near Chellappa School, Marikuppam, K.G.F.-563119, KGF Taluk, Kolar District, Aadhaar No. 4018 5651 4308,

-V/S-

Respondent: THE COMMISSIONER Robertsonpet City Municipal K.G.F.

PUBLIC NOTICE

WHEREAS, the petitioners has filed a Petition Under Section 13(3) of Registration of Birth & Death Act 1969, for obtaining the Death Certificate of the petitioner FATHER R.KODHANDA PANI @ PRABHAKAR, was died on 13-09-2024 at Home # 247, 1PO BLOCK, NEAR CHELLAPPA SCHOOL, MARIKUPPAM, K.G.F-563119, KGF Taluk, Kolar District.

The hearing date of the case if posted on 23/06/2026 if any persons having any claim or objection has to appear before this Hon'ble Court in persons or by pleader in the above said hearing date at about 11.00 am to answer the same, failing which the petitioners will be disposed off as Ex-Parte.

Given under my hand and seal of this Court on this 4th June 2026

By the Order of this Court
Chief Ministrial Officer,
PRL CIVIL JUDGE AND JMFC COURT KOLAR GOLD FIELDS

Advocate for Petitioners
KUM.BANU.B, B.Com., LL.B.,
SRI.RICHARD DANIEL, B.Com., LL.B
Advocates, K.G.F.

IN THE HON'BLE VII ADDL CITY CIVIL AND SESSIONS JUDGE AT BENGALURU

G & WC No. 22/2026 (CH-19)

BETWEEN: 1. Smt. Roopa V., W/o. Late J. Narendra Raju, Aged about 39 years, **2. Master Nitesh N. Raju**, Aged about 15 years, (Since minor represented by his natural guardian and mother Petitioner No.1), **3. Kumari Sharvi N. Raju**, Aged about 09 years, (Since minor represented by his natural guardian and mother Petitioner No.1), All are residing at No.227, 23rd Main Road, 16th Cross, J.P.Nagar 5th Phase, Bengaluru-560 078. ... **PETITIONERS**

AND: Nil ... RESPONDENT

NOTICE

Notice is hereby given that the above petition has been filed under the provisions of the Guardians and Wards Act seeking permission of this Hon'ble Court to sell/alienate the undivided share, title and interest of the minor petitioners in the immovable property mentioned below.

Any interested parties are hereby called upon to appear before this court in person or by pleader duly instructed on **04-07-2026** at 11.00 am inform to show cause against the petitioners failing wherein the appearance will be heard and declared ex-party in accordance with law.

SCHEDULE PROPERTY

All the piece and parcel of site bearing No.149, formed by BDA, having PID No.3217070217, situated at Anjanapura Layout, 4th Block, Bengaluru, measuring East to West 9.00 mtrs and North to South 6.00 mtrs, totally measuring 54.00 Sq mtrs together with residential building constructed thereon and bounded on: East by: Private Property, West by: Road, North by : Site No.148, South by: Site No.150

together with partially constructed residential dwelling structure standing thereon.

Given under my hand and seal of the court on 15-06-2026.

By order of the court, Senior Sheristedar, City Civil Court, Bangalore.

Mr. PRITHVI RAJ B.N., Advocate
Off at No.71, Ground Floor, 8th Cross, 1st Main, Sampangiramanagar, Bangalore-560 072.

ಬೆಂಗಳೂರು ಉತ್ತರ ವಿಶ್ವವಿದ್ಯಾಲಯ

ಶ್ರೀ ದೇವರಾಜ ಅರಸ್ ಬಡಾವಣೆ, ಟಮಕ, ಕೋಲಾರ-563 103
E-Mail:bnuregevl@karnataka.gov.in
web: www.bnu.karnataka.gov.in

ದಿನಾಂಕ: 15.06.2026

ಇ-ಟೆಂಡರ್ ಅಧಿಸೂಚನೆ

ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ ಇಲ್ಲಿಗೆ ಈ ಕೆಳಕಂಡಂತೆ ವಿವಿಧ ಪ್ರಕ್ರಿಯೆಗಳಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. **(1)** ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ 6ನೇ ಘಟಿಕೋತ್ಸವದ ಅಂಗವಾಗಿ ಪರೀಕ್ಷಾ ವಿಭಾಗಕ್ಕೆ **ಗೋಲ್ಡ್ ಮೆಡಲ್** ಸರಬರಾಜು ಮಾಡುವ ಬಗ್ಗೆ **ಟೆಂಡರ್‌ನಂ: BNU/2026-27/IND0068. (2)** ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರದ ಪರೀಕ್ಷಾ ವಿಭಾಗಕ್ಕೆ **Kora Cloth Bag** ಗಳನ್ನು ಸರಬರಾಜು ಮಾಡುವ ಬಗ್ಗೆ, **ಟೆಂಡರ್‌ನಂ: BNU/2026-27/IND0069** ಕರ್ನಾಟಕ ಪಾರದರ್ಶಕ ಸಾರ್ವಜನಿಕ ಇ-ಪ್ರೊಕ್ಯೂರ್‌ಮೆಂಟ್ ಕಾಯ್ದೆಯಡಿಯಲ್ಲಿ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಇಲಾಖೆಯಲ್ಲಿ ನೋಂದಾಯಿಸಿದ ಸಂಸ್ಥೆಗಳಿಂದ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆಗಳು **ಟೆಂಡರ್ ದಾಖಲೆಗಳನ್ನು ದಿನಾಂಕ: 12.06.2026** ರಿಂದ **http://kppp. karna taka.gov.in** ವೆಬ್‌ಸೈಟ್ ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಸಚಿವರು ಮೌಲ್ಯಮಾಪನ ಕಛೇರಿಯನ್ನು ಸಂಪರ್ಕಿಸಿ ಪಡೆಯಬಹುದು.

ಸಹಿ/- ಕುಲಸಚಿವರು(ಮೌ)
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಟಮಕ, ಕೋಲಾರ-563103

ವಾಇಸಂಇ/ಕೋಲಾರ/ಆರ್.ಓ.ಸಂಖ್ಯೆ:121/ಕೆಎಸ್‌ಎಂಸಿಎ/2026-27

ಫಾರ್ಮ್ ನಂ. URC-2 (FORM NO. URC-2)

[illegible] (CRC) SLATEWORKS GLOBAL SOLUTIONS LLP [illegible] (company limited by shares) [illegible]

ದಿನಾಂಕ: 17 ನೇ, ಜೂನ್, 2026

[illegible]

PUBLIC NOTICE

This is to inform the general public that my client is proposing to purchase the land bearing Sy.No. 255, measuring 6 Acres 19 Guntas, situated at Hunasanalu Village, Kasaba Hobli, Nanjanagudu Taluk, Mysore District, bounded on the East by: Bandi Dari, West by: Land belongs to Madhegowda, North by: Sarkari Dni and South by: Mannina Dari, from its present owners (1) Mr. Shedakshara Shetty S/o. Late Mallappa Shetty, (2) Mr. Vinaykumar S/o. Shivamurthy and (3) Mr. Mahesh S/o. Mariswamy.

If anybody having any objection for the same or anybody having any claim on the said property, is requested to contact the undersigned within 15 days of the publication of this notice. Any claim made after the period of 15 days will not be binding on my client.

SOMASHEKHARA A.N, Advocate
Aasthi Law Chambers
No. 21/1, Girls School Street Kumarapark West Bengaluru - 560020.

ಕರ್ನಾಟಕ ಸರ್ಕಾರ

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನಂದಿನಗರ, ಬೀದರ -585401.

Email: eokvafsu@gmail.com, ಕಛೇರಿ ದೂರವಾಣಿ: 08482-245361

ಸಂಖ್ಯೆ:ಅ.ಅ/ಕ.ಪ.ಪ.ಮೀ.ವಿ.ವಿ/ಕೆ.ಸಂ.151/ಕಾಮಗಾರಿ/2026-27 ದಿನಾಂಕ:15.06.2026

ಟೆಂಡರ ಪ್ರಕಟಣೆ
(ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ)

1) ಕಾಮಗಾರಿ ವಿವರ Construction of Concrete roadinfront of main building and providing new name board for main gate at IAH&VB, Hebbal, Bangalore, 2) ಕಾಮಗಾರಿ ಅಂದಾಜು ಮೊತ್ತ **Rs.2643842.00** (Excluding GST), 3) ಗುತ್ತಿಗೆದಾರರ ಅರ್ಹತೆ ವಿವರ e-portal ನಲ್ಲಿ ನಮೂದಿಸಿದಂತೆ, 4) ಕಾಮಗಾರಿ ಟೆಂಡರ ಮೊತ್ತದ ವಿವರ **Rs.2643842.00** (Excluding GST), 5) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತದ ವಿವರ e-portal ನಲ್ಲಿ ನಮೂದಿಸಿದಂತೆ, 6) ಟೆಂಡರ ಫಾರಂ ಸಲ್ಲಿಸಲು ಅಂತಿಮ ದಿನಾಂಕ **23.06.2026 up to 5.00 PM,** 7) ತಾಂತ್ರಿಕ ಬಿಡ್ ಟೆಂಡರ ತೆರೆಯುವ ದಿನಾಂಕ **25.06.2026 at 11.30 AM,** 8) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ, ಕಛೇರಿ, ವಿಳಾಸ, ದೂರವಾಣಿ ಸಂಖ್ಯೆ ಅಭಿಯಂತರರು ಅಧಿಕಾರಿಗಳ ಕಛೇರಿ, ಕಪಪಮೀವಿವಿ, ನಂದಿನಗರ, ಬೀದರ, 08482-245446, 9) ಅಂತರ್ಜಾಲ ತಾಣದ ವಿಳಾಸ e-procurement portal- www.eproc.karnataka.gov.in.

ಸಹಿ/- ಅಭಿಯಂತರ ಅಧಿಕಾರಿಗಳು
ಕಪಪಮೀವಿವಿ, ಬೀದರ.

ವಾ.ಸಾ.ಸಂ.ಇ/ಬೀದರ/61/ಕೆಎಸ್‌ಎಂಸಿಎ/2026-27

ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ

ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಬಳ್ಳಾಪುರ

ಕೆಪಿಪಿ ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 4/2026-27 ದಿನಾಂಕ: 10.06.2026

ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯು- IV ರ ನಿಬಂಧನೆಗೊಳಪಟ್ಟಂತೆ ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ2000ರ ಪ್ರಕಾರ ಐಟಂವಾರು ಇ-ಪ್ರೊಕ್ಯೂರ್‌ಮೆಂಟ್ ದ್ವಿ-ಲಕೋಟೆ ಪದ್ಧತಿಯಲ್ಲಿ (Double Cover System) ಚಿಕ್ಕಬಳ್ಳಾಪುರ ವಿಭಾಗ ವ್ಯಾಪ್ತಿಯ 2025-26 ನೇ ಸಾಲಿನ CMIDP ಲೆಕ್ಕಶೀರ್ಷಿಕೆಯಡಿ ಕೆಳಗೆ ನಮೂದಿಸಿರುವ ಕಾಮಗಾರಿಗಳಿಗೆ ಸೂಕ್ತ ದರ್ಜೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿರುವ ಅಧಿಕೃತ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು ಕೆ.ಪಿ.ಪಿ ಇ-ಪ್ರೊಕ್ಯೂರ್‌ಮೆಂಟ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ **https://eproc.karnataka.gov.in** ಮೂಲಕ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ. **(1)** E-procurement ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಮೆಟ್ರಿಕ್ಸ್-ಎ ಗಳನ್ನು ವೆಬ್ ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ **ದಿನಾಂಕ: 10.07.2026 ರ 16.30 ರವರೆಗೆ (2)** ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 13.07.2026 ರಂದು 16.35 ನಂತರ (3)** ಆರ್ಥಿಕ ಬಿಡ್‌ನ್ನು ತೆರೆಯುವ **ದಿನಾಂಕ: 14.07.2026 ರಂದು ಬೆಳಗ್ಗೆ 11.30 ನಂತರ (4)** ಅರ್ಜಿ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ): e- Procurement ನಿಯಮಾನುಸಾರ

ಕ್ರ ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ (ರೂ. ಗಳಲ್ಲಿ)	ಕಾಲಮಿತಿ ಮಳೆಗಾಲ ಸೇರಿ
1	Improvements to road from Ucchodanahalli village to Konapura approch road in Gauribidanur Taluk. (INDENT NO:RDPR/2026-27/RD/WORK_INDENT27284)	160.00	240000.00	9 ತಿಂಗಳು
2	Improvements to road from Hosur Allipura main road to Kenkare approch road ,in Gouribidanur taluk, (INDENT NO:RDPR/2026-27/RD/WORK_INDENT27285	130.00	195000.00	9 ತಿಂಗಳು
3	Improvements to road from A.C.C factory to Basavanahalli approch road in Gouribidanur Taluk (INDENT NO:RDPR/2026-27/RD/WORK_INDENT27286)	200.00	300000.00	9 ತಿಂಗಳು
4	Improvements to road from Bommashettihalli Village to Kurudi approch road in Gouribidanur Taluk, (INDENT NO:RDPR/2026-27/RD/WORK_INDENT27287)	170.00	255000.00	9 ತಿಂಗಳು
	Total	660.00		

ಸಹಿ/- ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಚಿಕ್ಕಬಳ್ಳಾಪುರ

ವಾಇಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:104/ಕೆಎಸ್‌ಎಂಸಿಎ/2026-27

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಹೇಮಾವತಿ ನಾಲಾ ತನಿಖಾ ವಿಭಾಗ, ಹೆಬ್ಬೂರು-572 120 ತುಮಕೂರು ಜಿಲ್ಲೆ.
ಫೋನ್ ನಂ.0816-2957008 ಇ-ಮೇಲ್:
eehcidhebbur@gmail.com

ಸಂಖ್ಯೆ: 04/2026-27 ದಿನಾಂಕ: 12.06.2026

ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ 04 ಕಾಮಗಾರಿಗಳಿಗೆ ಅಲ್ಪಾವಧಿ ಟೆಂಡರ್ ಅನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ Item rate ಆಧಾರದ ಮೇಲೆ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಪ್ರಾರಂಭ ದಿನಾಂಕ: 16.06.2026 ಮತ್ತು ಅಂತಿಮ ದಿನಾಂಕ: 24.06.2026 ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಹೇಮಾವತಿ ನಾಲಾ ತನಿಖಾ ವಿಭಾಗ, ಕಾ.ನೀ.ನಿ.ನಿ. ಹೆಬ್ಬೂರು

DIPR/TUM/107/KSMCA/2026-27

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯಪಾಲಕ ಇಂಜನಿಯರ್ ರವರ ಕಛೇರಿ, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ ನಂ.I, ಸಕಲೇಶಪುರ, ಹಾಸನ ಜಿಲ್ಲೆ. ದೂರವಾಣಿ ಸಂಖ್ಯೆ:08173-244454

ಸಂ:ಕಾಇಂ/ವಿಜನಿನಿ/ಎಯೋವಿ.1/ಅ/ಟೆಂ.ಪ್ರ-05/2026-27/317 ದಿನಾಂಕ: 16.06.2026

ಟೆಂಡರ್ ಪ್ರಕಟಣೆ ಸಂಖ್ಯೆ: 05/2026-27/317 ದಿನಾಂಕ:16.06.2026 (ಏಕ-ಲಕೋಟೆ ಪದ್ಧತಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ರವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ, ನಂ.I, ಸಕಲೇಶಪುರ ಇವರು ಕೆಳಕಂಡ ಕಾಮಗಾರಿಗಳಿಗೆ ಕಾಮಗಾರಿಗೆ ಶೇಕಡಾವಾರು ಟೆಂಡರ್‌ನ್ನು ಏಕ-ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿರುತ್ತದೆ. ವಿವರಗಳು ಕೆಳಗಿನಂತಿವೆ. ಕ್ರ.ಸಂ.ಕಾಮಗಾರಿ ವಿವರ 1)Providing & Supplying Man Power to the office of Executive Engineer, VJNL, Yettinahole Project, Division, No.01, Sakleshpura, Assistant Executive Engineer, Yettinahole Project Sub Division No.01, Sakleshpura, Assistant Executive Engineer, Yettinahole Project Sub Division No.08, Sakleshpura, Assistant Executive Engineer, Yettinahole Project Sub Division No.13, Sakleshpura, Assistant Executive Engineer, Yettinahole Project Electrical Sub Division, Sakleshpura, Hassan District for the year 2026-27(Package)(Indent No.VJNL/2026-27/SE0207).(Package) work ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)ಅಂತರ್ಜಾಲ ತಾಣ, https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ. ಗುತ್ತಿಗೆದಾರರ ದರ್ಜೆ ನೊಂದಾಯಿತ ಮ್ಯಾನ್‌ಪವರ್ ಏಜೆನ್ಸಿ 2)Providing & Supplying Man Power to the office of Assistant Executive Engineer, VJNL, Yettinahole Project,Sub Division, No.09, Alur, Hassan District for the year of 2026-27 (Indent No. VJNL/2026-27/SE0208) ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)ಅಂತರ್ಜಾಲ ತಾಣ, https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ. ಗುತ್ತಿಗೆದಾರರ ದರ್ಜೆ ನೊಂದಾಯಿತ ಮ್ಯಾನ್‌ಪವರ್ ಏಜೆನ್ಸಿ ಸದರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಇ.ಎಮ್.ಡಿ/ಪರಿಸ್ಥಗಳು/ಬಿಡ್ಡುದಾರರ ಅರ್ಹತೆ/ಪೂರ್ವಭಾವಿ ಸಭೆಯ ವಿವರ/ಟೆಂಡರ್ ನಿಬಂಧನೆಗಳು/ಪೂರ್ವ ಅರ್ಹತಾ ಮಾನದಂಡ ಹಾಗೂ ಇತರೆ ವಿವರಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ. ದಿನಾಂಕ: 17.06.2026 ರಿಂದ ಟೆಂಡರ್ ದಸ್ತಾವೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನ್ ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಟೆಂಡರ್‌ಗಳನ್ನು ಒಪ್ಪಿಕೊಳ್ಳುವ ಹಾಗೂ ಯಾವುದೇ ಕಾರಣ ನೀಡದೆ ಎಲ್ಲಾ ಅಥವಾ ಯಾವುದೇ ಟೆಂಡರ್‌ಗಳನ್ನು ತಿರಸ್ಕರಿಸುವ ಹಕ್ಕನ್ನು ಸಕ್ಷಮ ಪ್ರಾಧಿಕಾರವು ಹೊಂದಿರುತ್ತದೆ ಹಾಗೂ ಕಡಿಮೆ ಮೊತ್ತದ ಟೆಂಡರ್ ಸ್ವೀಕರಿಸಲು ಬದ್ಧವಾಗಿರುವುದಿಲ್ಲ. ಹೆಚ್ಚಿನ ವಿವರಗಳಿಗೆ ಇ-ಸಂಗ್ರಹಣಾ ಕೋಶ, ಕರ್ನಾಟಕ ಸರ್ಕಾರದ ಅಂತರ್ಜಾಲ ತಾಣ, https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳು ಬೇಕಾದಲ್ಲಿ ಕೆಳಗೆ ನೀಡಿರುವ ಕಛೇರಿಯ ವಿಳಾಸದಲ್ಲಿ ಕಛೇರಿಯ ಕೆಲಸದ ಸಮಯದಲ್ಲಿ ಪಡೆಯ ಬಹುದಾಗಿದೆ. ಕಾರ್ಯಪಾಲಕ ಇಂಜಿನಿಯರ್, ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ, ನಂ.I, ಸಕಲೇಶಪುರ, ದೂರವಾಣಿ ಸಂಖ್ಯೆ:08173-244454 e-mail: eeypdn1@gmail.com.

ಸಹಿ/-ಕಾರ್ಯಪಾಲಕ ಇಂಜನಿಯರ್, ವಿಜನಿನಿ,
ಎತ್ತಿನಹೊಳೆ ಯೋಜನಾ ವಿಭಾಗ, ನಂ.I ಸಕಲೇಶಪುರ.

ವಾಇಸಂಇ/ಹಾಸನ/ಆರ್.ಓ.ಸಂ/245/ಕೆಎಸ್‌ಎಂಸಿಎ/2026-27

ಘನತ್ಯಾಜ್ಯ ನಿರ್ವಹಣೆ ಕಾರ್ಯಕ್ರಮದಲ್ಲಿ ಬೆಂಗಳೂರು ನಗರಾಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಹೇಳಿಕೆ

ನಗರವಾಸಿಗಳ ಜೀವನ ಗುಣಮಟ್ಟ ಸುಧಾರಣೆಗೆ ಆದ್ಯತೆ

• **ಬೆಂಗಳೂರು:** ನಗರದಲ್ಲಿ ವಾಸಿಸುವ 1.5 ಕೋಟಿ ಜನರ ಜೀವನ ಗುಣಮಟ್ಟವನ್ನು ಸುಧಾರಿಸುವುದು ನಮ್ಮ ಮೊದಲ ಆದ್ಯತೆಯಾಗಿದ್ದು, ಆ ನಿಟ್ಟಿನಲ್ಲಿ ಸಮರ್ಪಕವಾಗಿ ಕಾರ್ಯ ನಿರ್ವಹಿಸುವಂತೆ ಎಲ್ಲಾ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಬೆಂಗಳೂರು ನಗರಾಭಿವೃದ್ಧಿ ಸಚಿವರಾಗಿ ಅಧಿಕಾರ ವಹಿಸಿಕೊಂಡ ಬಳಿಕ ನಗರಾಭಿವೃದ್ಧಿ ಅಪರ ಮುಖ್ಯ ಕಾರ್ಯದರ್ಶಿ, ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಮುಖ್ಯ ಆಯುಕ್ತರು, ವಿಶೇಷ ಆಯುಕ್ತರು, ಐದು ಪಾಲಿಕೆಗಳ ಆಯುಕ್ತರು, ಮುಖ್ಯ ಅಭಿಯಂತರರು, ಬಿ-ಸ್ಮೈಲ್, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ಅಧಿಕಾರಿಗಳ ಸಭೆಯನ್ನು ಜಿಬಿಎ ಸಭಾಂಗಣದಲ್ಲಿ ನಡೆಸಿದರು.

ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಬೆಂಗಳೂರು ಬಹಳಷ್ಟು ಸವಾಲುಗಳನ್ನು ಹೊಂದಿರುವ ನಗರವಾಗಿದೆ. ಸುಮಾರು 1.5 ಕೋಟಿ ಜನರಿಗೆ ಆಶ್ರಯ ತಾಣವಾಗಿರುವ ಈ ನಗರವು ಉದ್ಯೋಗ, ಶಿಕ್ಷಣ ಹಾಗೂ ಉತ್ತಮ ಜೀವನಕ್ಕೆ ಅವಕಾಶ ಕಲ್ಪಿಸುತ್ತಿದೆ. ಬೆಂಗಳೂರು ನಮ್ಮ ರಾಜ್ಯ ಹಾಗೂ ದೇಶದ ಅಮೂಲ್ಯ ಆಸ್ತಿಯಾಗಿದ್ದು, ವಿಶ್ವದ ವಿವಿಧ ಭಾಗಗಳ ಜನರು ಹಾಗೂ ಅನೇಕ ಸಂಸ್ಥೆಗಳು ಇಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ಹಿನ್ನೆಲೆಯಲ್ಲಿ ಜಿಬಿಎ ಆಡಳಿತವನ್ನು ಸುಧಾರಣೆ ಮಾಡುವ ಧ್ಯೇಯದೊಂದಿಗೆ ಕಾರ್ಯನಿರ್ವಹಿಸಲಾಗುವುದು ಎಂದು ತಿಳಿಸಿದರು.



ಜನರ ದಿನನಿತ್ಯದ ಸಮಸ್ಯೆಗಳ ಪರಿಹಾರಕ್ಕೆ ಆದ್ಯತೆ: ನಗರದಲ್ಲಿನ ಅಸ್ಪಷ್ಟ ಖಾತೆ ಸಮಸ್ಯೆಗೆ ಪರಿಹಾರವಾಗಿ ದೇಶದಲ್ಲಿಯೇ ಮೊದಲ ಬಾರಿಗೆ ಅತ್ಯುತ್ತಮ ಮಾದರಿಯ ಇ-ಖಾತಾ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ನಗರದ ದೀರ್ಘಾವಧಿಯ ಅಭಿವೃದ್ಧಿಗೆ ಅಗತ್ಯವಿರುವ ಯೋಜನೆಗಳನ್ನು ಸಮಗ್ರವಾಗಿ ರೂಪಿಸಲಾಗಿದೆ. ಅವುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ನಾವು ಕೆಲಸ ಮಾಡುತ್ತೇವೆ. ಇದರ ಜೊತೆಗೆ ಜನರ ದಿನನಿತ್ಯದ ಸಮಸ್ಯೆಗಳ ಪರಿಹಾರಕ್ಕೂ ಹೆಚ್ಚಿನ ಆದ್ಯತೆ ನೀಡಬೇಕಿದೆ. ಈ ನಿಟ್ಟಿನಲ್ಲಿ ಅಧಿಕಾರಿಗಳು ಜನಸಾಮಾನ್ಯರ ಸಮಸ್ಯೆಗಳನ್ನು ತ್ವರಿತವಾಗಿ ಬಗೆಹರಿಸುವಂತೆ ಸೂಚಿಸಲಾಗಿದೆ ಎಂದು ತಿಳಿಸಿದರು.

360 ಡಿಗ್ರಿ ದೃಷ್ಟಿಕೋನ

ಸಾಮಾಜಿಕ, ಸಾಂಸ್ಕೃತಿಕ, ಕಲಾತ್ಮಕ ಹಾಗೂ ಕ್ರೀಡಾ ಚಟುವಟಿಕೆಗಳನ್ನು ಒಳಗೊಂಡ ಸಮಗ್ರ ಅಭಿವೃದ್ಧಿಯಿಂದ ಮಾತ್ರ ಜೀವನದ ಗುಣಮಟ್ಟ ಸುಧಾರಿಸಲು ಸಾಧ್ಯ. ಈ ನಿಟ್ಟಿನಲ್ಲಿ 360 ಡಿಗ್ರಿ ದೃಷ್ಟಿಕೋನದೊಂದಿಗೆ ಬೆಂಗಳೂರಿನ ಜನರ ಜೀವನ ಗುಣಮಟ್ಟ ಸುಧಾರಣೆಗೆ ಹೆಚ್ಚಿನ ಪ್ರಯತ್ನ ಮಾಡಲಾಗುವುದು. ಇಂಜಿನಿಯರ್ ಸೇರಿದಂತೆ ಕೆಲವು ಕೊರತೆ ಇರಬಹುದು, ಆದರೆ ಇರುವ ವ್ಯವಸ್ಥೆಯನ್ನು ಸರಿಯಾಗಿ ಬಳಸಿಕೊಂಡು ಆಡಳಿತದಲ್ಲಿ ಚುರುಕು ಮುಟ್ಟಿಸಿದರೆ ಅನೇಕ ಸಮಸ್ಯೆಗಳನ್ನು ಬಗೆಹರಿಸಬಹುದು ಎಂದು ಕೃಷ್ಣ ಬೈರೇಗೌಡ ತಿಳಿಸಿದರು.

> ಇರುವ ಆಡಳಿತ ವ್ಯವಸ್ಥೆಯನ್ನು ಸಮರ್ಪಕವಾಗಿ ಬಳಸಿಕೊಂಡು ಕಾರ್ಯನಿರ್ವಹಿಸಿದರೆ ಹಲವು ಸಮಸ್ಯೆಗಳನ್ನು ಬಗೆಹರಿಸಬಹುದು. ಆಡಳಿತದಲ್ಲಿ ಚುರುಕು ಮೂಡಿಸಿ, ಸೇವಾ ವಿತರಣೆಯಲ್ಲಿ ಸುಧಾರಣೆ ತರುವ ಮೂಲಕ ಜನರ ಜೀವನ ಗುಣಮಟ್ಟವನ್ನು ಹೆಚ್ಚಿಸಲಾಗುವುದು.
> ■ **ಕೃಷ್ಣ ಬೈರೇಗೌಡ,** ಬೆಂ. ನಗರಾಭಿವೃದ್ಧಿ ಸಚಿವ



ಸಂಭ್ರಮ

ಜಿಕೆವಿಕೆ ಡಾ.ಬಾಬು ರಾಜೇಂದ್ರಪ್ರಸಾದ್ ಅಂತಾರಾಷ್ಟ್ರೀಯ ಸಮಾವೇಶ ಭವನದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ 28ನೇ ವಾರ್ಷಿಕ ಘಟಿಕೋತ್ಸವದಲ್ಲಿ ಪದವೀಧರರು ಟೋಪಿಯನ್ನು ಎಸೆಯುವ ಮೂಲಕ ಸಂಭ್ರಮಿಸಿದರು.

ಕಿರುಸುದ್ದಿ

ನಾಟಕೋತ್ಸವಕ್ಕೆ ಚಾಲನೆ



• **ಬೆಂಗಳೂರು:** ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಕಾರದೊಂದಿಗೆ ಅಮ್ಮನ ಮಡಿಲು ಸಾಮಾಜಿಕ ಸಾಂಸ್ಕೃತಿಕ ಕಲಾ ಟ್ರಸ್ಟ್ ವತಿಯಿಂದ ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಳ್ಳಲಾಗಿರುವ ನಾಟಕೋತ್ಸವಕ್ಕೆ ಹಿರಿಯ ರಂಗಕರ್ಮಿ ಕೆ.ವಿ ನಾಗರಾಜ್ ಮೂರ್ತಿ ಚಾಲನೆ ನೀಡಿದರು. ಈ ವೇಳೆ ನಾಟಕೋತ್ಸವದ ಕುರಿತು ಮಾತನಾಡಿದ ಅವರು, ಒತ್ತಡದ ಬದುಕಿನಲ್ಲಿ ಜೀವನದ ಮೌಲ್ಯಗಳನ್ನು ತಿಳಿಸುವ ಇಂತಹ ಐತಿಹಾಸಿಕ ನಾಟಕಗಳನ್ನು ಈ ಮಾದರಿಯ ವೇದಿಕೆಯಲ್ಲಿ ನಡೆಯುತ್ತಿರುವುದು ಸಂತಸದ ವಿಷಯ, ಜೊತೆಗೆ ಏವ ಯುಗದಲ್ಲಿ ರಂಗಭೂಮಿ ಎಂದಿಗೂ ಪ್ರಸ್ತುತ ಎಂದು ಹೇಳಿದರು. ಎರಡು ದಿನಗಳ ಕಾಲ ನಡೆಯುವ ನಾಟಕೋತ್ಸವದಲ್ಲಿ ಮೊದಲ ದಿನ ರಣದುಂದುಭಿ ನಾಟಕ ನಡೆಯಿತು. ಮಂಗಳವಾರ ವರ ಭಕ್ತ ಸಾಚ ನಡೆಯಲಿದೆ. ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಆರ್. ಚಂದ್ರಶೇಖರ್, ಪತ್ರಕರ್ತ ಚಂದ್ರಶೇಖರ್ ಯಲಬುರ್ಗಿ, ಅಮ್ಮನ ಮಡಿಲು ಟ್ರಸ್ಟ್ ಅಧ್ಯಕ್ಷೆ ಪರಿಮಳ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಸೇತುಬಂಧ ಕಾರ್ಯಕ್ರಮ ಪೂರ್ಣಗೊಳಿಸಲು ಗಡುವು

• **ಬೆಂಗಳೂರು:** ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ನಡೆಯುತ್ತಿರುವ ಸೇತುಬಂಧ ಕಾರ್ಯಕ್ರಮವನ್ನು ಜೂ.25ರೊಳಗೆ ಪೂರ್ಣಗೊಳಿಸಿ, ಅಂಕಗಳನ್ನು ಸ್ಯಾಟ್ಸ್ ತಂತ್ರಾಂಶದಲ್ಲಿ ನಮೂದಿಸಬೇಕು ಎಂದು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಂಸ್ಥೆ ಸೂಚನೆ ನೀಡಿದೆ. ಶಾಲಾ ಮಟ್ಟದಲ್ಲಿ ನಡೆಯುತ್ತಿರುವ ಸೇತುಬಂಧ ಕಾರ್ಯಕ್ರಮದ ಪೂರ್ವ ಪರೀಕ್ಷೆ ಮತ್ತು ಸಾಫಲ್ಯ ಪರೀಕ್ಷೆಯ ಶ್ರೇಣಿಗಳನ್ನು ಸ್ಯಾಟ್ಸ್‌ನಲ್ಲಿ ದಾಖಲಿಸುವುದು ಕಡ್ಡಾಯವಾಗಿದೆ. ಪ್ರಾಂಶುಪಾಲರು, ಸೇತುಬಂಧ ನೋಡಲ್ ಅಧಿಕಾರಿಗಳು, ತಾಲೂಕು ಮತ್ತು ಜಿಲ್ಲಾ ಅಧಿಕಾರಿಗಳು ಮತ್ತು ಸಂಬಂಧಿಸಿದ ಅಧಿಕಾರಿಗಳು ಜೂ.25ರೊಳಗೆ ಈ ಮಾಹಿತಿಯನ್ನು ಸ್ಯಾಟ್ಸ್‌ನಲ್ಲಿ ದಾಖಲಿಸಬೇಕು ಎಂದು ಸೂಚಿಸಲಾಗಿದೆ. ಪರೀಕ್ಷೆಯಲ್ಲಿ ಬಿ ಶ್ರೇಣಿ ಪಡೆದ ವಿದ್ಯಾರ್ಥಿಗಳಿಗೆ ಸೂಕ್ತ ಪರಿಹಾರಾತ್ಮಕ ಕ್ರಮ ಮತ್ತು ಅವರ ಕಲಿಕಾ ಸುಧಾರಣೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಈಗಾಗಲೇ ಇಲಾಖೆಯ ನಿರ್ದೇಶನ ನೀಡಿದೆ. ಈ ಹಿನ್ನೆಲೆಯಲ್ಲಿ ಸೆಪ್ಟೆಂಬರ್ ಮತ್ತು ಡಿಸೆಂಬರ್‌ನಲ್ಲಿ ವಿದ್ಯಾರ್ಥಿಗಳಿಗೆ ಮೌಲ್ಯಾಂಕನ ಪರೀಕ್ಷೆ ನಡೆಸುವಂತೆ ಸೂಚಿಸಿದೆ.

ರಂಗೋಲಿ ಸಮೃದ್ಧಿಯ ಸಂಕೇತ: ಶಿವಮಾದಯ್ಯ

• **ಕೆಂಗೇರಿ:** ರಂಗೋಲಿ ಮನೆಯ ಅಂಗಳದ ಸಮೃದ್ಧಿಯ ಸಂಕೇತವಾಗಿ ಎಂದು ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ ಶಿವಮಾದಯ್ಯ ಹೇಳಿದರು. ಕೆಂಗೇರಿ ಕೋಟೆ ವಾರ್ಡಿನ ಬಡಾವಣೆಯಲ್ಲಿ ಶಾಸಕ ಎಸ್.ಟಿ. ಸೋಮಶೇಖರ್ ಅವರ ನೇತೃತ್ವದಲ್ಲಿ ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಆಯೋಜಿಸಿರುವ ಮನೆಗೊಂದು ರಂಗೋಲಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಮಹಿಳೆಯರಲ್ಲಿ ಸೃಜನಶೀಲತೆ ಹಾಗೂ ಭಾರತೀಯ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಮಹಿಳೆಯರ ಪಾತ್ರ ಬಹಳ ಮಹತ್ವದ್ದು ಎಂದು ತಿಳಿಸಿದರು. ಕೆಂಗೇರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೈಲಾರಯ್ಯ, ನಾಗರಾಜ್, ವಾರ್ಡ್ ಅಧ್ಯಕ್ಷ ಟಿ. ಪ್ರಭಾಕರ್ ಇದ್ದರು.

ಸಭೆಯಲ್ಲಿ ಸಚಿವ ಕೃಷ್ಣಬೈರೇಗೌಡ ಅಧಿಕಾರಿಗಳಿಗೆ ತರಾಟೆ | ರಸ್ತೆ ಗುಂಡಿ ಮುಚ್ಚಲು ಅಗತ್ಯ ಅನುದಾನ ಲಭ್ಯವಿದೆ

ದೀರ್ಘಬಾಳಿಕೆಯ ಗುಣಮಟ್ಟದ ರಸ್ತೆ ನಿರ್ಮಿಸಿ

• **ಬೆಂಗಳೂರು:** ಗುಂಡಿ ಇಲ್ಲದ ರಸ್ತೆ ನಿರ್ಮಾಣ ಮಾಡುವುದು ರಾಕೆಟ್ ಸೈನ್ಸ್? ನೆರೆಹೊರೆಯ ರಾಜ್ಯಗಳಲ್ಲಿ ನೋಡಿ, ನಮಗೆ ಮಳೆ ಬರುವುದು ಗೊತ್ತಿಲ್ವಾ? ರಸ್ತೆ ಎಷ್ಟು ವರ್ಷ ಬಾಳಿಕೆ ಬರಬೇಕು ಎಂಬ ಕನಿಷ್ಠ ಜ್ಞಾನ ನಿಮಗಿಲ್ವಾ? ಎಂದು ಬೆಂಗಳೂರಿನ ರಸ್ತೆ ಗುಂಡಿ ವಿಚಾರವಾಗಿ ತಮ್ಮ ಮೊದಲ ಸಭೆಯಲ್ಲಿ ಬೆಂಗಳೂರು ನಗರಾಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಜಿಬಿಎ ಅಧಿಕಾರಿಗಳನ್ನು ತರಾಟೆ ತೆಗೆದುಕೊಂಡರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಅಧಿಕಾರಿಗಳ ಸಭೆ ನಡೆಸಿದ ಅವರು, ಬೆಂಗಳೂರಿನ ನಲ್ಲಿ ರಸ್ತೆ ಗುಂಡಿ ಮುಚ್ಚುವುದು, ಗುಂಡಿ ಮುಚ್ಚುತ್ತಿದ್ದಂತೆ ಮತ್ತೊಂದು ಕಡೆ ಗುಂಡಿ ಬಾಯ್ತೆರೆಯುವುದು ವಾಡಿಕೆಯಾಗಿಬಿಟ್ಟಿದೆ. ಇದರ ಬದಲು ಗುಂಡಿ ಬೀಳದಂತೆ ಗುಣಮಟ್ಟದ ರಸ್ತೆ ನಿರ್ಮಿಸಲು ಇರುವ ಸಮಸ್ಯೆ ಯಾವುದು ಏನು? ಗುಣಮಟ್ಟದ ರಸ್ತೆ ನಿರ್ಮಾಣವೇನು ರಾಕೆಟ್ ಸೈನ್ಸ್ ಗಿಂತ ಕ್ಲಿಷ್ಟವೇ? ಎಂದು ಅಧಿಕಾರಿಗಳಿಗೆ ಕ್ಲಾಸ್ ತೆಗೆದುಕೊಂಡರು.

ದಕ್ಷಿಣ ಭಾರತದ ಮಟ್ಟಿಗೆ ಇತರ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ಬೆಂಗಳೂರಿನ ರಸ್ತೆಗಳು ತೀರಾ ಕಳಪೆಯಾಗಿವೆ ಎಂದು ಅಭಿಪ್ರಾಯಪಟ್ಟ ಅವರು, ಇನ್ನುಂದೆ ಹಳೆ ಕಲ್ಲು ಹೊಸ ಬಿಲ್ಲು ಎಂಬಂತೆ ರಸ್ತೆ ಗುಂಡಿ ಮುಚ್ಚುವ ತಾತ್ಕಾಲಿಕ ಪರಿಹಾರ ಬದಲಾಗಿ ಅಧಿಕಾರಿಗಳು ಗುಣಮಟ್ಟದ ರಸ್ತೆ ನಿರ್ಮಾಣಕ್ಕೆ ಮುಂದಾಗಬೇಕು. ಕೆಟ್ಟ ರಸ್ತೆಗಳ ಕಾರಣಕ್ಕೆ ಉಂಟಾಗುತ್ತಿರುವ ಜನರ ಬವಣೆ ನೀಗಬೇಕು. ಒಳ್ಳೆಯ ಕೆಲಸ ಮಾಡುವ ಅಧಿಕಾರಿಗಳ ಹಿಂದೆ ನಾನು ಎಂದಿಗೂ ಬೆಂಬಲವಾಗಿ ನಿಲ್ಲುತ್ತೇನೆ ಎಂದು ಭರವಸೆ ನೀಡಿದರು.

ನಗರದ ರಸ್ತೆ ಗುಂಡಿಗಳನ್ನು ಮುಚ್ಚಲು ಅಗತ್ಯ ಅನುದಾನ ಲಭ್ಯವಿದೆ. ವ್ಯತ್ಯಾಸವಾಗಿ ಹಾಗೂ ಗುಣಮಟ್ಟದೊಂದಿಗೆ ಗುಂಡಿ ಮುಚ್ಚುವ ಕಾಮಗಾರಿಗಳನ್ನು ಕೈಗೊಳ್ಳಬೇಕು. ಇದರಿಂದ ಭವಿಷ್ಯದಲ್ಲಿ ಉಂಟಾಗುವ ಸಮಸ್ಯೆಗಳನ್ನು ತಡೆಯಲು ಸಾಧ್ಯವಾಗುತ್ತದೆ. ರಸ್ತೆ ಕಾಮಗಾರಿಗಳ ಗುಣಮಟ್ಟವನ್ನು ಮತ್ತಷ್ಟು ಸುಧಾರಿಸಲು ಕ್ರಮ ಕೈಗೊಳ್ಳಲು ನಿರ್ದೇಶನ ನೀಡಿದರು.



ನಾಗರಿಕರ ಸಹಕಾರ ಅಗತ್ಯ: ನಗರದಲ್ಲಿ ಮನೆ-ಮನೆಗೆ ಕಸ ಸಂಗ್ರಹಿಸುವ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಬೇಕು. ಕೆಲವರು ಮನೆ ಬಾಗಿಲಿಗೆ ಕಸ ಸಂಗ್ರಹ ವಾಹನ ಬಂದರೂ ರಸ್ತೆ ಬದಿಯಲ್ಲಿ ಕಸವನ್ನು ತಂದು ಹಾಕುತ್ತಿರುವುದು ಕಂಡುಬರುತ್ತಿದೆ. ಕಸ ಸಂಗ್ರಹಣಾ ವ್ಯವಸ್ಥೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ನಾಗರಿಕರ ಸಹಕಾರವೂ ಅಗತ್ಯವಾಗಿದೆ. ಅಧಿಕಾರಿಗಳು ಮತ್ತು ಸಾರ್ವಜನಿಕರು ಒಟ್ಟಾಗಿ ಕೆಲಸ ಮಾಡಿದಾಗ ಮಾತ್ರ ಈ ಸಮಸ್ಯೆಗೆ ಶಾಶ್ವತ ಪರಿಹಾರ ಸಾಧ್ಯ ಎಂದು ಹೇಳಿದರು.

» ಐದು ಪಾಲಿಕೆಗಳನ್ನು ರಚಿಸುವಾಗ ಪಾಲಿಕೆಗಳ ನಡುವೆ ಆದಾಯ ಅಂತರ ಇರಲಿದೆ ಎಂಬ ಅರಿವಿತ್ತು

» ಸರಿಪಡಿಸಲು ಸರ್ಕಾರದ ಬಳಿ ಮೂರ್ನಾಲ್ಕು ಪರಿಹಾರ ವಿಧಾನ ಪರಿಶೀಲನೆ ಹಂತದಲ್ಲಿದೆ

» ಇ-ಖಾತಾ, ಬಿ-ಖಾತಾದಿಂದ ಎ-ಖಾತಾ ಪರಿವರ್ತನೆಯಂತಹ ಯೋಜನೆಗಳು ಭವಿಷ್ಯದಲ್ಲಿ ವಂಚನೆ ಮತ್ತು ಭ್ರಷ್ಟಾಚಾರವನ್ನು ಸಂಪೂರ್ಣವಾಗಿ ತಡೆಗಟ್ಟಲಿದೆ



> ಬೆಂಗಳೂರು ನಗರದ ಅಭಿವೃದ್ಧಿ ಎಂಬುದು ಕೇವಲ ಒಂದು ರಾಜಕೀಯ ಪಕ್ಷಕ್ಕೆ ಸೀಮಿತವಾದುದಲ್ಲ. ರಾಜಕೀಯ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ವಿರೋಧ ಪಕ್ಷದವರು, ಸಂಸದರು ಮತ್ತು ಶಾಸಕರು ಒಟ್ಟಾಗಿ ಕೆಲಸ ಮಾಡಬೇಕಿದೆ. ಪ್ರತಿಯೊಬ್ಬ ನಾಗರಿಕನಿಗೂ ತನಗಾಗುವ ಅನ್ಯಾಯದ ವಿರುದ್ಧ ಧ್ವನಿ ಎತ್ತುವ ಸ್ವಾತಂತ್ರ್ಯವಿದ್ದು, ಅವರ ರಚನಾತ್ಮಕ ಟೀಕೆಗಳನ್ನು ಸರ್ಕಾರವು ಸದಾ ಗೌರವಿಸುತ್ತದೆ.
> ■ **ಕೃಷ್ಣ ಬೈರೇಗೌಡ ,** ಬೆಂಗಳೂರು ನಗರಾಭಿವೃದ್ಧಿ ಸಚಿವ

ಟೆಂಡರ್ ಪರಿಶೀಲನೆಗೆ ಉನ್ನತ ಸಮಿತಿ

ಐದು ಟೆಂಡರ್ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಸರ್ಕಾರವು ಉನ್ನತ ಅಧಿಕಾರಿಗಳ ಪರಿಶೀಲನಾ ಸಮಿತಿಯನ್ನು ನೇಮಿಸಿದೆ. ಆದು ವಿರೋಧ ಪಕ್ಷದವರು ಸಲ್ಲಿಸಿರುವ ದೂರುಗಳು ಮತ್ತು ಆಕ್ಷೇಪಣೆಗಳನ್ನು ಪರಿಶೀಲಿಸಲಿದೆ. ಈ ಸಮಿತಿಯು ಸ್ವತಂತ್ರವಾಗಿ ಕಾರ್ಯನಿರ್ವಹಿಸಲಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿನ ಸರಿ-ತಪ್ಪುಗಳ ಬಗ್ಗೆ ತನಿಖೆ ನಡೆಸಿ ವರದಿ ನೀಡಲಿದೆ. ವಿರೋಧ ಪಕ್ಷದವರ ಬಳಿ ಯಾವುದೇ ಪೂರಕ ದಾಖಲೆಗಳಿದ್ದರೆ ನೇರವಾಗಿ ಸಮಿತಿಗೆ ನೀಡಬಹುದು ಎಂದು ಸಚಿವರು ಮಾಹಿತಿ ನೀಡಿದರು.

ಬಾಸ್ ಚಿತ್ರ ಬಿಡುಗಡೆಗೆ ತಡೆ ಕೋರಿ ಹೈಕೋರ್ಟ್‌ಗೆ ಮೇಲ್ಮನವಿ ಅರ್ಜಿ

• **ಬೆಂಗಳೂರು:** ಜೂ.19ರಂದು ರಾಜ್ಯಾದ್ಯಂತ ಬಿಡುಗಡೆಯಾಗಲಿರುವ ಬಾಸ್ ಚಲನಚಿತ್ರಕ್ಕೆ ಮತ್ತೆ ಕಾನೂನು ಸಂಕಷ್ಟ ಎದುರಾಗಿದೆ. ನಟ ದರ್ಶನ್ ಶ್ರೀನಿವಾಸ್ ಹಾಗೂ ವಿಜಯಲಕ್ಷ್ಮಿ ದರ್ಶನ್ ಅವರು ಚಿತ್ರದ ಬಿಡುಗಡೆಗೆ ತಡೆ ನೀಡುವಂತೆ ಕೋರಿ ಕರ್ನಾಟಕ ಹೈಕೋರ್ಟ್ ಮೇಲ್ಮನವಿ ಅರ್ಜಿ ಸಲ್ಲಿಸಿದ್ದಾರೆ.

ನಗರ ಸಿವಿಲ್ ನ್ಯಾಯಾಲಯವು ಈ ಹಿಂದೆ ಚಿತ್ರದ ಬಿಡುಗಡೆಗೆ ವಿಧಿಸಿದ್ದ ಮಧ್ಯಂತರ ತಡೆಯಾಜ್ಞೆಯನ್ನು ತೆರವುಗೊಳಿಸಿ ಬಿಡುಗಡೆಗೆ ಅವಕಾಶ ನೀಡಿತ್ತು. ಆದರ ಬೆನ್ನಲ್ಲೇ ಚಿತ್ರತಂಡವು ಜೂ.19ರಂದು ಚಿತ್ರವನ್ನು ರಾಜ್ಯಾದ್ಯಂತ ಬಿಡುಗಡೆ ಮಾಡುವುದಾಗಿ ಘೋಷಿಸಿತ್ತು. ಆದರೆ ಸಿವಿಲ್ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಹೈಕೋರ್ಟ್ ಮೊರೆ ಹೋಗಿರುವ ಅರ್ಜಿದಾರರು, ಚಿತ್ರದ ಬಿಡುಗಡೆಗೆ ತಕ್ಷಣದ ಮಧ್ಯಂತರ ತಡೆಯಾಜ್ಞೆ ನೀಡುವಂತೆ ಮನವಿ ಮಾಡಿದ್ದಾರೆ. ಚಿತ್ರದ ಕಥಾವಸ್ತು, ಪಾತ್ರಗಳ ನಿರೂಪಣೆ ಹಾಗೂ ಇತರ ವಿವಾದಿತ ಅಂಶಗಳಿಗೆ ಸಂಬಂಧಿಸಿದಂತೆ ಗಂಭೀರ ಆಕ್ಷೇಪಣೆಗಳನ್ನು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ ಎಂದು ತಿಳಿದುಬಂದಿದೆ. ಚಿತ್ರ ಬಿಡುಗಡೆ ದಿನಾಂಕ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಪ್ರಕರಣ ಮಹತ್ವ ಪಡೆದುಕೊಂಡಿದ್ದು, ಹೈಕೋರ್ಟ್ ತೀರ್ಪಿನತ್ತ ಚಿತ್ರರಂಗ, ಅಭಿಮಾನಿಗಳ ಚಿತ್ತ ನೆಟ್ಟಿದೆ. ಮಧ್ಯಂತರ ತಡೆಯಾಜ್ಞೆ ನೀಡುತ್ತದೆಯೇ ಅಥವಾ ಚಿತ್ರ ಬಿಡುಗಡೆಗೆ ಹಾದಿ ನಿರಾಳ ತೋರಿಸುತ್ತದೆಯೇ ಎಂಬುದು ಕುತೂಹಲ ಮೂಡಿಸಿದೆ. ಚಿತ್ರದ ಭವಿಷ್ಯ ಇದೀಗ ಕೋರ್ಟ್ ನಿರ್ಧಾರದ ಮೇಲೆ ಅವಲಂಬಿತವಾಗಿದೆ.

ಆರ್‌ಟಿಒ ಅಧಿಕಾರಿಗಳಿಗೆ ತೀವ್ರ ಆತಂಕ | ಗೊಂದಲದ ವಾತಾವರಣ ನಿರ್ಮಾಣ

ಪ್ರಾದೇಶಿಕ ಸಾರಿಗೆ ಕಚೇರಿಗಳಿಗೆ ಹುಸಿ ಬಾಂಬ್ ಬೆದರಿಕೆ

• **ಬೆಂಗಳೂರು:** ನಗರದ ಬಹುತೇಕ ಪ್ರಾದೇಶಿಕ ಸಾರಿಗೆ ಕಚೇರಿಗಳಿಗೆ, ವಿಶೇಷವಾಗಿ ದಕ್ಷಿಣ ಭಾಗದ ಕಚೇರಿಗಳಿಗೆ ಬಾಂಬ್ ಇಟ್ಟಿರುವುದಾಗಿ ಬೆದರಿಕೆ ಇ-ಮೇಲ್ ರವಾನೆಯಾಗಿದ್ದು, ಇದರಿಂದ ಆರ್‌ಟಿಒ ಅಧಿಕಾರಿಗಳಿಗೆ ಕೆಲಕಾಲ ತೀವ್ರ ಆತಂಕ ಮತ್ತು ಗೊಂದಲದ ವಾತಾವರಣ ನಿರ್ಮಾಣವಾಗಿತ್ತು.

ಕಸ್ತೂರಿನಗರ, ಜ್ಞಾನಭಾರತಿ, ತಿಲಕ್ ನಗರ, ಎಚ್‌ಎಸ್‌ಆರ್ ಲೇಔಟ್ ಸೇರಿದಂತೆ ಬೆಂಗಳೂರು ನಗರದ ಬಹುತೇಕ ಎಲ್ಲಾ ಪ್ರಮುಖ ಆರ್‌ಟಿಒ ಕಚೇರಿಗಳಿಗೆ ಈ ಬೆದರಿಕೆ ಸಂದೇಶ ರವಾನೆಯಾಗಿದ್ದು, ಇಲಾಖೆಯ ಸಿಬ್ಬಂದಿ ಹಾಗೂ ಕಚೇರಿಗಳಿಗೆ ಭೇಟಿ ನೀಡಿದ್ದ ಸಾರ್ವಜನಿಕರಲ್ಲಿ ಕೆಲಕಾಲ ತೀವ್ರ ಆತಂಕ, ಗೊಂದಲದ ವಾತಾವರಣ ನಿರ್ಮಾಣವಾಗಿತ್ತು.

ಬೆದರಿಕೆ ಇ-ಮೇಲ್ ಬಂದ ತಕ್ಷಣವೇ ಎಚ್ಚೆತ್ತುಕೊಂಡ ಆರ್‌ಟಿಒ ಅಧಿಕಾರಿಗಳು ತಕ್ಷಣವೇ ಸ್ಥಳೀಯ ಪೊಲೀಸರಿಗೆ ಈ ಕುರಿತು ಮಾಹಿತಿ ನೀಡಿದರು. ಕಿಡಿಗೇಡಿಗಳು ಕಳುಹಿಸಿದ್ದ ಇಮೇಲ್ ಸಂದೇಶದಲ್ಲಿ ಮಧ್ಯಾಹ್ನ 1.30 ಗಂಟೆಗೆ ಸರಿಯಾಗಿ ಕಚೇರಿಗಳಲ್ಲಿ ಬಾಂಬ್ ಬ್ಲಾಸ್ಟ್ ಮಾಡಲಾಗುವುದು ಎಂದು ಅತ್ಯಂತ ನಿಖರವಾದ ಸಮಯವನ್ನು ಉಲ್ಲೇಖಿಸಿ ಸವಾಲು ಹಾಕಲಾಗಿತ್ತು.

ಸಮಯದ ಗಂಭೀರತೆಯನ್ನು ಅರಿತು ತಕ್ಷಣವೇ ಕಾರ್ಯಪ್ರವೃತ್ತರಾದ ಸ್ಥಳೀಯ ಪೊಲೀಸರು ಹಾಗೂ ಬಾಂಬ್ ಪತ್ತೆ ಮತ್ತು ನಿಷ್ಕ್ರಿಯ ದಳದ ಸಿಬ್ಬಂದಿ ಎಲ್ಲಾ ಆರ್‌ಟಿಒ ಕಚೇರಿಗಳಿಗೆ ಧಾವಿಸಿ ಬರುವಿನ ತಪಾಸಣೆ ಕೈಗೊಂಡರು. ಮುನ್ನೆಚ್ಚರಿಕೆ ಕ್ರಮವಾಗಿ ಕಚೇರಿಯಲ್ಲಿದ್ದ ಸಿಬ್ಬಂದಿ ಮತ್ತು ಸಾರ್ವಜನಿಕರನ್ನು ಸುರಕ್ಷಿತ ಸ್ಥಳಗಳಿಗೆ ರವಾನಿಸಿ, ಇಡೀ ಆವರಣವನ್ನು ಪೊಲೀಸರು ತಮ್ಮ ಸುಪರ್ದಿಗೆ ಪಡೆದುಕೊಂಡರು.

ನಗರದಾದ್ಯಂತ ಇರುವ ಎಲ್ಲಾ ಆರ್‌ಟಿಒ ಕಚೇರಿಗಳ ಮೂಲೆ ಮೂಲೆಗಳನ್ನು ಹಿರಿಯ ಪೊಲೀಸ್ ಅಧಿಕಾರಿಗಳ ನೇತೃತ್ವದಲ್ಲಿ ಅತ್ಯಂತ ಸೂಕ್ಷ್ಮವಾಗಿ ಪರಿಶೀಲನೆ ನಡೆಸಲಾಯಿತು. ವಿಸ್ತೃತ ಕೃತ್ಯಗಳಿಗೆ ಬಳಸುವ ಯಾವುದೇ ಸ್ಫೋಟಕ ವಸ್ತುಗಳು ಪತ್ತೆಯಾಗದ ಹಿನ್ನೆಲೆಯಲ್ಲಿ, ಕೊನೆಗೂ ಇದು ಹುಸಿ ಬಾಂಬ್ ಬೆದರಿಕೆ ಎಂಬುದು ಖಚಿತವಾಯಿತು ಎಂದು ದೃಢಪಟ್ಟಿತು. ಯಾವುದೇ ಕಚೇರಿಯಲ್ಲಿ ಯಾವುದೇ ರೀತಿಯ ಬಾಂಬ್ ಅಥವಾ ಅನುಮಾನಾಸ್ಪದ ವಸ್ತುಗಳು ಪತ್ತೆಯಾಗಿಲ್ಲ ಎಂದು ಪೊಲೀಸರು ಅಧಿಕೃತವಾಗಿ ಸ್ಪಷ್ಟಪಡಿಸಿದ ನಂತರ ಆರ್‌ಟಿಒ ಅಧಿಕಾರಿಗಳು ಮತ್ತು ಸಾರ್ವಜನಿಕರು ನಿಟ್ಟುಸಿರು ಬಿಟ್ಟಿದ್ದಾರೆ.

ಸದ್ಯ ಕಳುಹಿಸಿದ ಇಮೇಲ್ ಎಲ್ಲಿಂದ ಬಂದಿದೆ ಮತ್ತು ಇದರ ಹಿಂದೆ ಇರುವ ದುಷ್ಕರ್ಮಿಗಳು ಯಾರು ಎಂಬುದನ್ನು ಪತ್ತೆ ಹಚ್ಚಲು ಸೈಬರ್ ಕ್ರೈಂ ಪೊಲೀಸರ ನೆರವು ನೊಂದಿಗೆ ಸ್ಥಳೀಯ ಪೊಲೀಸರು ತೀವ್ರ ಶೋಧಕಾರ್ಯವನ್ನು ಆರಂಭಿಸಿದ್ದಾರೆ.



ಶ್ರೀ ಮಂಗಳ ಶಿಕ್ಷಣ ಸಮಿತಿಯ ತಾಲಾ ಕಾಲೇಜುಗಳಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವ್ಯಾಸಂಗ ಮಾಡಿ ಹೆಚ್ಚು ಅಂಕ ಪಡೆದ ಮಕ್ಕಳಿಗೆ ಪ್ರಯತ್ನ ನಿಮ್ಮದು ಪುರಸ್ಕಾರ ನಮ್ಮದು ಎಂಬ ಶೀರ್ಷಿಕೆಯಡಿ ಪ್ರತಿಭಾ ಪುರಸ್ಕಾರ ಮಾಡಿ, ವಯೋನಿವೃತ್ತಿ ಹೊಂದಿದ ಸಿಬ್ಬಂದಿಗೆ ಗೌರವಿಸಿ ವಾರ್ಷಿಕ ವರದಿ ಪುಸ್ತಕ ಬಿಡುಗಡೆ ಮಾಡಲಾಯಿತು.

₹8 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

• **ಬೆಂಗಳೂರು:** ನಗರದಲ್ಲಿ 23 ಮಂದಿ ಡ್ರಗ್ ಪೆಡ್ಲರ್‌ಗಳನ್ನು ಬಂಧಿಸಿರುವ ಸಿಸಿಬಿ ಪೊಲೀಸರು, 8 ಕೋಟಿ ರೂ. ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ.

ಡ್ರಗ್ಸ್ ಮಾರಾಟದ ವಿರುದ್ಧ ಸಮರ ಸಾರಿರುವ ಸಿಸಿಬಿ ಪೊಲೀಸರು ಹೆಬ್ಬಾಳ, ಇಂದಿರಾನಗರ, ಜೀವನಭೀಮಾನಗರ, ಸದ್ದುಗುಂಟೆಪಾಳ್ಯ, ಹೆಣ್ಣೂರು, ಬಾಣಸವಾಡಿ,ಹಲಸೂರು, ಹಾಗೂ ಕೆಂಪೇಗೌಡನಗರದಲ್ಲಿ ಕಾರ್ಯಾಚರಣೆ ಕೈಗೊಂಡು 23 ಮಂದಿಯನ್ನು ಬಂಧಿಸಿ, 8 ಕೋಟಿ ರೂ. ಮೌಲ್ಯದ ಡ್ರಗ್ಸ್ ಜಪ್ತಿ ಮಾಡಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ತಿಳಿಸಿದರು.

ಮಂಗಳವಾರ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಬಂಧಿತ 23 ಮಂದಿ ಡ್ರಗ್ಸ್ ಪೆಡ್ಲರ್‌ಗಳಿಂದ 5 ಕೆಜಿ 360 ಗ್ರಾಂ ಹೈಡ್ರೋಗಾಂಜಾ, 143 ಗ್ರಾಂ ಕೊಕೇನ್, 10 ಕೆಜಿ 998 ಗ್ರಾಂ ಗಾಂಜಾ, 237 ಗ್ರಾಂ ಎಂಡಿಎಂಎ, 107 ಗ್ರಾಂ ಮೆಥಾಫಿಟಮೈನ್, 180 ಬ್ಲಾಕ್ ಸಿ-ಸಿಗರೇಟ್ ಆಯಿಲ್ ಇ-ಸಿಗರೇಟ್, 452 ಬ್ಲಾಕ್ ವಿದೇಶಿ ಸಿಗರೇಟ್, 1206 ನಂ ಹುಕ್ಕಾ ಸಿಗರೇಟ್, 1197 ಇ-ಸಿಗರೇಟ್, 490 ವಿದೇಶಿ ಸಿಗರೇಟ್, 120 ಸೆಟ್ ಹುಕ್ಕಾ ಸಿಗರೇಟ್, 100 ಇ-ಸಿಗರೇಟ್ ರೀಫಿಲ್, 6 ಹುಕ್ಕಾ ಸೆಟ್ ವಶಪಡಿಸಿಕೊಳ್ಳಲಾಗಿದೆ ಎಂದು ಸೀಮಂತ್ ಕುಮಾರ್ ಸಿಂಗ್ ಹೇಳಿದರು. ಬಂಧಿತ ಡ್ರಗ್ಸ್ ಪೆಡ್ಲರ್‌ಗಳಲ್ಲಿ ವಿದೇಶದ ಇಬ್ಬರು, ಹೊರ ರಾಜ್ಯದ ಅರು, ಸ್ಥಳೀಯ 15 ಮಂದಿ ಸೇರಿದ್ದು, ವಿಚಾರಣೆ ನಡೆಸಲಾಗಿದೆ.



ಮನೆ ಬಾಗಿಲು ಮುರಿದು ಚಿನ್ನಾಭರಣ ಕಳವು

• **ಬೆಂಗಳೂರು:** ಮನೆಯ ಬಾಗಿಲ ಬೀಗ ಮುರಿದು ಒಳ ನುಗ್ಗಿದ ಚೋರರು 15 ಸಾವಿರ ನಗದು ಸೇರಿದಂತೆ 14 ಲಕ್ಷ ಮೌಲ್ಯದ ಚಿನ್ನ ಹಾಗೂ ಬೆಳ್ಳಿ ಆಭರಣಗಳನ್ನು ಕಳ್ಳತನ ಮಾಡಿಕೊಂಡು ಪರಾರಿಯಾಗಿರುವ ಘಟನೆ ಕೆ.ಜಿ.ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಲಕ್ಷ್ಮೀಪುರ 3ನೇ ಕ್ರಾಸ್‌ನಲ್ಲಿ ಕೋಮಲಾ ಎಂಬುವರು ತಮ್ಮ ಸಹೋದರನ ಜೊತೆ ವಾಸವಿದ್ದಾರೆ. ಸೋಮವಾರ ಬೆಳಗ್ಗೆ 9 ಗಂಟೆ ಸುಮಾರಿಗೆ ಕೋಮಲಾ ಅವರು ಚಿಕ್ಕಪ್ಪಟ್ಟಣದ ಗ್ರಾಮಕ್ಕೆ ತೆರಳಿದ್ದರು ಚಾಮುಂಡೇಶ್ವರಿ ದೇವಸ್ಥಾನಕ್ಕೆ ಹೋಗಿದ್ದರು. ಇವರ ಸಹೋದರ ಕೆಲಸಕ್ಕೆ ತೆರಳಿದ್ದರು. ಆ ಸಂದರ್ಭದಲ್ಲಿ ಕಳ್ಳರು ಇವರ ಮನೆಯ ಬೀಗ ಮುರಿದು ಒಳಗೆ ನುಗ್ಗಿ ಬೀರುವಿನಲ್ಲಿದ್ದ ವಸ್ತುಗಳನ್ನೆಲ್ಲ ಚೆಲ್ಲಾಪಿಲ್ಲಿ ಮಾಡಿ ಕಪಾಟಿಗೆ ಸಿಕ್ಕಿದ 15 ಸಾವಿರ ಹಣ, 108 ಗ್ರಾಂ ಚಿನ್ನಾಭರಣ, 150 ಗ್ರಾಂ ಬೆಳ್ಳಿ ವಸ್ತುಗಳನ್ನು ಕಳ್ಳತನ ಮಾಡಿಕೊಂಡು ಪರಾರಿಯಾಗಿದ್ದಾರೆ. ಅದಾದ ಇಡೀ ಸಹೋದರನ ಗಮನಕ್ಕೆ ಬಂದಿದ್ದು, ರಾತ್ರಿ 11 ಗಂಟೆ ಸುಮಾರಿನಲ್ಲಿ ಕೋಮಲಾ ಅವರು ಮನೆಗೆ ಬಂದಾಗ ಬೀಗವಿದ್ದ ಬಾಗಿಲು ಮುರಿದಿರುವುದು, ಮನೆಯಲ್ಲಿ ಕಳ್ಳತನವಾಗಿರುವುದು ಕಂಡು ಬಂದಿದೆ. ತಕ್ಷಣ ಅವರು ಪೊಲೀಸರಿಗೆ ವಿಷಯ ತಿಳಿಸಿದ್ದಾರೆ. ಸ್ಥಳಕ್ಕೆ ಹಾಗೂ ಸಿಬ್ಬಂದಿ, ಬೆರಳಚ್ಚು ತಜ್ಞರು ಹಾಗೂ ಶ್ವಾನದಳದವರು ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿದ್ದಾರೆ. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಘಟನಾ ಸ್ಥಳದ ಸುತ್ತಮುತ್ತಲಿನ ರಸ್ತೆಗಳಲ್ಲಿರುವ ಸಿ.ಸಿ. ಕ್ಯಾಮರಾಗಳನ್ನು ಪರಿಶೀಲಿಸಿ ಕಳ್ಳರ ಪತ್ತೆಗೆ ಬಲೆ ಬೀಸಿದ್ದಾರೆ.

1.5 ಕೋಟಿ ಜನರ ತೆರಿಗೆ ಹಣ ಗುಳುಂ | ಸ್ಥಳೀಯ ನಾಗರಿಕರ ಆಕ್ರೋಶ

ಬಳಕೆಗೆ ಬಾರದ ಘನತ್ಯಾಜ್ಯ ನಿರ್ವಹಣೆ ಘಟಕ

• **ಕೆಂಗೇರಿ:** ಶಿವನಪಾಳ್ಯದ ಘನತ್ಯಾಜ್ಯ ನಿರ್ವಹಣೆಯ ಘಟಕ ಸುಮಾರು 1.5ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗಿದ್ದರೂ ಯಾವುದೇ ಪ್ರಯೋಜನವಾಗಿಲ್ಲ, 1.5 ಕೋಟಿ ಜನರ ತೆರಿಗೆ ಗುಳುಂ ಆಗಿದೆ ಎಂದು ಸ್ಥಳೀಯ ನಾಗರಿಕರು ಆಕ್ರೋಶ ವ್ಯಕ್ತಪಡಿಸಿದರು.



ಯಶವಂತಪುರ ವಿಧಾನಸಭಾ ಕ್ಷೇತ್ರದ ಶಿವನಪಾಳ್ಯ ವಾರ್ಡಿನ ದುಬಾಸಿಪಾಳ್ಯದ ಘನತ್ಯಾಜ್ಯ ನಿರ್ವಹಣಾ ಘಟಕದಿಂದ ಬರುತ್ತಿರುವ ದುರ್ವಾಸನೆಯಿಂದ ಆಕ್ರಮಿತ ಪ್ರದೇಶ ಬಡಾವಣೆಯ ನಿವಾಸಿಗಳು ನರಕಯಾತನೆ ಅನುಭವಿಸುತ್ತಿರುವ ಹಿನ್ನೆಲೆಯಲ್ಲಿ, ಸ್ಥಳೀಯ ನಿವಾಸಿಗಳು ಘನತ್ಯಾಜ್ಯ ಅಧಿಕಾರಿಗಳ ವಿರುದ್ಧ ಪ್ರತಿಭಟನೆ ನಡೆಸಿದರು.

ಹಸಿ ಕಸ ಒಣ ಕಸವನ್ನು ಸರಿಯಾಗಿ ವಿಲೇವಾರಿ ಮಾಡದ ಹಿನ್ನೆಲೆಯಲ್ಲಿ ಹೆಚ್ಚು ಕಸ ಸಂಗ್ರಹವಾಗಿ ಕೊಳೆತು ಮಳೆ ಬಂದಾಗ ದುರ್ವಾಸನೆ ಸುತ್ತಮುತ್ತ ಕೊಳಚೆ ನೀರು ಮನೆಗಳಿಗೆ ನುಗ್ಗಿ ಗಬ್ಬು ವಾಸನೆ ಹರಡುತ್ತಿದ್ದು, ಕೂಡಲೇ ಎಚ್ಚೆತ್ತ ಅಧಿಕಾರಿಗಳ ವಿರುದ್ಧ ಪ್ರತಿಭಟಿಸಿ ಸ್ಥಳೀಯರು ನಿವಾಸಿಗಳು ತಿರುಗಿಬಿದ್ದರು. ವಾಸಿಸುವ ಪ್ರದೇಶದಲ್ಲಿರುವ ವೃದ್ಧರು, ಮಕ್ಕಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ, ಮಕ್ಕಳು ಮತ್ತು ಮಹಿಳೆಯರು ಅಸ್ವಸ್ಥರಾಗಿ ರೋಗಕ್ಕೆ ತುತ್ತಾಗಿ ಜೀವ ಕಳೆದುಕೊಳ್ಳುವ ಭಯದಲ್ಲಿ ಜೀವಿಸುತ್ತಿದೇವೆ ನಮಗೆ ಸರ್ಕಾರ ಮತ್ತು ಸಂಬಂಧ ಪಟ್ಟ ಅಧಿಕಾರಿಗಳು ಘನ ತ್ಯಾಜ್ಯ ನಿರ್ವಹಣಾ ಘಟಕವನ್ನು ಸ್ಥಳಾಂತರಿಸಿ ನಮ್ಮ ಜೀವ ಉಳಿಸಿ ಎಂದು ಸ್ಥಳೀಯರು ಮನವಿ ಮಾಡಿದರು.

ಬಿಎಸ್ ಡಬ್ಲ್ಯೂಎಂಎಲ್ ಕೇಂದ್ರ ಕಚೇರಿಯ ಎ.ಜಿ.ಎಂ ಸಂತೋಷ್ ಕಡ್ಡಿ ಮಾತನಾಡಿ, ಈ ವ್ಯಾಪ್ತಿಯ ಘನತ್ಯಾಜ್ಯ ನಿರ್ವಹಣೆಯ ಘಟಕದಲ್ಲಿ ಸಮಸ್ಯೆ ಇದೆ ಎಂದು ತಿಳಿದ ತಕ್ಷಣ ಬಂದು ಪರಿಶೀಲನೆ ನಡೆಸಿದ್ದೇನೆ, ಬಹಳಷ್ಟು ಸಮಸ್ಯೆಗಳಿವೆ ಎಂದು ತಿಳಿಯಿತು. ಮುಂದಿನ ದಿನಗಳಲ್ಲಿ ಇದರ ನಿರ್ವಹಣೆಯ ಗುತ್ತಿಗೆದಾರರಿಗೆ ನೋಟಿಸ್ ಜಾರಿ ಮಾಡುವ ಮೂಲಕ ಅವರ ಮೇಲೆ ಕ್ರಮ ಜರುಗಿಸಲಾಗುವುದು ಎಂದು ಭರವಸೆ ನೀಡಿದರು.

ತೆರಿಗೆ ವಿನಾಯ್ತಿ ಉಪಯೋಗವಾಗಲಿ

• **ಯಲಹಂಕ:** ಪ್ರತಿ ವರ್ಷದ ಏಪ್ರಿಲ್ ತಿಂಗಳೊಳಗೆ ತೆರಿಗೆ ಪಾವತಿಸುವವರಿಗೆ ಶೇ.5 ರಷ್ಟು ತೆರಿಗೆ ವಿನಾಯಿತಿ ಇರಲಿದ್ದು, ನಾಗರಿಕರು ಇದನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಪಿಡಿಒ. ನಾಗರಾಜ್ ಸಲಹೆ ನೀಡಿದರು.

ರಾಜಾನುಕುಂಟೆ ಗ್ರಾಮ ಪಂಚಾಯಿತಿಯಿಂದ ಆಯೋಜಿಸಿದ್ದ 2026-27ನೇ ಸಾಲಿನ ಮೊದಲ ಸುತ್ತಿನ ಗ್ರಾಮ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ರಾಜಾನುಕುಂಟೆ ಗ್ರಾಮ ಪಂಚಾಯಿತಿ ಹಲವು ವಿನೂತನ ಅಭಿವೃದ್ಧಿ ಕಾರ್ಯಗಳು, ಯೋಜನೆಗಳ ಮೂಲಕ ರಾಜ್ಯದ ಗಮನ ಸೆಳೆದಿರುವ ಗ್ರಾಮ ಪಂಚಾಯಿತಿಯಾಗಿದ್ದು, ಪಂಚಾಯಿತಿಯ ಈ ಸಾಧನೆಗೆ ಗ್ರಾಮ ಸದಸ್ಯರು ಹಾಗೂ ನಾಗರಿಕರ ಸಹಕಾರ ಕಾರಣ ವಾಗಿದೆ. ಗ್ರಾಮ ಪಂಚಾಯತಿ ಪತಿ ಯಿಂದ ಸರ್ಕಾರಿ ಶಾಲೆಗಳು, ಕಾಲೇಜು, ಅಂಗನ ವಾಡಿಗಳಿಗೆ ನೂತನ ಕಟ್ಟಡ, ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಕೊಡುವ ಮೂಲಕ ಸಹಕರಿಸಲಾಗಿದೆ ಎಂದರು. ಪಂಚಾಯಿತಿ ವ್ಯಾಪ್ತಿಯಲ್ಲಿ ಹಲವು ಪ್ರತಿಷ್ಠಿತ ಕಂಪನಿಗಳಿದ್ದು ಅವುಗಳು ನಿಯಮಿತ ಅವಧಿಯೊಳಗೆ ತೆರಿಗೆ ಪಾವತಿಸುವ ಮೂಲಕ ಪಂಚಾಯಿತಿ ಅಭಿವೃದ್ಧಿಗೆ ಸಹಕರಿಸಬೇಕು. ಹಾಗೆಯೇ ನಾಗರಿಕರು ಸಹ ತಾವು ಪಾವತಿಸಬೇಕಾದ ತೆರಿಗೆಯನ್ನು ನಿಯಮಿತ ಅವಧಿ ಒಳಗೆ ಪಾವತಿಸುವ ಮೂಲಕ ತೆರಿಗೆ ವಿನಾಯಿತಿಯ ಪ್ರಯೋಜನ ಪಡೆದುಕೊಳ್ಳಬೇಕು ಎಂದು ತಿಳಿಸಿದರು. ಗ್ರಾಮ ಸಭೆಯಲ್ಲಿ ರಾಜಾನುಕುಂಟೆ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀನಿವಾಸ್ ರೆಡ್ಡಿ, ಆರೋಗ್ಯ ಇಲಾಖೆಯ ಅಧಿಕಾರಿ ಡಾ.ಮಹಾದೇವಿ, ಮಾಜಿ ಅಧ್ಯಕ್ಷ ವೀರಣ್ಣ ರೆಡ್ಡಿ, ಅಂಗನ ರಾಜೇಂದ್ರಕುಮಾರ್, ಭವಾನಿ ಶ್ರೀನಿವಾಸ್, ಸುಜಾತಮ್ಮ ಸೇರಿದಂತೆ ಗ್ರಾ.ಪಂ.ಮಾಜಿ ಸದಸ್ಯರು, ಮಾಜಿ ಅಧ್ಯಕ್ಷರು, ಉಪಾಧ್ಯಕ್ಷರು ವಿವಿಧ ಇಲಾಖೆಗಳ ಅಧಿಕಾರಿಗಳಿದ್ದರು.



ಇಂದು ನಗರದಲ್ಲಿ...

- 25 ನೇ ಕರ್ನಾಟಕ ರಾಜ್ಯ ಮಟ್ಟದ ಫ್ಲವರ್ಸ್ ಸ್ಟೇಟ್ ಲೆವೆಲ್ ಚಾಂಪಿಯನ್‌ಶಿಪ್ ಅಧಿಕಾರಿಗಳ ಪ್ರಶಸ್ತಿ -2026, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಳಗ್ಗೆ 9.30
- ಹಸಿರು ಹಬ್ಬ-2026, ಸ್ಥಳ: ಫ್ರೀಡಂ ಪಾರ್ಕ್, ಬೆಳಗ್ಗೆ 11.00
- ಕನ್ನಡ ಶಿಲ್ಪಾಸ್ತ್ರ ಪುಸ್ತಕ ಬಿಡುಗಡೆ, ಸ್ಥಳ: ಕನ್ನಡ ಭವನ, ಸಂಜೆ 4.30
- ವಿದ್ವಾನ್ ರಾಮಚಂದ್ರಮೂರ್ತಿ ಅವರಿಂದ ವಾಲ್ಮೀಕಿ ರಾಮಾಯಣ ಹಾಗೂ ಸುಂದರಕಾಂಡದ ಸೂಕ್ಷ್ಮ ವರ್ಣನೆ ಕುರಿತು ಉಪನ್ಯಾಸ, ಸ್ಥಳ: ರಾಗಿಗುಡ್ಡ ಆಂಜನೇಯ ಸ್ವಾಮಿ ದೇವಸ್ಥಾನ, ಸಂಜೆ 6.30

ಬೆಲ್ಜಿಯಂ-ಈಜಿಪ್ಟ್ 1-1ರಿಂದ ಡ್ರಾ



ದಿನದ ಮತ್ತೊಂದು ಪಂದ್ಯದಲ್ಲಿ ಬೆಲ್ಜಿಯಂ ಮತ್ತು ಈಜಿಪ್ಟ್ ನಡುವಿನ ಪಂದ್ಯ 1-1 ಗೋಲುಗಳ ಸಮಬಲದಲ್ಲಿ ಅಂತ್ಯಗೊಂಡಿತು. ಸಿಯಾಟಲ್‌ನಲ್ಲಿ ನಡೆದ ಈ ಪಂದ್ಯದಲ್ಲಿ ರೊಮೆಲು ಲುಕಾಕು ಬದಲಿ ಆಟಗಾರನಾಗಿ ಕಣಕ್ಕಿಳಿದ ಕೆಲವೇ ಕ್ಷಣಗಳಲ್ಲಿ ಬೆಲ್ಜಿಯಂಗೆ ಸಮಬಲ ತಂದುಕೊಟ್ಟು ಸೋಲಿನಿಂದ ಪಾರು ಮಾಡಿದರು. ಪಂದ್ಯದ 19ನೇ ನಿಮಿಷದಲ್ಲಿ ಈಜಿಪ್ಟ್‌ನ ಮಧ್ಯಮೈದಾನ ಆಟಗಾರ ಇಮಾಮ್ ಆಶೂರ್ ಗೋಲು ಬಾರಿಸಿ ತಂಡಕ್ಕೆ ಮುನ್ನಡೆ ತಂದುಕೊಟ್ಟರು. ರಕ್ಷಣಾ ವಿಭಾಗದ ತಪ್ಪನ್ನು ಸದುಪಯೋಗಪಡಿಸಿಕೊಂಡ ಆಶೂರ್, ತಮ್ಮ ಅಂತಾರಾಷ್ಟ್ರೀಯ ವೃತ್ತಿಜೀವನದ ಮೊದಲ ಗೋಲು ದಾಖಲಿಸಿದರು. ಮುನ್ನಡೆ ಪಡೆದ ಈಜಿಪ್ಟ್ ಪಂದ್ಯದಲ್ಲಿ ಹಲವು ಅವಕಾಶಗಳನ್ನು ಸೃಷ್ಟಿಸಿದರೂ ಗೋಲುಗಳ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಲು ವಿಫಲವಾಯಿತು.

23 ಸೆಕೆಂಡ್.. ಪಂದ್ಯದ ದಿಕ್ಕೇ ಬದಲು: 66ನೇ ನಿಮಿಷದಲ್ಲಿ ಬೆಲ್ಜಿಯಂ ಪರ ರೊಮೆಲು ಲುಕಾಕು ಬದಲಿ ಆಟಗಾರನಾಗಿ ಕಣಕ್ಕಿಳಿದರು. ಕಣಕ್ಕಿಳಿದ ಕೇವಲ 23 ಸೆಕೆಂಡುಗಳಲ್ಲೇ ಅವರ ಸಾನ್ನಿಧ್ಯವೇ ಪಂದ್ಯದ ದಿಕ್ಕು ಬದಲಿಸಿತು. ಬಲಭಾಗದಿಂದ ಬಂದ ಕ್ರಾಸ್ ಅನ್ನು ತಡೆಯುವ ಯತ್ನದಲ್ಲಿ ಈಜಿಪ್ಟ್ ರಕ್ಷಣಾ ಆಟಗಾರ ಮೊಹಮದ್ ಹಾನಿ ಚೆಂಡನ್ನು ತಮ್ಮದೇ ಗೋಲುಪೆಟ್ಟಿಗೆಯೊಳಗೆ ಸೇರಿಸಿದರು. ಇದರೊಂದಿಗೆ ಬೆಲ್ಜಿಯಂ 1-1 ಸಮಬಲ ಸಾಧಿಸಿತು.

- ಬೆಲ್ಜಿಯಂ 1-1 ಈಜಿಪ್ಟ್
- 19ನೇ ನಿಮಿಷ ಇಮಾಮ್ ಆಶೂರ್ ಗೋಲು
- 66ನೇ ನಿಮಿಷ ಲುಕಾಕು ಬದಲಿ ಆಟಗಾರನಾಗಿ ಪ್ರವೇಶ
- 66ನೇ ನಿಮಿಷ + 23 ಸೆಕೆಂಡು: ಮೊಹಮದ್ ಗೋಲು

- ಸ್ಪೇನ್‌ಗೆ ವಿರುದ್ಧ 0-0ರಿಂದ ಡ್ರಾ
- ಐದೇ ಲಕ್ಷ ಜನರಿರುವ ದೇಶದಿಂದ ಜಾದೂ
- ವೊಜಿನ್ಹಾ ಸಾಹಸಕ್ಕೆ ಭಾರೀ ಮೆಚ್ಚುಗೆ
- ಎಲ್ಲಾ ಪಂದ್ಯಗಳು ಡ್ರಾ!

ಯಾರಿಗೆಷ್ಟು?
- ವಿಶ್ವಕಪ್‌ನಲ್ಲಿ ಕೇಪ್ ವರ್ಡೆಯ ಚೊಚ್ಚಲ ಪಂದ್ಯ
- 40 ವರ್ಷದ ಗೋಲ್‌ಕೀಪರ್ ವೊಜಿನ್ಹಾ ಮಿಂಚಿನ ಪ್ರದರ್ಶನ

ಕೇಪ್ ವರ್ಡೆ ಚಮತ್ಕಾರ



ಅಟ್ಲಾಂಟಾ: ಗೋಲ್-ಕೀಪರ್ ವೊಜಿನ್ಹಾಗೆ ಎಂಬಾತನಿಗೆ 40 ವರ್ಷ. ಕೇಪ್ ವರ್ಡೆ ಎಂಬ ತಂಡದಲ್ಲಿ ವರ್ಷಗಳಿಂದಲೂ ಆಡುತ್ತಿರುವ ಅವರು, ತಮ್ಮ ತಂಡವನ್ನು ವಿಶ್ವಕಪ್‌ಗೆ ಅರ್ಹತೆ ಕೊಡಿಸಲು ಸರ್ವಸ್ವವನ್ನೇ ಕೊಟ್ಟರು. ಅಂತಹ ಇಂತಹ ಅವಕಾಶ ಸಿಕ್ಕಿತೆನ್ನುವಷ್ಟರಲ್ಲಿ ಮುಪ್ಪು ಪ್ರಾಯದಲ್ಲಿ ದೊಡ್ಡ ಶಾಕ್, ಅದು ಏನೆಂದರೆ ಮೊದಲ ಎದುರಾಳಿಯೇ ಬಲಿಷ್ಠ ಸ್ಪೇನ್ ತಂಡ! 2026ರ ಫಿಫಾ ವಿಶ್ವಕಪ್‌ನಲ್ಲಿ ಅಚ್ಚರಿಯ ಫಲಿತಾಂಶವೊಂದು ದಾಖಲಾಗಿದೆ. ವಿಶ್ವಕಪ್‌ಗೆ ಮೊದಲ ಬಾರಿಗೆ ಅರ್ಹತೆ ಪಡೆದ ಕೇಪ್ ವರ್ಡೆ, ಬಲಿಷ್ಠ ಸ್ಪೇನ್ ತಂಡವನ್ನು 0-0 ಗೋಲುಗಳಿಂದ ಸಮಬಲದಲ್ಲಿ ಕಟ್ಟಿಹಾಕಿ ಸಂಚಲನ ಮೂಡಿಸಿದೆ. ಅಟ್ಲಾಂಟಾದಲ್ಲಿ ನಡೆದ ಪಂದ್ಯದಲ್ಲಿ ಯುರೋಪಿಯನ್ ಚಾಂಪಿಯನ್ ಸ್ಪೇನ್ ಆರಂಭದಿಂದಲೇ ಮೇಲುಗೈ ಸಾಧಿಸಿದರೂ, ಕೇಪ್ ವರ್ಡೆಯ ಅನುಭವಿ ಗೋಲ್‌ಕೀಪರ್ ವೊಜಿನ್ಹಾ ಅದ್ಭುತ ಪ್ರದರ್ಶನ ನೀಡಿ ಸ್ಪೇನ್ ದಾಳಿಗಳನ್ನು ವಿಫಲಗೊಳಿಸಿದರು.

> ಕೇಪ್ ವರ್ಡೆಗಿದು ಮೊದಲ ವಿಶ್ವಕಪ್

ತಡೆಗೋಡೆಯಾದ ವೊಜಿನ್ಹಾ : ಬಾರ್ಸಿಲೋನಾ ತಾರೆ ಫೆರಾನ್ ಟೊರೆಸ್ ಸ್ಪೇನ್ ಪರ ಗೋಲು ಗಳಿಸುವುದಕ್ಕೆ ಅತ್ಯಂತ ಸಮೀಪ ಬಂದಿದ್ದರು. ಅವರ ಒಂದು ಶಾಟ್ ಕ್ರಾಸ್‌ಬಾರ್‌ಗೆ ತಾಗಿ ಹೊರಬಿದ್ದರೆ, ಮತ್ತೊಂದು ಪ್ರಯತ್ನವನ್ನು ವೊಜಿನ್ಹಾ ಅದ್ಭುತವಾಗಿ ತಡೆದರು. ಪೆಡ್ರಿ ಸೇರಿದಂತೆ ಹಲವು ಸ್ಪ್ಯಾನಿಷ್ ಆಟಗಾರರ ಪ್ರಯತ್ನಗಳನ್ನೂ ಅವರು ವಿಫಲಗೊಳಿಸಿದರು. ದ್ವಿತೀಯಾರ್ಧದಲ್ಲೂ ಕೇಪ್ ವರ್ಡೆ ಸಂಘಟಿತ ರಕ್ಷಣಾ ಆಟ ಪ್ರದರ್ಶಿಸಿತು. ಬದಲಿ ಆಟಗಾರನಾಗಿ ಕಣಕ್ಕಿಳಿದ ಯುವ ತಾರೆ ಲಮಿನ್ ಯಮಾಲ್ ಕೂಡ ಪಂದ್ಯದ ಫಲಿತಾಂಶ ಬದಲಾಯಿಸಲು ಸಾಧ್ಯವಾಗಲಿಲ್ಲ. ಪಂದ್ಯದ ಕೊನೆಯ ಕ್ಷಣಗಳಲ್ಲಿ ಕೇಪ್ ವರ್ಡೆಗೆ ಗೆಲುವಿನ ಅವಕಾಶವೂ ದೊರೆತಿತ್ತು. ಡಿನೀ ಬೋರ್ಜಸ್ ಅವರ ಹೆಡರ್ ಅನ್ನು ಸ್ಪೇನ್ ಗೋಲ್‌ಕೀಪರ್ ಉನೈ ಸಿಮೋನ್ ತಡೆದು ತಂಡವನ್ನು ಸೋಲಿನಿಂದ ಪಾರು ಮಾಡಿದರು. ಸುಮಾರು ಐದು ಲಕ್ಷ ಜನಸಂಖ್ಯೆಯ ದ್ವೀಪ ರಾಷ್ಟ್ರ ಕೇಪ್ ವರ್ಡೆ ತನ್ನ ಮೊದಲ ವಿಶ್ವಕಪ್ ಪಂದ್ಯದಲ್ಲೇ ಬಲಿಷ್ಠ ಸ್ಪೇನ್ ವಿರುದ್ಧ ಅಂಕ ಕಸಿದು ಇತಿಹಾಸ ನಿರ್ಮಿಸಿದೆ.

ಬುಧವಾರದ ಪಂದ್ಯಗಳು
- ಅರ್ಜೆಂಟಿನಾ-ಅಲ್ಜೀರಿಯಾ (ಬೆಳಗ್ಗೆ 6:30)
- ಆಸ್ಟ್ರಿಯಾ-ಜೋರ್ಡನ್ (ಬೆಳಗ್ಗೆ 9:30)
- ಪೋರ್ಚುಗಲ್- ಕೊಂಗೊ (ರಾತ್ರಿ 10:30)

ಬುಧವಾರ ಮಧ್ಯರಾತ್ರಿ
- ಇಂಗ್ಲೆಂಡ್-ಕ್ರೊವೇಷಿಯಾ (ಮ.ರಾತ್ರಿ 1:30)
- ಘಾನಾ-ಪನಾಮಾ (ಮುಂಜಾನೆ 4:30)

ಸೌದಿ ಅರೇಬಿಯಾ ಉರುಗ್ವೆ ಸಮಬಲ

ಮಿಯಾಮಿ ಗಾರ್ಡನ್: ಎಚ್ ಗುಂಪಿನ ಪಂದ್ಯದಲ್ಲಿ ಸೌದಿ ಅರೇಬಿಯಾ ಮತ್ತು ಉರುಗ್ವೆ ತಂಡಗಳು 1-1 ಗೋಲುಗಳ ಸಮಬಲ ಸಾಧಿಸಿದವು. ಅಂತ್ಯದವರೆಗೂ ಹೋರಾಟ ನಡೆಸಿದ ಉರುಗ್ವೆ ಸೋಲಿನಿಂದ ಪಾರಾಗಿ ಒಂದು ಅಂಕ ಗಳಿಸಿತು. 41ನೇ ನಿಮಿಷದಲ್ಲಿ ಅಬ್ದುಲ್ಲೆಲಾ ಅಲ್-ಅಮ್ರಿ ಗೋಲು ಬಾರಿಸಿ ಸೌದಿ ಅರೇಬಿಯಾಗೆ ಮುನ್ನಡೆ ನೀಡಿದರು. ಉರುಗ್ವೆ ಗೋಲ್‌ಕೀಪರ್ ಫೆರ್ನಾಂಡೊ ಮುಸ್ಲೆರಾ ತಡೆದ ಚೆಂಡನ್ನು ರೀಬೌಂಡ್ ಅನ್ನು ಅಲ್-ಅಮ್ರಿ ಜಾಲಕ್ಕೆ ತಳ್ಳಿದರು. 80ನೇ ನಿಮಿಷದಲ್ಲಿ ಮ್ಯಾಕ್ಸಿ ಅರೌಜೊ ಸಮಬಲದ ಗೋಲು ದಾಖಲಿಸಿ ಉರುಗ್ವೆಗೆ ರಕ್ಷಕರಾದರು. ಉರುಗ್ವೆ ಪಂದ್ಯದುದ್ದಕ್ಕೂ ಮೇಲುಗೈ ಸಾಧಿಸಿ 28 ಗೋಲು ಪ್ರಯತ್ನಗಳನ್ನು ನಡೆಸಿತು. ಅತ್ತ ಸೌದಿ ಅರೇಬಿಯಾ ಕೇವಲ 7 ಪ್ರಯತ್ನಗಳಿಗೆ ಸೀಮಿತವಾಯಿತು. ಸೌದಿ ಗೋಲ್‌ಕೀಪರ್ ಮೊಹಮ್ಮದ್ ಅಲ್-ಒವೈಸ್ ಹಲವು ಅದ್ಭುತ ಸೇವ್‌ಗಳ ಮೂಲಕ ತಂಡವನ್ನು ಮುನ್ನಡೆಸಿದರು. ಫೆಡೆರಿಕೊ ವಿನಾಸ್, ಮ್ಯಾನುಯೆಲ್ ಉಗಾರ್ಟೆ ಹಾಗೂ ಫೆಡೆರಿಕೊ ವಾಲ್ವೆರ್ಡೆ ಅವರ ಪ್ರಯತ್ನಗಳನ್ನು ಅಲ್-ಒವೈಸ್ ವಿಫಲಗೊಳಿಸಿದರು. ಎರಡೂ ತಂಡದ ಸತತ ಪ್ರಯತ್ನಗಳ ನಂತರವೂ ಪಂದ್ಯ 1-1ರಿಂದ ಡ್ರಾಗೊಂಡಿತು.



ಸ್ಕೋರ್‌ಬೋರ್ಡ್
- ಸೌದಿ ಅರೇಬಿಯಾ 1-1 ಉರುಗ್ವೆ
- ಅಬ್ದುಲ್ಲೆಲಾ ಅಲ್-ಅಮ್ರಿ (41ನೇ ನಿಮಿಷ)
- ಮ್ಯಾಕ್ಸಿ ಅರೌಜೊ (80ನೇ ನಿಮಿಷ)

ಹಿನ್ನಡೆಯಿಂದ ಮರಳಿದ ಇರಾನ್, ಕಿವೀಸ್ ವಿರುದ್ಧ 2-2 ಡ್ರಾ

ಇಂಗಲ್‌ವುಡ್: ದಿನದ ಮತ್ತೊಂದು ಪಂದ್ಯದಲ್ಲಿ ಇರಾನ್ ಮತ್ತು ನ್ಯೂಜಿಲೆಂಡ್ 2-2 ಗೋಲಿನಿಂದ ಡ್ರಾ ಮಾಡಿಕೊಂಡವು. ಇಂಗಲ್‌ವುಡ್‌ನ ಸೋಫಿ ಕ್ರೀಡಾಂಗಣದಲ್ಲಿ ನಡೆದ ಈ ರೋಚಕ ಪಂದ್ಯದಲ್ಲಿ ಎರಡು ಬಾರಿ ಹಿನ್ನಡೆ ಅನುಭವಿಸಿದ ಇರಾನ್, ಎರಡೂ ಸಂದರ್ಭಗಳಲ್ಲಿ ತಿರುಗೇಟು ನೀಡಿತು. ಪಂದ್ಯ ಆರಂಭವಾದ ಏಳನೇ ನಿಮಿಷದಲ್ಲೇ ನ್ಯೂಜಿಲೆಂಡ್‌ಗೆ ಮುನ್ನಡೆ ದೊರೆಯಿತು. ನಾಯಕ ಕ್ರಿಸ್ ವುಡ್ ಸೃಷ್ಟಿಸಿದ ಅವಕಾಶವನ್ನು ಎಲಿಜಾ ಜಸ್ಟ್ ಗೋಲಾಗಿ ಪರಿವರ್ತಿಸಿ ತಂಡವನ್ನು ಮುನ್ನಡೆಸಿದರು. ಇರಾನ್ 32ನೇ ನಿಮಿಷದಲ್ಲಿ ಸಮಬಲ ಸಾಧಿಸಿತು. ರಮಿನ್ ರೆಜಾಯಿಯನ್ ತಮ್ಮ ಬಲಬದಿ ಹೊರಭಾಗದಿಂದ ಅದ್ಭುತ ಚಿಪ್ ಶಾಟ್ ಮೂಲಕ ಚೆಂಡನ್ನು ಗೋಲುಪೆಟ್ಟಿಗೆಯೊಳಗೆ ಸೇರಿಸಿದರು. ದ್ವಿತೀಯಾರ್ಧದ 54ನೇ ನಿಮಿಷದಲ್ಲಿ ಮತ್ತೆ ಎಲಿಜಾ ಜಸ್ಟ್ ಮಿಂಚಿ ನ್ಯೂಜಿಲೆಂಡ್‌ಗೆ 2-1 ಮುನ್ನಡೆ ತಂದುಕೊಟ್ಟರು. ಮತ್ತೊಮ್ಮೆ ಕ್ರಿಸ್ ವುಡ್ ಅವರೇ ಗೋಲು ಅವಕಾಶ ಸೃಷ್ಟಿಸಿದ್ದರು. ಆದರೆ 64ನೇ ನಿಮಿಷದಲ್ಲಿ ರಮಿನ್ ರೆಜಾಯಿಯನ್ ನೀಡಿದ ನಿಖರವಾದ ಉದ್ದ ಪಾಸ್ ಅನ್ನು ಮೊಹಮ್ಮದ್ ಮೊಹೆಬ್ಬಿ ಹೆಡರ್ ಮೂಲಕ ಗೋಲಾಗಿ ಪರಿವರ್ತಿಸಿ ಇರಾನ್‌ಗೆ 2-2 ಸಮಬಲ ತಂದುಕೊಟ್ಟರು.



- ಇರಾನ್ 2-2 ನ್ಯೂಜಿಲೆಂಡ್
- 7ನೇ ನಿಮಿಷ: ಎಲಿಜಾ ಜಸ್ಟ್ (ನ್ಯೂಜಿಲೆಂಡ್)
- 32ನೇ ನಿಮಿಷ: ರಮಿನ್ ರೆಜಾಯಿಯನ್ (ಇರಾನ್)
- 54ನೇ ನಿಮಿಷ: ಎಲಿಜಾ ಜಸ್ಟ್ (ನ್ಯೂಜಿಲೆಂಡ್)
- 64ನೇ ನಿಮಿಷ ಮೊಹಮ್ಮದ್ ಮೊಹೆಬ್ಬಿ (ಇರಾನ್)

5 ಚಿನ್ನ ಸೇರಿ ರಾಜ್ಯಕ್ಕೆ 16 ಪದಕ



ಹೈದರಾಬಾದ್: ಇಲ್ಲಿನ ಕೊಂಪಲ್ಲಿಯ 'ದಿ ಹಬ್ ಆಫ್ ಪಿಕಲ್‌ಬಾಲ್ ಸ್ಟೇಡಿಯಂ'ನಲ್ಲಿ ನಡೆದ ಮೂರು ದಿನಗಳ 12ನೇ ದಕ್ಷಿಣ ವಲಯ ಪಿಕಲ್‌ಬಾಲ್ ಚಾಂಪಿಯನ್‌ಶಿಪ್‌ನಲ್ಲಿ ಕರ್ನಾಟಕದ ಆಟಗಾರರು ವಿವಿಧ ಪದಕಗಳನ್ನು ಗೆದ್ದಿದ್ದಾರೆ. ಅಖಿಲ ಭಾರತ ಪಿಕಲ್‌ಬಾಲ್ ಅಸೋಸಿಯೇಷನ್(ಎಐಪಿಎ) ಹಾಗೂ ತೆಲಂಗಾಣ ಕ್ರೀಡಾ ಪ್ರಾಧಿಕಾರದ ಮಾರ್ಗದರ್ಶನದಲ್ಲಿ ನಡೆದ ಈ ಪ್ರತಿಷ್ಠಿತ ಟೂರ್ನಮೆಂಟ್‌ನಲ್ಲಿ ಕರ್ನಾಟಕದಿಂದ ಒಟ್ಟು 27 ಮಂದಿ ಭಾಗವಹಿಸಿದ್ದರು.

ಈ ಪೈಕಿ ಮೊದಲ ದಿನ ಅಂಡರ್ 12 ವಿಭಾಗದಲ್ಲಿ ಕ್ರೀಡಾ ಪಟುಗಳು ಚಿನ್ನವನ್ನು ಗೆದ್ದರೆ, 3ನೇ ದಿನ ಅಂಡರ್ 12 ಬಾಲಕರ ಹಾಗೂ ಅಂಡರ್ 14 ಬಾಲಕಿಯರ ಡಬಲ್ಸ್ ವಿಭಾಗದಲ್ಲಿ ಕರ್ನಾಟಕಕ್ಕೆ ಚಿನ್ನ ಒಲಿದು ಬಂದಿದೆ. ಅಂಡರ್ 12 ಹಾಗೂ ಅಂಡರ್ 14 ಮಿಶ್ರ ವಿಭಾಗಗಳಲ್ಲಿ ಕರ್ನಾಟಕ ತಂಡ ಸ್ವರ್ಣ ಗೆದ್ದು ಬೀಗಿದೆ. ಇಷ್ಟೇ ಅಲ್ಲದೇ, 3 ಬೆಳ್ಳಿ ಜೊತೆಗೆ 8 ಕಂಚಿನ ಪದಕಗಳನ್ನು ಕೂಡ ಕರ್ನಾಟಕ ಪಡೆ ಗೆದ್ದುಕೊಂಡಿದ್ದು, ಮೇಲುಗೈ ಸಾಧಿಸಿದೆ. ಇದೀಗ 27 ಮಂದಿಯ ಪೈಕಿ ಕ್ರೀಡಾ ಪಟುಗಳು ಎಲ್ಲರ ಗಮನ ಸೆಳೆದಿದ್ದು, 5 ಪದಕಗಳನ್ನು ಗೆದ್ದಿದ್ದಾರೆ.

ಕೌರ್ ಬಳಗಕ್ಕೆ ಗೆಲುವಿನ ಛಲ

ಲೀಡ್ಸ್: ಪಾಕಿಸ್ತಾನ ತಂಡದ ಬೇಟೆಯಾಡಿರುವ ಭಾರತ ಮಹಿಳಾ ತಂಡವು ತನ್ನ ವಿಶ್ವಕಪ್ ಅಭಿಯಾನದಲ್ಲಿ ಗೆಲುವಿನ ನಾಗಾಲೋಟವನ್ನು ನೆದರ್ಲೆಂಡ್ಸ್‌ಗೆ ವಿಸ್ತರಿಸಬೇಕಿದೆ. ಏಕದಿನ ವಿಶ್ವಕಪ್ ಗೆದ್ದ ನಂತರ ಟಿ20 ವಿಶ್ವಕಪ್ ಮೇಲೆ ಕಣ್ಣಿಟ್ಟಿರುವ ಹರ್ಮನ್‌ಪ್ರೀತ್ ಕೌರ್ ಪಡೆ ಪಾಕ್ ವಿರುದ್ಧದ ಮೊದಲನೇ ಪಂದ್ಯದಲ್ಲಿ ಗೆದ್ದು ಈಗಾಗಲೇ ಶುಭಾರಂಭ ಮಾಡಿದೆ.

ಮಂಧಾನ ಅವರ ಬ್ಯಾಟಿಂಗ್ ಹಾಗೂ ದೀಪ್ತಿ ಶರ್ಮ ಅವರ ಮಾರಕ ಬೌಲಿಂಗ್ ದಾಳಿಯೊಂದಿಗೆ ಮಿಂಚಿರುವ ಭಾರತಕ್ಕೆ ಗೆಲ್ಲುವ ವಿಶ್ವಾಸವಿದ್ದು, ನೆದರ್ಲೆಂಡ್ಸ್ ಮೇಲೆ ಪ್ರಾಬಲ್ಯಕ್ಕೆ ಅಣಿಯಾಗುತ್ತಿದೆ. ಪಾಕ್ ವಿರುದ್ಧದ ಪಂದ್ಯದಲ್ಲಿ ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ಸಮತೋಲಿತ ಪ್ರದರ್ಶನ ನೀಡಿತ್ತು. ಇದಲ್ಲದೆ ಬೇಗನೇ ವಿಕೆಟ್ ಕಳೆದುಕೊಂಡರೂ ಲಯ ಪಡೆದ ಭಾರತ ಕಂಬ್ಯಾಕ್ ಮಾಡಿತ್ತು. ಬೌಲಿಂಗ್ ವಿಭಾಗದಲ್ಲೂ ಮೊದಲಿಗೆ ಅಲ್ಪ ಹಿನ್ನಡೆ ಅನುಭವಿಸಿದ್ದರೂ ನಂತರ ಪಂದ್ಯಕ್ಕೆ ಮರಳಿತು. ವಿಶ್ವಕಪ್ ಅಭಿಯಾನದ ಭಾರತದ ಎರಡನೇ ಪಂದ್ಯ ಲೀಡ್ಸ್‌ನಲ್ಲಿ ನಡೆಯಲಿದೆ.

ಪಿಚ್: ಲೀಡ್ಸ್‌ನಲ್ಲಿ ಪಂದ್ಯ ನಡೆಯಲಿದೆ. ಅಲ್ಲಿನ ಪಿಚ್ ಬ್ಯಾಟರ್‌ಗಳಿಗೆ ಮತ್ತು ಬೌಲರ್‌ಗಳಿಗೆ ಸಮಾನ ಲಾಭ ಕೊಡಲಿದೆ. ತುಂಬಾ ಫ್ಲೆಕ್ಸೀಬಲ್ ಪಿಚ್ ಹೊಂದಿಲ್ಲ, ಹಿಂದಿನ ಪಂದ್ಯಗಳಲ್ಲಿ ಬ್ಯಾಟರ್‌ಗಳು ಉತ್ತಮ ಬ್ಯಾಟಿಂಗ್ ಮಾಡಿದ್ದರೂ ಬೌಲರ್‌ಗಳೇ ಹಿತವಾಗಿ ಕಾಣಿಸಿಕೊಂಡಿದ್ದಾರೆ. ಮೊದಲು ಬೌಲಿಂಗ್ ಮಾಡುವ ತಂಡಕ್ಕೆ ಲಾಭ ಸಿಗಬಹುದು.



ಪಂದ್ಯದ ವಿವರ
- ಯಾವಾಗ: ಬುಧವಾರ
- ಎಲ್ಲಿ: ಲೀಡ್ಸ್, ಇಂಗ್ಲೆಂಡ್
- ಸಮಯ: ಸಂಜೆ 7:00(ಭಾರತೀಯ ಕಾಲಮಾನ)

ಸರಣಿ ವಶ ಭಾರತದ ಗುರಿ

ಲಖನೌ: ಮೊದಲ ಪಂದ್ಯದಲ್ಲಿ ಸುಲಭ ಜಯ ಸಾಧಿಸಿರುವ ಭಾರತ ಪುರುಷರ ತಂಡವು ಬುಧವಾರದಂದು ಅಫ್ಘಾನಿಸ್ತಾನ ವಿರುದ್ಧ ಎರಡನೇ ಪಂದ್ಯವಾಡಲು ಸಿದ್ಧವಾಗಿದೆ.

ಶುಭಮನ್ ಗಿಲ್ ನೇತೃತ್ವದ ಬಳಗ ಲಖನೌನ ಏಕಾನಾ ಕ್ರೀಡಾಂಗಣದಲ್ಲಿ ಸರಣಿ ವಶಕ್ಕಾಗಿ ಪಂದ್ಯಾಟವಾಡಲಿದೆ. ವಿರಾಟ್ ಕೊಹ್ಲಿ ಆಡದ ನಿಟ್ಟಿನಲ್ಲಿ ನಿರಾಸೆಯಾಗಿರುವ ಅಭಿಮಾನಿಗಳಿಗೆ ಇನ್ನೊಂದು ಆಘಾತ ಎದುರಾಗಲಿದ್ದು, ಬುಧವಾರದ ಪಂದ್ಯದಲ್ಲಿ ರೋಹಿತ್ ಶರ್ಮ ಆಡುವುದು ಅನುಮಾನ ಎನ್ನಲಾಗಿದೆ. ಹಿಂದಿನ ಪಂದ್ಯದಲ್ಲಿ ರನ್ ಔಟ್‌ನಿಂದಾಗಿ ನಿರಾಸೆ ಮೂಡಿಸಿದ್ದ ಅವರು, ಗಾಯಗೊಂಡಿದ್ದು, ಚೇತರಿಸಿಕೊಳ್ಳುತ್ತಿದ್ದಾರೆ ಎಂದು ವರದಿಯಾಗಿದೆ.

> ಅಫ್ಘನ್ ವಿರುದ್ಧ ಇಂದು 2ನೇ ಏಕದಿನ

ಕಳೆದ ಪಂದ್ಯದಲ್ಲಿ ಸಮತೋಲಿತ ಪ್ರದರ್ಶನ ನೀಡಿದ್ದ ಭಾರತ ತಂಡವು ನಿಗದಿತ 25 ಓವರ್‌ಗಳಲ್ಲಿ ಪ್ರಾಬಲ್ಯ ಸಾಧಿಸಿತ್ತು. ರಹಮತುಲ್ಲಾ ಗುರ್ಬಾಜ್ ಅವರ ಸ್ಫೋಟಕ ಬ್ಯಾಟಿಂಗ್ ನೊಂದಿಗೆ ಅಫ್ಘಾನಿಸ್ತಾನ ಕೂಡ ಉತ್ತಮ ಪ್ರದರ್ಶನವನ್ನೇ ನೀಡಿತ್ತು. ಆದರೆ ಬೌಲಿಂಗ್ ಮಾಡುವ ವೇಳೆ ಎಡವಿತ್ತು.



ಪಿಚ್ ರಿಪೋರ್ಟ್: ಲಖನೌನ ಏಕಾನಾ ಕ್ರೀಡಾಂಗಣ ಅಲ್ಪ ಬೌಲರ್‌ಗಳಿಗೆ ಸಹಾಯಕವಾಗಿರಲಿದೆ. 50 ಓವರ್‌ಗಳ ವರೆಗೆ ಇಬ್ಬನಿ ಕಾಟ ಸ್ಪಷ್ಟವಾಗಿ ಕಾಣಬಹುದು. ಐಪಿಎಲ್‌ನಲ್ಲಿ ಬ್ಯಾಟರ್‌ಗಳು ಉತ್ತಮ ಬೌನ್ಸ್‌ನಿಂದ ಲಾಭ ಪಡೆಯುತ್ತಿದ್ದರು. ಪಾರ್ಶ್ವವು ಈಗಲೂ ಹೆಚ್ಚಿನ ಬೌನ್ಸ್ ಇರುವುದು ಕಾಣಬಹುದು.

ಪಂದ್ಯದ ವಿವರ
- ಯಾವಾಗ: ಬುಧವಾರ
- ಎಲ್ಲಿ: ಏಕಾನಾ, ಲಖನೌ
- ಸಮಯ: ಮಧ್ಯಾಹ್ನ 1:30

ಗುಲ್ಬರ್ಗಾ ತಂಡಕ್ಕೆ ಮನೀಷ್ ನಾಯಕ

ಕಲಬುರಗಿ: ಭಾರತ ತಂಡಕ್ಕಾಡಿರುವ ಅನುಭವಿ ಕ್ರಿಕೆಟರ್, ಸ್ಫೋಟಕ ಬ್ಯಾಟರ್ ಮನೀಷ್ ಪಾಂಡೆ ಈ ಬಾರಿ ಗುಲ್ಬರ್ಗಾ ಮ್ಯಾಸ್ಟಿಕ್ಸ್ ತಂಡದ ನಾಯಕತ್ವ ನಿಭಾಯಿಸಲಿದ್ದಾರೆ. ಪ್ರತಿಷ್ಠಿತ ಮಹಾರಾಜ ಟ್ರೋಫಿ ಪಂದ್ಯಾವಳಿಗೆ ಮೂರೇ ದಿನ ಬಾಕಿ ಇರುವಂತೆ ಮಂಗಳವಾರದಂದು ಗುಲ್ಬರ್ಗಾ ಮ್ಯಾಸ್ಟಿಕ್ಸ್ ತಂಡವು ಮಾಧ್ಯಮಗೋಷ್ಠಿ ನಡೆಸಿ ತನ್ನ ತಂಡವನ್ನು ಪರಿಚಯಿಸಿತು. ಅಲ್ಲದೆ ತಂಡದ ಜೆರ್ಸಿ ಬಿಡುಗಡೆ ಕಾರ್ಯಕ್ರಮವನ್ನು ಮಾಡಿದ ಗುಲ್ಬರ್ಗಾ ಪಂದ್ಯಾವಳಿಗೆ ಸಿದ್ಧ ಎಂಬ ಸಂದೇಶ ಸಾರಿತು.



ವೈಭವ್ ಭೇಟಿಗಾಗಿ 80ರ ಅನುರ್ 160 ಕಿ.ಮೀ ಪ್ರಯಾಣ

ದಂಬುಲ್ಲಾ: 15 ವರ್ಷದ ಸ್ಫೋಟಕ ಬ್ಯಾಟರ್ ವೈಭವ್ ಸೂರ್ಯವಂಶಿ ಭೇಟಿಯಾಗಲು ಶ್ರೀಲಂಕಾ ಮಾಜಿ ದಿಗ್ಗಜ ಕ್ರಿಕೆಟಿಗ 80ರ ಅನುರ್ ತೆನ್ನಕೂನ್ 161 ಕಿಲೋ ಮೀಟರ್ ಪ್ರಯಾಣಿಸಿ ಹಾಜರಾಗಿದ್ದಾರೆ. ಐಪಿಎಲ್‌ನಲ್ಲಿ ಉತ್ತಮ ಪ್ರದರ್ಶನ ನೀಡಿ ವಿಶ್ವ ಕ್ರಿಕೆಟ್ ಗಮನ ಸೆಳೆದಿರುವ ವೈಭವ್ ಸೂರ್ಯವಂಶಿ ಭಾರತ ಎ ತಂಡದಲ್ಲಿ ಆಡುತ್ತಿದ್ದಾರೆ. ಶ್ರೀಲಂಕಾದಲ್ಲಿ ಅಫ್ಘಾನಿಸ್ತಾನ, ಶ್ರೀಲಂಕಾ ಮತ್ತು ಭಾರತ ಎ ತಂಡಗಳ ನಡುವೆ ತ್ರಿಕೋನ ಸರಣಿ ನಡೆಯುತ್ತಿದೆ. ಸೋಮವಾರ ಶ್ರೀಲಂಕಾ ವಿರುದ್ಧ ಭಾರತ ಪಂದ್ಯವನ್ನಾಡಿತ್ತು. ಪಂದ್ಯದ ನಂತರ ಭಾರತದ ಡ್ರೆಸ್ಸಿಂಗ್ ರೂಮ್‌ಗೆ ಬಂದಿರುವ ಅನುರ್ ವೈಭವ್ ಅವರನ್ನು ಹೊಗಳಿದ್ದಾರೆ. ಅಲ್ಲದೆ ವೈಭವ್‌ಗಾಗಿ ಒಂದು ಗಂಟೆಗೂ ಹೆಚ್ಚು ಕಾದು ಕುಳಿತಿದ್ದಾರೆ.



ಹಾಕಿ: ಸೆಮಿಗೆ ಮಹಿಳಾ ತಂಡ

ಹೊಸದಿಲ್ಲಿ: ಮಹಿಳೆಯರ ಎಫ್‌ಐಎಚ್ ಹಾಕಿ ನೇಷನ್ಸ್ ಕಪ್ ಪಂದ್ಯಾವಳಿಯಲ್ಲಿ ಭಾರತೀಯ ಮಹಿಳೆಯರು ಪಾರುಪತ್ಯ ಸಾಧಿಸಿದ್ದು ಜಪಾನ್ ತಂಡವನ್ನು 2-1ರಿಂದ ಮಣಿಸಿ ಪ್ರತಿಷ್ಠಿತ ಕೂಟದ ಸೆಮಿಫೈನಲ್‌ಗೇರಿದೆ. ಅಪ್‌ಕ್ಯಾಂಪ್‌ನಲ್ಲಿ ನಡೆಯುತ್ತಿರುವ ಪಂದ್ಯಾವಳಿಯಲ್ಲಿ ಎ ಪೂಲ್‌ನಲ್ಲಿರುವ ಭಾರತ ಮಹಿಳೆಯರ ತಂಡ ತಾನಾಡಿದ್ದ ಎರಡೂ ಪಂದ್ಯಗಳನ್ನು ಗೆದ್ದಿದೆ. ಮಂಗಳವಾರ ನಡೆದ ಜಪಾನ್ ವಿರುದ್ಧದ ಪಂದ್ಯದಲ್ಲಿ ಭಾರತವು 2-1ರಿಂದ ಗೆಲುವು ಸಾಧಿಸಿತು. ಸಲೀಮಾ 33ನೇ ನಿಮಿಷಕ್ಕೆ ಮೊದಲ ಗೋಲು ಗಳಿಸಿದರೆ, ಲಾಲ್ರೆಮ್ಸಿಯಾಮಿ 49ನೇ ನಿಮಿಷದಲ್ಲಿ ಗೋಲು ಗಳಿಸಿದರು. ಜಪಾನ್ ಪರ ಹಿರಾಮಿನ್ಸು 35ನೇ ನಿಮಿಷಕ್ಕೆ ಒಂದು ಗೋಲು ಗಳಿಸಿದರು. ಸೆಮಿಫೈನಲ್ ಪಂದ್ಯದಲ್ಲಿ ಭಾರತವು ಉರುಗ್ವೆ ವಿರುದ್ಧ ಆಡಲಿದೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



6017

6016 ಉತ್ತರ

ಎಡದಿಂದ ಬಲಕ್ಕೆ:
1.ಅಭಿರಾಮ
3.ದಂಗುಬಡಿ 6.ಕಲರವ
7.ರಾಮಾಯಣ 8.ತಿಗರಿ
10.ವಣಿಕ 12.ಸುಕುಮಾರಿ
13.ರತ್ನಾಕರ 16.ಗಡಿಕಲ್ಲು
17.ದುಗ್ಧಾಲಯ

ಮೇಲಿನಿಂದ ಕೆಳಕ್ಕೆ :
1.ಅಗ್ಗ 2.ಮದಕರಿ
4.ಗುಣವತಿ 5.ಡಿಕ್ಕಿ
7.ರಾಜೀವ 9.ರಿಪೇರಿ
11.ಕರಣಿಕ 12.ಸುರಕರು
14.ಅಂಗ 15.ಮಾಯ

ಎಡದಿಂದ ಬಲಕ್ಕೆ
1.ರೈತ ಬೆಳೆ ಕೊಯ್ದು ಮಾಡುವ ಸಂತಸದ ಸಮಯ (4)
2.ನ್ಯಾಯಾಲಯದಲ್ಲಿ ಎದುರುವಾದಿ (4)
4.ಸಮರ್ಥ-ನಿಷ್ಣಾತನಿಗ (3)
6.ಇದು ಉಗುರಿನಿಂದಾದ ಗೀರು (4)
8.ಈತ ಗೆಲುವನ್ನು ಸಾಧಿಸಿದವನು (4)
10.ಥಾರ್ ಮರುಭೂಮಿ ಹೊಂದಿದ ರಾಜ್ಯ (4)
12.ರವಿ ನಡುವೆ ತಿರುಗಿ ನಿರಂತರವಾಯ್ತು (4)
14.ಅಪ್ಪುಗಳಿಗೆ ಅದು ಹಲ್ಲಿಯಂತೆ ಕಾಣಿಸುತ್ತಿದೆ (3)
15.ಮಾತನ್ನು ಮೀರು ಎಂಬರ್ಥದ ಪದ (4)
16.ರಾತ್ರಿ ಅರಳುವ ಮಲ್ಲಿಗೆಯ ಬಗೆ (4)

ಮೇಲಿನಿಂದ ಕೆಳಕ್ಕೆ
1.ಸುಂದರವಾದ ಕಣ್ಣು (4)
3.ಒಂದು ದಿನದ ದುಡಿಮೆಗೆ ಕೊಡುವ ಭತ್ಯೆ (4)
4.ಗತಿಸಿ ಹೋದದ್ದು-ಹಿಂದೆ ಆದದ್ದು (2)
5.ಜನಗಳ ನಡುವೆ ಸಿಕ್ಕಿಬಿದ್ದ ಆನೆ (2)
7.ಭೂಮಿಯ ಆಳದಲ್ಲಿ ಸಿಗುವ ಅಜೈವಿಕ ವಸ್ತು (3)
9.ಗಾಯಕನ ಧ್ವನಿ-ಕಂಠವಿದು (3)
10.ಅವಸ್ಥರ ನುಡಿ-ತಕರಾರು ಮಾಡು (4)
11.ಆಭರಣ ಧರಿಸಿ ಏರಿದ ಬೆಟ್ಟ (2)
12.ವಸ್ತು-ಜೀವದ ಅಂತ್ಯವಿದು (2)
13.ಅವರ ಪಕ್ಕದಲ್ಲಿ-ಸಮೀಪದಲ್ಲಿ ಎಂಬರ್ಥದ ಪದ (4)

ಅಧಿಕಾರ ವಹಿಸಿಕೊಂಡ ಸಚಿವ ಕೃಷ್ಣ ಬೈರೇಗೌಡ ಸ್ಪಷ್ಟನೆ

ಸಿಎಂ ಮಾತಿಗೆ ಗೌರವ

• ಬೆಂಗಳೂರು: ರಾಜಕೀಯದಲ್ಲಿ ಸಿಗುವ ಅವಕಾಶ ಹಾಗೂ ಜವಾಬ್ದಾರಿಗಳನ್ನು ಸಮಚಿತ್ತದಿಂದ ಸ್ವೀಕರಿಸಿ ಕೆಲಸ ಮಾಡಬೇಕು. ಪ್ರತಿಯೊಬ್ಬರ ಜೀವನದಲ್ಲೂ ಕಹಿ ಇರಲಿದೆ. ನಾನು ಒಬ್ಬ ಮನುಷ್ಯನೆ. ಖಾತೆ ವಿಷಯವಾಗಿ ಮುಖ್ಯಮಂತ್ರಿಗಳ ಮತ್ತು ಪಕ್ಷದ ವರಿಷ್ಠರ ಗಮನಕ್ಕೆ ತಂದಿದ್ದೇನೆ. ಮೊದಲು ಅಧಿಕಾರ ವಹಿಸಿಕೊಂಡು ಕೆಲಸ ಆರಂಭಿಸಲು ಸೂಚಿಸಿದ್ದಾರೆ. ಅದರಂತೆ ಕೆಲಸ ಆರಂಭಿಸಿದ್ದೇನೆ ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಖಾತೆ ವಿಷಯವಾಗಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿಗಳ ಅಂತಿಮ ವಿವೇಚನೆ ಹಾಗೂ ಹಿರಿಯರ ತೀರ್ಮಾನಕ್ಕೆ ತಲೆಬಾಗುವುದಾಗಿ ಹೇಳಿದರು. ಸಮರ್ಥವಾಗಿ ಆಡಳಿತ ನಡೆಸಬೇಕು ಮತ್ತು ಸಾರ್ವಜನಿಕರಿಗೆ ಉತ್ತರದಾಯಿತ್ವ ಹೊಂದಿರಬೇಕು ಎಂದರೆ ವ್ಯವಸ್ಥೆಯಲ್ಲಿ ಒಂದು ಸ್ಪಷ್ಟತೆ ಇರಬೇಕು ಎಂದರು.

ನಾನು ಜವಾಬ್ದಾರಿ ವಹಿಸಿಕೊಳ್ಳುವ ಮುನ್ನ ಮರುಪರಿಶೀಲನೆ ನಡೆಸುವುದು ಸೂಕ್ತ ಎಂಬ ನಿಲುವನ್ನು ನಾನು ಹೊಂದಿದ್ದೆ. ಆದರೆ, ಸದ್ಯಕ್ಕೆ ನೀವು ಜವಾಬ್ದಾರಿಯನ್ನು ವಹಿಸಿಕೊಂಡು ಕೆಲಸ ಆರಂಭಿಸಿ, ಈ ಬಗ್ಗೆ ನಾವು ಮುಂದೆ ತೀರ್ಮಾನ ಮಾಡುತ್ತೇವೆ ಎಂದು ಮುಖ್ಯಮಂತ್ರಿಗಳು ಮತ್ತು ವರಿಷ್ಠರು ಸೂಚನೆ ನೀಡಿದ್ದಾರೆ. ಅವರ ಮಾತಿಗೆ ಗೌರವ ಕೊಟ್ಟು ನಾನು ಜವಾಬ್ದಾರಿ ವಹಿಸಿಕೊಂಡು ಕೆಲಸ ಆರಂಭಿಸುತ್ತಿದ್ದೇನೆ ಎಂದು ತಿಳಿಸಿದರು.

ಬೆಂಗಳೂರು ಎಲ್ಲರಿಗೂ ಸೇರಿರುವ ನಗರವಾಗಿದೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬೆಂಗಳೂರಿನ ಅಭಿವೃದ್ಧಿಗೆ ಸ್ಪಷ್ಟವಾದ ದೂರದೃಷ್ಟಿಯ ಯೋಜನೆಗಳನ್ನು ಹೊಂದಿದ್ದಾರೆ. ಅದರಂತೆ ಎಲ್ಲಾ ಅಧಿಕಾರಿಗಳು, ಆಡಳಿತ ವ್ಯವಸ್ಥೆ ಹಾಗೂ ಆಡಳಿತ ಮತ್ತು ವಿರೋಧ ಪಕ್ಷಗಳ ಜನಪ್ರತಿನಿಧಿಗಳ ಸಹಕಾರದೊಂದಿಗೆ ಸಮನ್ವಯದಿಂದ ಕಾರ್ಯನಿರ್ವಹಿಸಿ, ಬದ್ಧತೆಯಿಂದ ಕೆಲಸ ಮಾಡಲಾಗುವುದು ಎಂದು ಹೇಳಿದರು.



ಮರುಪರಿಶೀಲಿಸುವಂತೆ ಮನವಿ ಮಾಡಿದ್ದೆ: ಮುಖ್ಯಮಂತ್ರಿಗಳು ತಮ್ಮ ವಿವೇಚನಾ ಅಧಿಕಾರವನ್ನು ಉಪಯೋಗಿಸಿ ಈ ತೀರ್ಮಾನ ಕೈಗೊಂಡಿದ್ದಾರೆ. ಆಡಳಿತವು ತಳಮಟ್ಟದಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಬೇಕಾದರೆ ಸ್ಪಷ್ಟತೆ ಅಗತ್ಯವಿರುತ್ತದೆ ಎಂಬ ಕಾರಣಕ್ಕೆ ಮರುಪರಿಶೀಲಿಸುವಂತೆ ಮನವಿ ಮಾಡಿದ್ದೆ ಅಷ್ಟೇ. ಆದರೆ ಅಂತಿಮವಾಗಿ ಇವೆಲ್ಲವೂ ಮುಖ್ಯಮಂತ್ರಿಗಳ ವಿವೇಚನೆಗೆ ಒಳಪಡುವ ವಿಷಯಗಳಾಗಿದ್ದು, ಅದನ್ನು ನಾವೆಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ ಎಂದು ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಚಿನ್ನಾಭರಣ ಖರೀದಿಸುವುದಾಗಿ ನಂಬಿಸಿ ಮೋಸ | ಇಬ್ಬರ ಸೆರೆ

1.64 ಕೋಟಿ ಮೌಲ್ಯದ ಚಿನ್ನದ ಗಟ್ಟಿ ವಶ

• ಬೆಂಗಳೂರು: ಚಿನ್ನಾಭರಣಗಳನ್ನು ಖರೀದಿಸುವುದಾಗಿ ನಂಬಿಸಿ, ತಮ್ಮ ಕಚೇರಿಗೆ ತರಿಸಿಕೊಂಡು ನೋಡುವ ನೆಪದಲ್ಲಿ ರೂಮ್‌ಗೆ ತೆಗೆದುಕೊಂಡು ಹೋಗಿ ಅಲ್ಲಿಂದಲೇ ಆಭರಣಗಳೊಂದಿಗೆ ಪರಾರಿಯಾಗಿದ್ದ ಇಬ್ಬರು ಕಳ್ಳರನ್ನು ಮಲ್ಲೇಶ್ವರ ಠಾಣೆ ಪೊಲೀಸರು ಬಂಧಿಸಿ 1.64 ಕೋಟಿ ಮೌಲ್ಯದ ಚಿನ್ನದಗಟ್ಟಿ ಮತ್ತು ಚಿನ್ನಾಭರಣಗಳನ್ನುಗಳನ್ನು ವಶಪಡಿಸಿಕೊಂಡಿದ್ದಾರೆ.

ಮಹಾರಾಷ್ಟ್ರ ಮೂಲದ ಪ್ರವೀಣ್ ಅಲಿಯಾಸ್ ಪಪ್ಪು(44) ಮತ್ತು ಗುಜರಾತ್ ಮೂಲದ ಪರೇಶ್ ಸೋನಿ (49) ಬಂಧಿತ ಆರೋಪಿಗಳಾಗಿದ್ದು,ಇನ್ನುಳಿದ ಆರೋಪಿಗಳಿಗಾಗಿ ಶೋಧ ಕಾರ್ಯ ಮುಂದುವರೆಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ತಿಳಿಸಿದರು.



ಅವೆನ್ಯೂ ರಸ್ತೆ ಚಿಕ್ಕಪೇಟೆಯಲ್ಲಿ ಅಂಗಡಿ ಆಭರಣದ ಇಟ್ಟುಕೊಂಡಿರುವ ಚಿನ್ನದ ವ್ಯಾಪಾರಿ ಮಹೇಂದ್ರ ಕುಮಾರ್ ಜೈನ್ ಎಂಬುವವರಿಗೆ ಮಲ್ಲೇಶ್ವರದ ಸಂಪಿಗೆ ರಸ್ತೆಯಲ್ಲಿರುವ ಎಂಟರ್ ಪ್ರೈಸ್ ಒಂದರ ಕಚೇರಿಯ ಮ್ಯಾನೇಜರ್ ಹಾಗು ಸಿಬ್ಬಂದಿಗಳು ಚಿನ್ನಾಭರಣಗಳನ್ನು ಹೋಲ್‌ಸೇಲ್ ಆಗಿ ಖರೀದಿಸುವುದಾಗಿ ಹೇಳಿ ನಂಬಿಸಿದ್ದಾರೆ.ಈ ಮಾತನ್ನು ನಂಬಿದ ಮಹೇಂದ್ರಕುಮಾರ್ ಜೈನ್ ತಮ್ಮ ಅಂಗಡಿಯ ಇಬ್ಬರು ಕೆಲಸಗಾರರಿಗೆ ಮೇ.16 ರಂದು 1 ಕೆಜಿ 514 ಗ್ರಾಂ ಚಿನ್ನಾಭರಣಗಳನ್ನು ಕೊಟ್ಟು ಕಳುಹಿಸಿದ್ದಾರೆ.ಆರೋಪಿಗಳು ಕಚೇರಿಗೆ ತರಿಸಿಕೊಂಡ ಚಿನ್ನಾಭರಣಗಳ ಫೋಟೋ ತೆಗೆದುಕೊಳ್ಳುವುದಾಗಿ ನಂಬಿಸಿ, ಆಭರಣಗಳನ್ನು ಪಕ್ಕದ ಕೊಠಡಿಗೆ ತೆಗೆದುಕೊಂಡು ಹೋಗಿ ಕೆಲವೇ ನಿಮಿಷಗಳಲ್ಲಿ ಆಭರಣಗಳೊಂದಿಗೆ ಕೊಠಡಿಯ ಹಿಂಭಾಗದಿಂದ ಪರಾರಿಯಾಗಿದ್ದರು ಎಂದು ನಗರ ಪೊಲೀಸ್ ಆಯುಕ್ತರು ವಿವರಿಸಿದರು.

ಎಷ್ಟು ಹೊತ್ತಾದರೂ ಯಾರೂ ಬಾರದಿದ್ದಾಗ ಅನುಮಾನಗೊಂಡು ಕೆಲಸಗಾರರು ಆ ಕೊಠಡಿಯ ಬಳಿ ಹೋಗಿ ನೋಡಿದಾಗ ಅಲ್ಲಿ ಯಾರೂ ಇರಲಿಲ್ಲ, ಆಭರಣಗಳು ಸಹ ಇರಲಿಲ್ಲ, ಇದರಿಂದ ಗಾಬರಿಯಾದ ಕೆಲಸಗಾರರು ತಕ್ಷಣ ತಮ್ಮ ಮಾಲೀಕ ಮಹೇಂದ್ರಕುಮಾರ್ ಜೈನ್ ಅವರಿಗೆ ವಿಷಯ ತಿಳಿಸಿದ್ದಾರೆ.ಮಾಲೀಕರು ಈ ಬಗ್ಗೆ ಮಲ್ಲೇಶ್ವರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡ ಪೊಲೀಸರು, ವಿವಿಧ ಆಯಾಮಗಳಲ್ಲಿ ಮಾಹಿತಿಗಳನ್ನು ಕಲೆ ಹಾಕಿದ್ದಾರೆ ಎಂದು ಸೀಮಂತ್ ಕುಮಾರ್ ಸಿಂಗ್ ತಿಳಿಸಿದರು.

ಖಚಿತ ಮಾಹಿತಿ ಮೇರೆಗೆ ಶೇಷಾದ್ರಿಪುರಂ ಆನಂದ್ ರಾವ್ ಸರ್ಕಲ್ ಬಳಿ ಒಬ್ಬಾತನನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದಾಗ, ತನ್ನ ಸಹಚರರೊಂದಿಗೆ ಸೇರಿಕೊಂಡ ಚಿನ್ನಾಭರಣಗಳನ್ನು ಕಳವು ಮಾಡಿದ್ದಾಗಿ ಹೇಳಿದ್ದಾನೆ. ಮತ್ತೊಬ್ಬನನ್ನು ಮಹಾರಾಷ್ಟ್ರದ ಮುಂಬೈನ ಪ್ರಾರ್ಥನ ಸಮಾಜದ ಬಳಿ ಬಂಧಿಸಿದ್ದಾರೆ.

ಕಳವು ಮಾಡಿದ ಚಿನ್ನಾಭರಣಗಳ ಪೈಕಿ 220 ಗ್ರಾಂ ಚಿನ್ನಾಭರಣಗಳನ್ನು ಮುಂಬೈನ ಜವಾರಿ ಬಜಾರ್‌ನ ಜ್ಯುವೆಲರಿ ಅಂಗಡಿಯೊಂದರಲ್ಲಿ ಮಾರಾಟ ಮಾಡಿರುವುದಾಗಿ ತಿಳಿಸಿರುತ್ತಾನೆ. ಅದನ್ನು ನಿಯಮಾನುಸಾರ ವಶಕ್ಕೆ ಪಡೆಯಲಾಗಿದೆ. ಅಲ್ಲದೆ ಕಳವು ಮಾಡಿದ ಚಿನ್ನಾಭರಣಗಳನ್ನು ಚಿಕ್ಕಪೇಟೆ, ಅವಲಹಳ್ಳಿ, ಗುಟ್ಟಹಳ್ಳಿಯಲ್ಲಿರುವ ಅವರ ಸ್ನೇಹಿತರುಗಳಿಗೆ ನೀಡಿರುವುದಾಗಿ ತಿಳಿಸಿರುತ್ತಾರೆ ಎಂದು ನಗರ ಪೊಲೀಸ್ ಆಯುಕ್ತರು ವಿವರಿಸಿದರು.

ಆರೋಪಿಗಳಿಬ್ಬರ ಬಂಧನದಿಂದ ಒಟ್ಟು 1 ಕೆಜಿ 8 ಗ್ರಾಂ ಚಿನ್ನಾಭರಣಗಳು ಮತ್ತು ಚಿನ್ನದ ಗಟ್ಟಿಯನ್ನು ವಶಪಡಿಸಿಕೊಂಡಿದ್ದು, ಇವುಗಳ ಒಟ್ಟು ಮೌಲ್ಯ 1.64 ಕೋಟಿ ರೂ.ಗಳೆಂದು ಅಂದಾಜಿಸಲಾಗಿದೆ.ಈ ಪ್ರಕರಣದಲ್ಲಿ ತಲೆಮರೆಸಿಕೊಂಡಿರುವ ಮತ್ತಿಬ್ಬರು ಸಹಚರರ ಪತ್ತೆ ಕಾರ್ಯ ಮುಂದುವರೆದಿದ್ದು, ತನಿಖೆ ಪ್ರಗತಿಯಲ್ಲಿದೆ ಎಂದು ಸೀಮಂತ್ ಕುಮಾರ್ ತಿಳಿಸಿದರು.

ಕಳ್ಳರಿಂದ 60 ದ್ವಿಚಕ್ರ ವಾಹನ ವಶ

• ಬೆಂಗಳೂರು: ಜಯನಗರ ಮತ್ತು ಸಂಪಿಗೆಹಳ್ಳಿ ಠಾಣೆ ಪೊಲೀಸರು ಕಾರ್ಯಾಚರಣೆ ನಡೆಸಿ ಒಟ್ಟು 37 ಲಕ್ಷ ಮೌಲ್ಯದ 60 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ. ಜಯನಗರ ಠಾಣೆ ಪೊಲೀಸರು ಸಲ್ಮಾನ್ ಮಹಮ್ಮದ್ (27) ಎಂಬಾತನನ್ನು ಬಂಧಿಸಿ 22.20 ಲಕ್ಷ ಮೌಲ್ಯದ 37 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ. ಸಂಪಿಗೆಹಳ್ಳಿ ಠಾಣೆ ಪೊಲೀಸರು ಸೈಯದ್ ಅನ್ವರ್ (20) ಹಾಗೂ ಮಹಮ್ಮದ್ ಉಮರ್ ಸಾಬ್ (27) ಎಂಬ ಆರೋಪಿಗಳನ್ನು ಬಂಧಿಸಿ 15 ಲಕ್ಷ ಮೌಲ್ಯದ 23 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ.

> ಜಯನಗರ, ಸಂಪಿಗೆಹಳ್ಳಿ ಠಾಣೆ ಪೊಲೀಸರ ಕಾರ್ಯಾಚರಣೆ

ಜಯನಗರ ಮತ್ತು ಸಂಪಿಗೆಹಳ್ಳಿ ಪೊಲೀಸ್ ಠಾಣೆಯಲ್ಲಿ ದಾಖಲಾದ ಪ್ರತ್ಯೇಕ ದ್ವಿಚಕ್ರ ವಾಹನ ಕಳವು ಪ್ರಕರಣಗಳಲ್ಲಿ ಸಿಕ್ಕಿದ ಆರೋಪಿಗಳನ್ನು ವಿಚಾರಣೆಗೊಳಪಡಿಸಿದಾಗ, ದ್ವಿಚಕ್ರ ವಾಹನಗಳನ್ನು ಕಳವು ಮಾಡಿರುವುದಾಗಿ ಒಪ್ಪಿಕೊಂಡಿದ್ದಾರೆ. ಮುಂದಿನ ವಿಚಾರಣೆಯಲ್ಲಿ ಕಳವು ಮಾಡಿದ ವಾಹನಗಳ ನಂಬರ್ ಪ್ಲೇಟ್‌ಗಳನ್ನು ಬದಲಿಸಿ, ನಕಲಿ ನಂಬರ್ ಪ್ಲೇಟ್ ಅಳವಡಿಸಿ ಬೇರೆಯವರಿಗೆ ಮಾರಾಟ ಮಾಡಿರುವುದಾಗಿ ತಿಳಿಸಿದ್ದಾರೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ತಿಳಿಸಿದರು.

ಕಳವು ಮಾಡಿದ ವಾಹನಗಳನ್ನು ಮಾರಾಟ ಮಾಡುವ ಉದ್ದೇಶದಿಂದ ಬೃಂದಾವನ ಪಾರ್ಕ್ ಸಮೀಪದ ಖಾಲಿ ಜಾಗದಲ್ಲಿ ಹಾಗೂ ಜೋಕ್ಸನಹಳ್ಳಿ ಮತ್ತು ಅಗ್ರಹಾರದ ನೀಲಗಿರಿ ತೋಪಿನಲ್ಲಿ ಇರಿಸಿರುವುದಾಗಿ ಆರೋಪಿಗಳು ಮಾಹಿತಿ ನೀಡಿದ್ದಾರೆ.ಆರೋಪಿಗಳಿಂದ ವಾಹನಗಳನ್ನು ಖರೀದಿಸಿದವರು 25 ದ್ವಿಚಕ್ರ ವಾಹನಗಳನ್ನು ಠಾಣೆಗೆ ತಂದು ಹಾಜರುಪಡಿಸಿದ್ದಾರೆ. ಇನ್ನೂ 45 ದ್ವಿಚಕ್ರ ವಾಹನಗಳನ್ನು ಆರೋಪಿಗಳು ನಿಲ್ಲಿಸಿದ್ದ ಸ್ಥಳಗಳಿಂದ ವಶಪಡಿಸಿಕೊಳ್ಳಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಮಾಹಿತಿ ನೀಡಿದರು.

ಈ ಕಾರ್ಯಾಚರಣೆಯಿಂದ ಜಯನಗರ ಪೊಲೀಸ್ ಠಾಣೆಯ 11 ಪ್ರಕರಣಗಳು, ಕಲಾಸಿಪಾಳ್ಯ ಪೊಲೀಸ್ ಠಾಣೆಯ 3 ಪ್ರಕರಣಗಳು, ವಿಜಯನಗರ, ಉಪ್ಪಾರಪೇಟೆ, ಸಂಪಿಗೆಹಳ್ಳಿ ಹಾಗೂ ಗೋವಿಂದರಾಜನಗರ ಠಾಣೆಗಳ ತಲಾ 2 ಪ್ರಕರಣಗಳು, ತಿಲಕನಗರ, ಕಮರ್ಷಿಯಲ್ ಸ್ಟ್ರೀಟ್, ಬಸವನಗುಡಿ, ಇಂದಿರಾನಗರ, ಹೈಗ್ರೌಂಡ್, ಭಾರತಿ ನಗರ, ಮಹಾಲಕ್ಷ್ಮಿ ಲೇಔಟ್, ಕೋರಮಂಗಲ, ರಾಜಾಜಿನಗರ ಹಾಗೂ ಕಬ್ಬನ್ ಪಾರ್ಕ್ ಠಾಣೆಗಳ ತಲಾ 1 ಪ್ರಕರಣ ಸೇರಿದಂತೆ ಒಟ್ಟು 32 ದ್ವಿಚಕ್ರ ವಾಹನ ಕಳವು ಪ್ರಕರಣಗಳು ಪತ್ತೆಯಾಗಿವೆ. ಉಳಿದ ದ್ವಿಚಕ್ರ ವಾಹನಗಳ ಮಾಲೀಕರ ಪತ್ತೆ ಕಾರ್ಯ ಮುಂದುವರೆದಿದ್ದು, ತನಿಖೆ ಪ್ರಗತಿಯಲ್ಲಿದೆ. ಜಯನಗರ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಗಿರೀಶ್ ಹಾಗೂ ಸಂಪಿಗೆಹಳ್ಳಿ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ವಿ.ಎಂ. ಗಿರೀಶ್ ನೇತೃತ್ವದ ತಂಡವು ಪ್ರಕರಣಗಳನ್ನು ಬೇಧಿಸಿ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಸೀಮಂತ್ ಕುಮಾರ್ ಸಿಂಗ್ ಮಾಹಿತಿ ನೀಡಿದರು.

ಪ್ರಶ್ನೆ ಮಾಡುವ ಎದೆಗಾರಿಕೆ ಬರಲಿ

• ತಿಪಟೂರು: ಆಡಳಿತ ನಡೆಸುವ ಸರ್ಕಾರಗಳು ಸಾರ್ವಜನಿಕ ಪರಾಮರ್ಶೆಗೆ ಒಳಪಡಬೇಕು. ಜನರು ಪ್ರಶ್ನೆ ಮಾಡುವ ಎದೆಗಾರಿಕೆಯನ್ನು ರೂಢಿಸಿಕೊಂಡಾಗ ಆರೋಗ್ಯವಂತ ಸಮಾಜ ನಿರ್ಮಾಣವಾಗಲು ಸಾಧ್ಯವಾಗುತ್ತದೆ ಎಂದು ಖ್ಯಾತ ಪತ್ರಕರ್ತ ಹಾಗೂ ರಂಗಕರ್ಮಿ ಹುಣಸವಾಡಿ ರಾಜನ್ ತಿಳಿಸಿದರು.

ನಗರದ ಶ್ರೀ ಸತ್ಯಗಣಪತಿ ಆಸ್ಥಾನ ಮಂಟಪದಲ್ಲಿ ಬಯಲುಸೀಮೆ ಸಾಮಾಜಿಕ-ಸಾಂಸ್ಕೃತಿಕ ಸಂಘದ 25ನೇ ವಾರ್ಷಿಕ ಸಂಭ್ರಮ, ಲಾಂಛನ ಬಿಡುಗಡೆ, ಕನ್ನಡ ಸಾಹಿತ್ಯ ಕಲ್ಪತರು ಪ್ರಶಸ್ತಿ ಪ್ರದಾನ ಹಾಗೂ ಭಾವಗೀತೆ ಗಾಯನ ಕಾರ್ಯಕ್ರಮದಲ್ಲಿ ಸಂಘದ ಲಾಂಛನವನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು, ದೇಶಾಭಿಮಾನಕ್ಕೂ ಸರ್ಕಾರದ ನಿಷ್ಠೆಗೂ ಸಂಬಂಧವಿಲ್ಲ, ದೇಶಭಕ್ತಿ ಮತ್ತು ದೇಶಾಭಿಮಾನವು ವ್ಯಕ್ತಿಯ ಸ್ವಾಭಿಮಾನಕ್ಕೆ ಸಂಬಂಧಿಸಿದ್ದಾಗಿದೆ. ಆಡಳಿತ ನಡೆಸುವ ಸರ್ಕಾರಗಳು ಪರಾಮರ್ಶೆಗೆ ಒಳಪಡಬೇಕು. ಸರ್ಕಾರವನ್ನು ಪರಾಮರ್ಶೆಗೆ ಒಳಪಡಿಸಿದಾಗ ಅದರ ಸಾಚಾತ್ವಗಳು ಸಮಾಜಕ್ಕೆ ತಿಳಿಯುತ್ತವೆ. ಆಗ ಮಾತ್ರ ಉತ್ತಮ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ. ಕನ್ನಡ ಸಾಹಿತ್ಯ ಕಲ್ಪತರು ಪ್ರಶಸ್ತಿ ಸ್ವೀಕರಿಸಿದ ಖ್ಯಾತ ಹಾಸ್ಯ ಸಾಹಿತಿ ವೈ.ವಿ.ಗುಂಡೂರಾವ್ ಮಾತನಾಡಿ, ಸಾಹಿತ್ಯವು ಸಂಬಂಧಗಳನ್ನು ಬೆಸೆಯುವ ಕೆಲಸ ಮಾಡುತ್ತದೆ. ಸಾಹಿತ್ಯದಲ್ಲಿ ಮೂರು ಬಗೆಯ ಸಾಹಿತ್ಯಗಳನ್ನು ಕಾಣುತ್ತೇವೆ. ಪ್ರಬೋಧ ಸಾಹಿತ್ಯವು ನೀತಿ ಪಾಠಗಳ ಮೂಲಕ ಸಮಾಜವನ್ನು ಬೆಸೆಯುತ್ತದೆ. ಎಂದು ಹೇಳಿದರು.

ಸನ್ಮಾನ: ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಹಾರನಹಳ್ಳಿ, ನಿವೃತ್ತ ಪ್ರಾಂಶುಪಾಲರಾದ ಕೆ.ಎನ್. ರೇಣುಕಯ್ಯ ಹಾಗೂ ಚನ್ನೇಗೌಡ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಹಿರಿಯ ರಂಗಕರ್ಮಿ ಪಾಲ್ ಸುದರ್ಶನ್, ಪರೇಶ್ ಜವೇಲ್, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಮಕ್ಕಳ ಸಾಹಿತಿ ನಾಗರಾಜ ಶೆಟ್ಟಿ, ಸಂಘದ ಸಂಸ್ಥಾಪಕ ಎಸ್. ಬಾನುಪ್ರಕಾಶ್, ಗೌರವಾಧ್ಯಕ್ಷ ಜಯಶೇಖರ ಪ್ರಸಾದ್, ಅಧ್ಯಕ್ಷ ನಾಗರಾಜು, ವಿಶ್ವದೀಪ್, ಬಿ.ಸಿ. ನಾಗೇಶ್, ರಾಮ್ ಮೋಹನ್, ಶಶಿಕಿರಣ್ ಮತ್ತಿತರರಿದ್ದರು.

ಇಬ್ಬರು ಇಂಜಿನಿಯರ್ ಮನೆ ಮೇಲೆ ಲೋಕಾಯುಕ್ತ ದಾಳಿ

• ಬೆಂಗಳೂರು: ಆದಾಯದ ಮೂಲಗಳಿಗಿಂತ ಹೆಚ್ಚು ಆಸ್ತಿಯನ್ನು ಹೊಂದಿದ್ದ ಆರೋಪದ ಮೇಲೆ ಸರ್ಕಾರಿ ಅಧಿಕಾರಿಗಳ ಸಂಬಂಧಿಸಿದ ಸ್ಥಳಗಳಲ್ಲಿ ಕರ್ನಾಟಕ ಲೋಕಾಯುಕ್ತ ಅಧಿಕಾರಿಗಳು ಮಂಗಳವಾರ ಶೋಧ ಕಾರ್ಯಾಚರಣೆ ನಡೆಸಿದರು. ಬೆಂಗಳೂರಿನ ಕರ್ನಾಟಕ ಗೃಹ ಮಂಡಳಿಯ ನಗರ ಯೋಜನೆ ವಿಭಾಗದ ಹೆಚ್ಚುವರಿ ನಿರ್ದೇಶಕ ರಾಜಣ್ಣ ಎಸ್.ಎಲ್ ಅವರಿಗೆ ಸೇರಿದ ಒಟ್ಟು 5 ಸ್ಥಳಗಳಲ್ಲಿ ಶೋಧನಾ ಕಾರ್ಯ ನಡೆದಿದ್ದು, 3 ನಿವೇಶನಗಳು, 2 ವಾಸದ ಮನೆಗಳು, 3 ಎಕರೆ ಕೃಷಿ ಜಮೀನು, 40 ಸಾವಿರ ರೂ. ನಗದು, 70 ಲಕ್ಷ ರೂ. ಬೆಲೆ ಬಾಳುವ ಚಿನ್ನಾಭರಣಗಳು, 17 ಲಕ್ಷ ರೂ. ಬೆಲೆ ಬಾಳುವ ವಾಹನಗಳು, 20 ಲಕ್ಷ ರೂ. ಬ್ಯಾಂಕ್ ಉಳಿತಾಯ ಸೇರಿ ಒಟ್ಟು 7,10,48,000 ಮೌಲ್ಯದ ಆಸ್ತಿ ಪತ್ತೆಯಾಗಿದೆ. ಬೆಸ್ಕಾಂನ ಯಲಹಂಕ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರ ಉದಯ ಕುಮಾರ್ ಎಂ.ಬಿ. ಸೇರಿದ ಒಟ್ಟು 4 ಸ್ಥಳಗಳಲ್ಲಿ ಶೋಧನಾ ಕಾರ್ಯ ನಡೆದಿದ್ದು, 10 ನಿವೇಶನಗಳು, 1 ವಾಸದ ಮನೆ, 1 ಎಕರೆ ಕೃಷಿ ಜಮೀನು, 1,83,650 ರೂ. ನಗದು, 30,29,810 ರೂ. ಬೆಲೆ ಬಾಳುವ ಚಿನ್ನಾಭರಣಗಳು, 33 ಲಕ್ಷ ರೂ. ಬೆಲೆ ಬಾಳುವ ವಾಹನಗಳು, 1.80 ಲಕ್ಷ ರೂ. ಬೆಲೆಬಾಳುವ ಇತರೆ ವಸ್ತುಗಳು, 21 ಲಕ್ಷ ರೂ. ಬೆಲೆ ಬಾಳುವ ಬ್ಯಾಂಕ್ ಠೇವಣಿ ಸೇರಿ ಒಟ್ಟು 3,90,78,460 ರೂ. ಮೌಲ್ಯದ ಆಸ್ತಿ ಪತ್ತೆಯಾಗಿದೆ.

ಮಾರ್ನಿಂಗ್ ಶೋ

ಮೋಡ ಕವಿದ ವಾತಾವರಣ ಹೀರೋಗೊಂದು ಟೀಸರ್



ಒಂದು ಸರಳ ಪ್ರೇಮಕಥೆಯಂಥ ಯಶಸ್ವೀ ಚಿತ್ರ ನೀಡಿದ ನಿರ್ಮಾಪಕ, ನಿರ್ದೇಶಕರ ಹಿಟ್ ಕಾಂಬಿನೇಶನ್ ಮತ್ತೆ ಸೇರಿ ಮಾಡಿರುವ ಚಿತ್ರ ಮೋಡ ಕವಿದ ವಾತಾವರಣ. ಸಿಂಪಲ್ ಸುನಿ ಅವರ ನಿರ್ದೇಶನದ ಈ ಚಿತ್ರವನ್ನು ರಾಮ್ ಮೂವೀಸ್ ಮೂಲಕ ಮೈಸೂರು ರಮೇಶ್, ಶ್ರೀರಂಗರಾಜು, ಲೋಕೇಶ್ ಬೇವಾಡಿ ಹಾಗೂ ಗೋವಾ ರಮೇಶ್ (ಚೆಲ್ವರ್) ನಿರ್ಮಿಸಿದ್ದಾರೆ, ಮೋಡಕವಿದ ವಾತಾವರಣ ಚಿತ್ರದ ಬಿಡುಗಡೆ ದಿನಾಂಕ ಈಗಾಗಲೇ ಅನೌನ್ಸ್ ಆಗಿದೆ, ನಿನ್ನೆಸಂಜೆ ಈ ಚಿತ್ರದ ಹೀರೋ ಇಂಟ್ರಡಕ್ಷನ್ ಟೀಸರ್ ಬಿಡುಗಡೆ ಸಮಾರಂಭ ನಡೆಯಿತು.

ಈಹಿಂದೆ ಸಿಂಪಲ್ಲಾಗೊಂದ್ ಲವ್ ಸ್ಟೋರಿ, ಬಜಾರ್, ಅವತಾರ ಪುರುಷದಂಥ ಚಿತ್ರಗಳ ಮೂಲಕ ಇತ್ತೀಚೆಗೆ ತರೆಹಂತ ತರೆಹಂತ ಗತವೈಭವ ಸೇರಿದಂತೆ ಬಹುತೇಕ ಚಿತ್ರಗಳಲ್ಲಿ ಹೊಸ ಪ್ರತಿಭೆಗಳನ್ನು ಇಂಟ್ರಡ್ಯೂಸ್ ಮಾಡಿ ಗೆದ್ದಿರುವ ಸಿಂಪಲ್ ಸುನಿ ಅವರು ತಮ್ಮ ಗರಡಿಯ ಹುಡುಗ ಶೀಲಮ್ ಎಂ.ಸ್ವಾಮಿ ಅವರನ್ನು ಈ ಚಿತ್ರದ ಮೂಲಕ ನಾಯಕನಾಗಿ ಪರಿಚಯಿಸಿದ್ದಾರೆ. ಸ್ಪೈಕ್ರಟಿಕ್ ಫಿಕ್ಷನ್ ಲವ್‌ಸ್ಟೋರಿ ಒಳಗೊಂಡ ಮೋಡಕವಿದ ವಾತಾವರಣ ಚಿತ್ರದಲ್ಲಿ ಶೀಲಮ್ ಎಂ. ಸ್ವಾಮಿ ಅವರ ಜೊತೆ ಇಬ್ಬರು ನಾಯಕಿಯರಾಗಿ ಸಾತ್ವಿಕಾ ಹಾಗೂ ಮೇಘಾ ಕುಶಾಲ್ ನಟಿಸಿದ್ದಾರೆ.

ಈ ವೇಳೆ ಮಾತನಾಡಿದ ಸುನಿ ಇವತ್ತು ನಾಯಕ ಇಂಟ್ರಡಕ್ಷನ್ ಟೀಸರನ್ನು ರಿಲೀಸ್ ಮಾಡಿದ್ದೇವೆ. ರಕ್ಷಿತ್ ಶೆಟ್ಟಿ, ಧನ್‌ವೀರ್, ರಿಷಿ ಸೇರಿದಂತೆ ಹಲವಾರು ಹೀರೋಗಳು ನನ್ನ ಸಿನಿಮಾದಲ್ಲಿ ಹೀರೋ ಆಗಿ ಬಂದರು, ಶೀಲಂ ಕೂಡ ಹೀರೋ ಆಗಲೆಂದು ಚಿತ್ರರಂಗಕ್ಕೆ ಬಂದವರು.

ಡೈರೆಕ್ಷನ್ ವಿಭಾಗಕ್ಕೆ ಸೇರಿದರು, ನಾನು ಅವರನ್ನು ಆರ್ಟಿಸ್ಟ್ ಆಗಿ ಯಾವತ್ತೂ ನೋಡಿರಲಿಲ್ಲ, ಈ ಪಾತ್ರಕ್ಕೆ ಅವರೇ ಸೂಟ್ ಆದರು, ರಮೇಶ್ ಅವರು ಬಂದಮೇಲೆ ನಮ್ಮ ಚಿತ್ರಕ್ಕೆ ಆನೆಬಲ ಬಂತು, ಶೀಲಂ ತುಂಬಾ ಚೆನ್ನಾಗಿ ಆಕ್ಟ್ ಮಾಡಿದ್ದಾರೆ, ಅವರ ಪಾತ್ರಕ್ಕೆ ತುಂಬಾ ವೇರಿಯೇಶನ್ಸ್ ಇದೆ, ರಿವರ್ಸ್ ಸ್ಕ್ರೀನ್‌ಪ್ಲೇ ಮೂಲಕ ಕಥೆಯನ್ನು ಹೇಳಲು ಟ್ರೈ ಮಾಡಿದ್ದೇನೆ, ಮಲಯಾಳಂನಲ್ಲಿ ಮೇಘಮಾನ ಶೀರ್ಷಿಕೆಯಡಿ ನಮ್ಮ ಚಿತ್ರ ಏಕಕಾಲಕ್ಕೆ ಬಿಡುಗಡೆಯಾಗುತ್ತಿದೆ, ಸಿನಿಮಾ ನೋಡಿದ ಮೇಲೆ ಒಂದು ಫೀಲ್‌ಗುಡ್ ಎಂದೆನಿಸುತ್ತದೆ. ಈ ಥರದ ಸಿನಿಮಾ ಅಂದ್ಕೊಂಡಿರಲಿಲ್ಲ ಅಂತ ಅನಿಸುತ್ತೆ. ಜೂಡಾ ಅವರ ಸಂಗೀತ ಚಿತ್ರದ ಪ್ಲಸ್ ಪಾಯಿಂಟ್ ಎಂದರು.

ನಿರ್ಮಾಪಕರಲ್ಲೊಬ್ಬರಾದ ಮೈಸೂರು ರಮೇಶ್ ಮಾತನಾಡಿ 8 ತಿಂಗಳ ಹಿಂದೆಯೇ ನಮ್ಮ ಚಿತ್ರ ರಿಲೀಸಾಗಬೇಕಿತ್ತು, ಚಿತ್ರ 70% ಆದ ನಂತರ ನಾವೆಲ್ಲ ಸೇರಿರು ಸೇರಿ ಈ ಚಿತ್ರವನ್ನು ಟೇಕೋವರ್ ಮಾಡಿದೆವು, ಇದೇ ತಿಂಗಳು ಕನ್ನಡ ಮಲಯಾಳಂ ಸೇರಿ ಎರಡೂ ಭಾಷೆಗಳಲ್ಲಿ ಬಿಡುಗಡೆಯಾಗುತ್ತಿದೆ ಎಂದರು. ನಾಯಕಿಯರಾದ ಸಾತ್ವಿಕಾ, ಮೇಘ ಕುಶಾಲ್ ತಂತಮ್ಮ ಅನುಭವ ಹಾಗೂ ಪಾತ್ರಗಳ ಬಗ್ಗೆ ಹೇಳಿದರು, ಛಾಯಾಗ್ರಾಹಕ ಸಂತೋಷ್ ರೈ ಪಾತಾಜೆ ಮಾತನಾಡುತ್ತ ಮೋಡಕವಿದ ವಾತಾವರಣೆ ನಮ್ಮ ಚಿತ್ರದ ಹೈಲೈಟ್. ಹೆಚ್ಚಿನ ಫ್ರೇಮ್‌ಗಳಲ್ಲಿ ಇದೇ ಫೀಲ್ ಇರುತ್ತೆ. 70-80% ಕಥೆ ನಾಯಕ, ಇಬ್ಬರು ನಾಯಕಿಯರು ಈ ಮೂರು ಪಾತ್ರಗಳ ಮೇಲೇ ಸಾಗುತ್ತದೆ. ಚಿತ್ರಕ್ಕೆ 50 ದಿನಗಳ ಕಾಲ ಶೂಟ್ ಮಾಡಿದ್ದೇವೆ ಎಂದರು.

ನಿರ್ಮಾಪಕಿ ಜಯಮ್ಮ ವಿಧಿವಶ

ಕನ್ನಡ ಚಿತ್ರರಂಗದ ಹಿರಿಯ ನಿರ್ಮಾಪಕ ಎಸ್.ಎ. ಚಿನ್ನೇಗೌಡ ಅವರ ಪತ್ನಿ ಹಾಗೂ ಸ್ಟಾರ್ ವಿಜಯ್ ರಾಘವೇಂದ್ರ, ಶ್ರೀಮುರಳಿ ಅವರ ತಾಯಿ ಜಯಮ್ಮ(70) ಅವರು ಹೃದಯಾಘಾತದಿಂದ ನಿಧನರಾಗಿದ್ದಾರೆ. ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ಜಯಮ್ಮ ಅವರು ಜೂನ್ 16ರ ಬೆಳಗ್ಗೆ ತಮ್ಮ ನಿವಾಸದಲ್ಲಿ ಕೊನೆಯುಸಿರೆಳೆದಿದ್ದಾರೆ.

ವರನಟ ಡಾ.ರಾಜ್‌ಕುಮಾರ್ ಸಹೋದರ ಹಾಗೂ ನಿರ್ಮಾಪಕ ಚಿನ್ನೇಗೌಡ ಅವರ ಪತ್ನಿ ಜಯಮ್ಮ ಅವರು ಕಳೆದ ಕೆಲ ದಿನಗಳಿಂದ ಅನಾರೋಗ್ಯ ದಿಂದ ಬಳಲುತ್ತಿದ್ದರು.

ಕನ್ನಡ ಚಿತ್ರರಂಗದಲ್ಲಿ ನಿರ್ಮಾಪಕಿಯೂ ಆಗಿದ್ದ ಜಯಮ್ಮ ಅವರು 2008ರಲ್ಲಿ ಫಣಿ ರಾಮಚಂದ್ರ ನಿರ್ದೇಶನದ ಗಣೇಶ ಮತ್ತೆ ಬಂದ ಎಂಬ ಚಿತ್ರವನ್ನು ನಿರ್ಮಿಸಿದ್ದರು. ಆದಾದ ನಂತರ ಪತಿ ಎಸ್.ಎ. ಚಿನ್ನೇಗೌಡ ಅವರೊಂದಿಗೆ 2006ರಲ್ಲಿ ತಮ್ಮ ಪುತ್ರ ವಿಜಯ್ ರಾಘವೇಂದ್ರ ನಾಯಕರಾಗಿ ನಟಿಸಿದ ಸೇವಂತಿ ಸೇವಂತಿ ಎಂಬ ಚಿತ್ರವನ್ನ ನಿರ್ಮಿಸಿದ್ದರು. ರಮ್ಯಾ ನಾಯಕಿಯಾಗಿ ನಟಿಸಿದ್ದ ಆ ಚಿತ್ರ 100 ದಿನಗಳ ಯಶಸ್ವಿ ಪ್ರದರ್ಶನ ಕಂಡಿತ್ತು.



ಏನೇ ಹೇಳು ಕುಸುಮಾ..

ಗ್ರಾಮಾಯಣದ ಐದನೇ ಹಾಡು



ಲಹರಿ ಫಿಲಂಸ್ ನಿರ್ಮಾಣದ ಗ್ರಾಮಾಯಣ ಚಿತ್ರ ಜುಲೈ 3ರಂದು ಬಿಡುಗಡೆಯಾಗಲಿದೆ, ದೇವನೂರು ಚಂದ್ರು ಅವರ ಕಥೆ ಚಿತ್ರಕಥೆ ಹಾಗೂ ನಿರ್ದೇಶನದ ಈ ಚಿತ್ರದಲ್ಲಿ ವಿನಯ್‌ರಾಜಕುಮಾರ್, ಮೇಘಾಶೆಟ್ಟಿ ನಾಯಕ, ನಾಯಕಿಯಾಗಿ ನಟಿಸಿದ್ದಾರೆ, ಇತ್ತೀಚೆಗೆ ಗ್ರಾಮಾಯಣ ಚಿತ್ರದ ಏನೇ ಹೇಳು ಕುಸುಮಾ ಎಂಬ ಹಾಡಿನ ಬಿಡುಗಡೆ ಕಾರ್ಯಕ್ರಮ ನಡೆಯಿತು, ವೇದಿಕೆಯಲ್ಲಿ ನಿರ್ಮಾಪಕ ಲಹರಿವೇಲು ಅವರೇ ಈ ಹಾಡನ್ನು ಬಿಡುಗಡೆ ಮಾಡಿದರು. ಪ್ರಮೋದ್ ಮರವಂತೆ ಅವರ ರಚನೆಯ ಈ ಹಾಡನ್ನು ನಿಹಾಲ್ ತಪ್ಪೂ ಹಾಗೂ ಸಾಕ್ಷಿ ಕಲ್ಯಾಣ್ ಹಾಡಿದ್ದಾರೆ. ಪೂರ್ಣಚಂದ್ರ ತೇಜಸ್ವಿ ಅವರ ಸಂಗೀತದಲ್ಲಿ ಮೂಡಿಬಂದಿರುವ ಈ ಚಿತ್ರದ ಈಗಾಗಲೇ ಎಲ್ಲ 4 ಹಾಡುಗಳೂ ಹಿಟ್‌ಲಿಸ್ಟ್ ಸೇರಿರುವುದು ವಿಶೇಷ.

ನಿರ್ಮಾಪಕ ಲಹರಿ ವೇಲು ಮಾತನಾಡಿ ಗ್ರಾಮಾಯಣ ನಮ್ಮ ಲಹರಿ ಸಂಸ್ಥೆಯ ಒಂದೊಳ್ಳೆ ಚಿತ್ರ. ಒಳ್ಳೆಯ ನಮ್ಮ ಸಂಸ್ಥೆಗೆ ಆದ್ಭುತ ಸಂಸ್ಥೆ. ಸುವರ್ಣ ಸಂಭ್ರಮದಲ್ಲಿರುವ ನಮ್ಮ ಸಂಸ್ಥೆಯಿಂದ ಗ್ರಾಮೀಣ ಸೊಗಡಿನ ಒಂದೊಳ್ಳೆ ಸದಭಿರುಚಿಯ ಚಿತ್ರ ನಿರ್ಮಾಣವಾಗಿರುವುದು ಖುಷಿಯಾಗಿದೆ. ಚಿತ್ರದಲ್ಲಿ ಒಳ್ಳೊಳ್ಳೆ ಹಾಡುಗಳಿವೆ, ಈ ಹಿಂದೆ ಶಿವರಾಜಕುಮಾರ್ ಅವರು ಬಿಡುಗಡೆ ಮಾಡಿದ್ದ ಬೇರೆ ಹಾಡು ಆದ್ಭುತ ಪ್ರತಿಕ್ರಿಯೆ ಪಡೆದು ಹಿಟ್ ಆಗಿದೆ. ಚಿತ್ರ ಜುಲೈ 3ರಂದು ತೆರೆಗೆ ಬರುತ್ತಿರುವ ನಮ್ಮ ಚಿತ್ರಕ್ಕೆ ನಿಮ್ಮೆಲ್ಲರ ಪ್ರೋತ್ಸಾಹವಿರಲಿ ಎಂದರು.

ನಿರ್ದೇಶಕ ದೇವನೂರು ಚಂದ್ರು ಮಾತನಾಡಿ ಗ್ರಾಮಾಯಣ, ಗ್ರಾಮೀಣ ಸೊಗಡಿನ ಸಿನಿಮಾ. ಈವರೆಗೂ ಮಾಡಿರದ ಪಾತ್ರದಲ್ಲಿ ವಿನಯ್ ರಾಜ ಕುಮಾರ್ ಅಭಿನಯಿಸಿದ್ದಾರೆ. ಮೇಘಾ ಶೆಟ್ಟಿ ಅವರದೂ ವಿಭಿನ್ನ ಪಾತ್ರ. ಅಚ್ಯುತಕುಮಾರ್, ಗೋಪಾಲಕೃಷ್ಣ ದೇಶಪಾಂಡೆ, ಅರುಣ್ ಸಾಗರ್, ಬಲ ರಾಜವಾಡಿ, ಅರ್ಜುನ್ ವಸ್ತಾರೆ, ಸೀತಾ ಕೋಟೆ, ಪ್ರಶಾಂತ್ ಹೊಸ್ಮನಿ, ಅವಿನಾಶ್ ರೈ ಹೀಗೆ ಅನುಭವಿ ಕಲಾವಿದರ ದೊಡ್ಡ ತಾರಾಬಳಗವೇ ಇರುವ ಈ ಚಿತ್ರದ ವಿಶೇಷ ಪಾತ್ರದಲ್ಲಿ ಬಾಲನ್ ಮಧು ಯೋಗಿ ಅಭಿನಯಿಸಿದ್ದಾರೆ. ಸಂತೋಷ್ ರೈ ಪಾತಾಜೆ ಅವರ ಛಾಯಾಗ್ರಹಣ ಕೂಡ ಚಿತ್ರಕ್ಕೆ ಪೂರಕವಾಗಿದೆ ಎಂದರು.

ನಾಯಕ ವಿನಯ್ ರಾಜಕುಮಾರ್ ಮಾತನಾಡಿ ಕಲಾವಿದರ ಸಂಭ್ರಮ ಆದರಣೀಯವಾದದ್ದೇ ಅಪ್ಪ, ದೊಡ್ಡಪ್ಪ ಹಾಗೂ ಚಿಕ್ಕಪ್ಪ ಅವರಿಂದ ಈ ಚಿತ್ರಕ್ಕೆ ಚಾಲನೆ ದೊರಕಿತ್ತು. ಈಗ ಇದೇ ಜುಲೈ ನಲ್ಲಿ ಚಿತ್ರದ ಬಿಡುಗಡೆ ದಿನಾಂಕ ಕೂಡ ಘೋಷಣೆಯಾಗಿದೆ. ನಾನು ನಟಿಸಿರುವ ಒಂದೊಳ್ಳೆಯ ಚಿತ್ರವಿದು ಎಂದು ಹೇಳಿದರು. ನಾಯಕ ಮೇಘಾ ಶೆಟ್ಟಿ ಮಾತನಾಡುತ್ತ ಈ ಚಿತ್ರದಲ್ಲಿ ನನ್ನ ಪಾತ್ರದ ಹೆಸರು ಕುಸುಮ. ಇವತ್ತು ನನ್ನ ಪಾತ್ರದ ಮೇಲೆ ರಚಿತವಾಗಿರುವ ಹಾಡು ಬಿಡುಗಡೆಯಾಗಿದೆ. ಹಾಡು ತುಂಬಾ ಚೆನ್ನಾಗಿದೆ ಎಂದು ತಿಳಿಸಿದರು.



ನಿರ್ಮಾಪಕ ನವೀನ್ ಮನೋಹರ್ ಮಾತನಾಡುತ್ತ ನಾನು ಲಹರಿಯ ಚಿತ್ರದಿಂದ ಪೂರ್ಣಚಂದ್ರ ತೇಜಸ್ವಿಯವರವನ್ನು ಇಬ್ಬರೆ ಅವರು ಕನ್ನಡದ ಉತ್ತಮ ಸಂಗೀತ ನಿರ್ದೇಶಕರು. ನಮ್ಮ ಗ್ರಾಮಾಯಣ ಚಿತ್ರದಲ್ಲೂ ಒಂದಕ್ಕಿಂತ ಸುಮಧುರ ಹಾಡುಗಳನ್ನು, ಎಲ್ಲಾ ಹಾಡುಗಳು ಒಂದಕ್ಕಿಂತ ಒಂದು ಚೆನ್ನಾಗಿವೆ. ದೇವನೂರು ಚಂದ್ರು ಅವರ ನಿರ್ದೇಶನ, ತಂತ್ರಜ್ಞರ ಕಾರ್ಯಕ್ಷಮತೆ ಹಾಗೂ ಎಲ್ಲಾ ಕಲಾವಿದರ ಅಭಿನಯ ಚೆನ್ನಾಗಿದೆ ಎಂದು ಹೇಳಿದರು.



Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26